ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೫–೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ"

ನಿಬಂಧಕಾರರು

ವಸಂತ ಹೆಚ್.ಎಸ್.

ನೋಂದಣಿ ಸಂಖ್ಯೆ – KVTM/K 150901030048
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎನ್.ಎಸ್. ಶಂಕರೇಗೌಡ

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೫–೧೬

1264

ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೫-೧೬ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ

"ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ"

ನಿಬಂಧಕಾರರು

ವಸಂತ ಹೆಚ್.ಎಸ್.

ನೋಂದಣಿ ಸಂಖ್ಯೆ – KVTM/K 150901030048
ಕನ್ನಡ ಎಂ.ಫಿಲ್ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ, ಮೈಸೂರು

ಮಾರ್ಗದರ್ಶಕರು

ಡಾ. ಎಸ್.ಎಸ್. ಶಂಕರೇಗೌಡ

ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

೨೦೧೫-೧೬

ಪರಿವಿಡಿ

ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ

*****

<u>ಮಾರ್ಗದರ್ಶಕರ ಪ್ರಮಾಣಪತ್ರ</u>

೨೦೧೫-೧೬ನೆಯ ಸಾಲಿನಲ್ಲಿ ಕ್ರಮ ಸಂಖ್ಯೆ: KVTM/K 150901030048ರ ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ವಿದ್ಯಾರ್ಥಿಯಾದ **ವಸಂತ ಹೆಚ್.ಎಸ್.** ಅವರು ನನ್ನ ಮಾರ್ಗದರ್ಶನದಲ್ಲಿ **"ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ"** ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್ ಪದವಿಗಾಗಿ ರಚಿಸಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಈ ನಿಬಂಧವನ್ನು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಳಿಗಾಗಿ ಯಾವ ವಿಶ್ವವಿದ್ಯಾಲಯಕ್ಕೂ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಮೈಸೂರು
ದಿನಾಂಕ: ೧೪-೦೭-೨೦೧೬

ಡಾ. ಎಸ್.ಎಚ್. ಶಂಕರೇಗೌಡ,
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಮಹಾರಾಣಿ ಮಹಿಳಾ ಕಲಾ ಕಾಲೇಜು
ಮೈಸೂರು

ಅಭ್ಯರ್ಥಿಯ ಘೋಷಣಾ ಪತ್ರ

"ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ" ಎಂಬ ಶೀರ್ಷಿಕೆಯ ಈ ನಿಬಂಧವನ್ನು ಹಂಪಿ ವಿಶ್ವವಿದ್ಯಾಲಯದ ಕನ್ನಡ ಎಂ.ಫಿಲ್ ಪದವಿಯ ಕ್ರಮ ಸಂಖ್ಯೆ: KVTM/K 150901030048ರ ವಿದ್ಯಾರ್ಥಿಯಾದ ನಾನು ೨೦೧೫-೧೬ನೆಯ ಸಾಲಿನ ಪರೀಕ್ಷೆಗಾಗಿ **ಡಾ. ಎನ್.ಎಸ್. ಶಂಕರೇಗೌಡ, ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು** ಇವರ ಸೂಕ್ತ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಪ್ರಸುತ ನಿಬಂಧವನ್ನು ಈ ಹಿಂದೆ ಈ ವಿಶ್ವವಿದ್ಯಾಲಯಕ್ಕೆ ಅಥವಾ ಬೇರೆ ಯಾವುದೇ ವಿಶ್ವವಿದ್ಯಾಲಯಗಳ ಪದವಿ, ಡಿಪ್ಲೊಮಾ ಅಥವಾ ಯಾವುದೇ ತತ್ಸಮಾನ ಪರೀಕ್ಷೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Vasantha H.S

ಮೈಸೂರು
ದಿನಾಂಕ: ೧೪-೦೭-೨೦೧೬

(ವಸಂತ ಹೆಚ್.ಎಸ್)
೨೦೧೫-೧೬ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

"ಜನವಾಣಿ ಬೇರು – ಕವಿವಾಣಿ ಹೂ" ಎಂಬ ನಾನ್ನುಡಿಯಂತೆ ಮಾನವಿಕ ವಿಷಯಗಳಲ್ಲಿ ಜಾನಪದವು ಅತ್ಯಂತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಜಾನಪದ ಕಥೆಗಳು, ಗೀತೆಗಳು, ಗಾದೆಗಳು– ತ್ರಿಪದಿಗಳು, ಐತಿಹ್ಯಗಳು, ಲಾವಣಿಗಳು, ಪುರಾಣಗಳು, ಮೌಖಿಕ ಪರಂಪರೆ, ಸಂಪ್ರದಾಯ ನಂಬಿಕೆ ಆಚರಣೆಗಳು ಮನೋವಿಜ್ಞಾನ ಇವುಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ವಸ್ತು ವಿಷಯವನ್ನು ಒದಗಿಸಿದೆ. ಜಾನಪದ ಸಾಹಿತ್ಯ ಜನರ ಬಾಯಿಂದ ಬಾಯಿಗೆ ನಿರಂತರವಾಗಿ ಹರಿದುಬಂದಿದೆ. ಮಾನವನ ಸರ್ವತೋಮುಖವಾದ ಜೀವನ ನಿರ್ವಹಣೆಯೇ ಜನಪದ. ಈ ರೀತಿನೀತಿಗಳಿಗೆ ಒಳಗಾಗಿ ಸಾಗುವಂತಹದ್ದು. ಮಾನವನು ಸಮಾಜದಲ್ಲಿ ನೆಮ್ಮದಿಯ ಜೀವನ ನಡೆಸಲು ಕೆಲವು ಸಂಪ್ರದಾಯಗಳ ಗಡಿಯನ್ನು ತಾನೇ ಕಟ್ಟಿಕೊಂಡು ನೈತಿಕ ನಡವಳಿಕೆಗಳು ಅವನ ಬದುಕನ್ನು ನಿರ್ದೇಶಿಸುತ್ತಿದ್ದವು. ಇತ್ತೀಚಿನ ವೈಜ್ಞಾನಿಕ ನಾಗರಿಕತೆಯ ಹಾಗೂ ಎಲ್ಲಾ ಅರ್ವಾಚೀನಾ ಕತೆಗಳ ತಾಯಿಬೇರುಗಳನ್ನು ಪ್ರಾಚೀನ ಜಾನಪದದಲ್ಲಿ ಗುರುತಿಸಬಹುದಾಗಿದೆ. ಜಾನಪದ ಸಾಹಿತ್ಯ ಕೇವಲ ಒಬ್ಬ ವ್ಯಕ್ತಿಯಿಂದ ಸೃಷ್ಟಿಯಾದುದ್ದಲ್ಲ. ಸಮಾಜದಲ್ಲಿನ ಸಮಷ್ಠಿ ಜನರ ಪ್ರತಿಭೆಯ ರೂಪ ಯಾವುದೋ ಕಾಲಘಟ್ಟದಲ್ಲಿ, ಸೃಷ್ಟಿಯಾಗಿ ಕಥೆ, ಗೀತೆ, ಗಾದೆ, ಲಾವಣಿಗಳು, ಗಾದೆಗಳು ತ್ರಿಪದಿಗಳ ಮೂಲಕ ಜನರ ಬಾಯಿಂದ ಬಾಯಿಗೆ ಹರಿದಾಡುತ್ತಿದ್ದ ಜಾನಪದ ಪ್ರಕಾರ ಇಂದುಜಾಗತಿಕ ಸಾಹಿತ್ಯಕ್ಕೆ ಆಕರವಾಗಿ ಕಾರ್ಯನಿರ್ವಹಿಸುವಷ್ಟು ಸಮರ್ಥವಾಗಿದೆ.

ಭಾರತದ ಜಾನಪದ ಅಧ್ಯಯನ ಹಾಗೂ ಅದರ ಮಹತ್ವವನ್ನು ಮೊದಲಿಗೆ ಪರಿಚಯಿಸಿದವರು ಪಾಶ್ಚಾತ್ಯರು. ಮೊದಲನೆಯದಾಗಿ, ಆಡಳಿತಾತ್ಮಕ ಕಾರಣಕ್ಕಾಗಿ ಸ್ಥಳೀಯ ಜನರ ಭಾಷೆ, ರೀತಿ ನಡವಳಿಕೆ ಮುಂತಾದ ಸಂಗತಿಗಳನ್ನು ಅವರು ಅರ್ಥಮಾಡಿಕೊಳ್ಳಬೇಕಾಯಿತು. ಎರಡನೆಯದಾಗಿ, ಧರ್ಮಪ್ರಚಾರಕ್ಕೆ ಬಂದ, ಮಿಷನರಿಗಳು ಸ್ಥಳೀಯರ ಮತ ಆಚರಣೆಗಳ ಗುಣ ಮತ್ತು ಲೋಪದೋಷಗಳನ್ನು ತಿಳಿಯಲು ಅಧ್ಯಯನಗಳನ್ನು ಆರಂಭಿಸಿದರು. ಸ್ಥಳೀಯ ಜನರ ವಿಶ್ವಾಸಗಳಿಗೆ ಇದು ಅಗತ್ಯವೂ, ಅನಿವಾರ್ಯವೂ ಆಗಿತ್ತು. ಬಾಷೆಲ್ ಮಿಷನ್ ಜನರ ವಿಶ್ವಾಸ ಗಳಿಸಲೂ ಇಂತಹ ಮಾರ್ಗವನ್ನೇ ಅನುಸರಿಸಿತೆಂಬುದು ತಿಳಿದಿದೆ. ಮೂರನೆಯದಾಗಿ ಧರ್ಮಪ್ರಚಾರಕ್ಕಾಗಿ ಬಂದ ಪಾದ್ರಿಗಳು ಸ್ಥಳೀಯ ಜನರ ಭಾಷೆ–ರೀತಿ, ರಿವಾಜುಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರು. ಈ ನಿಟ್ಟಿನಲ್ಲಿ "ಅಬೇದು ಬೇಯ್". ಅವರು ಈ ಬಗೆಯ

ಅಧ್ಯಯನವನ್ನು ಕೈಗೊಂಡು "ಹಿಂದೂ ಮ್ಯಾನರ್ಸ್" "ಕಸ್ಟಮ್ಸ್ ಅಂಡ್ ಸೆರಮನಿಸ್" ಎಂಬ ಕೃತಿಯನ್ನು ರಚಿಸಿದರು. ಜನಪದ ಅಧ್ಯಯನವು ತುಂಬ ಅಗತ್ಯವಾಗಿದೆ. ಈ ಅಧ್ಯಯನವು ನಿರ್ದಿಷ್ಟ ವ್ಯಾಪ್ತಿಯನ್ನು ಹೊಂದಿದ್ದು, ಜಾನಪದ ಕೆಲವು ಗ್ರಹಿಕೆಗಳು ಬಯಲಾಟದ ಪ್ರಾಚೀನತೆ ಮರುಚಿಂತನೆ. ಜಾನಪದ ಮುನ್ನೋಟ, ಕನ್ನಡ ಜನಪದ ಗೀತೆಗಳು, ಕರ್ನಾಟಕ ಜಾನಪದ ಪತ್ರಿಕೆಗಳು, ಪಾರ್ತಿಸುಬ್ಬು ಯಕ್ಷಗಾನ ವಸ್ತುವಿನ್ಯಾಸ, ಜಾನಪದ ಸಂಚಯ ಬಯಲಾಟದ ವೇಷಭೂಷಣಗಳು ಬಯಲಾಟದ ಕೆಲವು ಸ್ವಾರಸ್ಯ ಘಟನೆಗಳು. ಜನಪದ ಗೀತಾ ಪ್ರಕಾರಗಳು ಜನಪದ ಮತ್ತು ಸಂಗ್ರಹಾಲಯ ಚಿಂತನಾ–ಚಿತ್ತಾರ ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ ಜನಪದ ನಾಟಕಗಳ ಮೂಲ. ಕರ್ನಾಟಕ ಜನಪದ ರಂಗಭೂಮಿ, ಮೂಡಲಪಾಯ, ಯಕ್ಷಗಾನ ಬಯಲಾಟ, ಸೂತ್ರದ ಗೊಂಬೆಯಾಟ, ಬೆದರುಗೊಂಬೆ ಮತ್ತು ಇತರೆ ಕಥೆಗಳು, ನಸುನಗೆಯ ಅಲೆಗಳು, ಜಾನಪದ ಸಂಪದ, ಅಪೂರ್ವಸಂಕಲನ, ಕರ್ನಾಟಕ ಜನಪದ ಕಲೆಗಳು, ಸ್ತುತಿಗೀತೆಗಳು ಮತ್ತು ಲಾಲೀಯ ಪದಗಳು, ಶಿಶುಪ್ರಾಸಗಳು, ಮಾನೌಮಿಪದಗಳು, ಮಳೆರಾಯನ ಹಾಡುಗಳು. ಹೀಗೆ ಕೃತಿಗಳನ್ನು ಈ ನಿಬಂಧದ ಮಿತಿಯಲ್ಲಿ ವಸ್ತುನಿಷ್ಠವಾಗಿ ತಾತ್ವಿಕತೆಯನ್ನು ಶೋಧಿಸುವುದು ಇಲ್ಲಿನ ಪ್ರಧಾನ ಉದ್ದೇಶವಾಗಿದೆ.

*****

ಅಧ್ಯಾಯ - ೨

ಡಿ.ಕೆ. ರಾಜೇಂದ್ರ ಅವರ ಬದುಕು ಮತ್ತು ಬರಹ

ಪ್ರೊ. ಡಿ.ಕೆ. ರಾಜೇಂದ್ರ ಅವರ ವಿಷಯವನ್ನು ಮಾತನಾಡುವುದೇ ಒಂದು ಅಪ್ಯಾಯಮಾನವಾದ ಸಂಗತಿ. ಇನ್ನೂ ಬರೆಯುವುದೆಂದರೆ ರೋಮಾಂಚನ; ಕಾರಣ ಅವರ ಗುಣವೇ ಅಂಥದ್ದು. ಸಮತೋಲನಕ್ಕೆ ಹೆಸರಾದದ್ದು. ಯಾವ ಸಂದರ್ಭದ್ದಲ್ಲೂ ಹಿಗ್ಗುವ ಕುಗ್ಗುವವರಲ್ಲ. ಯಾವುದೇ ಸಂದರ್ಭದಲ್ಲಿ, ಸ್ಥಿತಪ್ರಜ್ಞರಾಗಿ ಎಲ್ಲ ಕಾಲಕ್ಕೂ ಹೊಂದಿಕೊಳ್ಳುವ ಒಗ್ಗಿಸಿಕೊಳ್ಳುವ ವಿಷಯ ಸಮಯದಲ್ಲೂ ಸರಸಿಯಾಗುವ ಇವರ ನಡತೆ ಎಲ್ಲರಿಗೂ ಅಚ್ಚುಮೆಚ್ಚು, ತಮ್ಮ ಕಾಯಕ ಶ್ರದ್ದೆಯಲ್ಲಿ, ಕಿಂಚಿತ್ತೂ ಲೋಪಬಾರದಂತೆ ಆಂತರ್ಯದ ಪ್ರಕ್ರಿಯೆಯಲ್ಲಿ ಸದಾ ಕ್ರಿಯಾಶೀಲರು. ಮಾನವ ಒಳತೋಟಿಗಳ ವಿಕಾರವನ್ನು ನುಂಗಿ ಅರಗಿಸಿಕೊಳ್ಳುವವರೇ ವಿನಹ ಎಂದು ಆಡಿ ಬಯಲು ಮಾಡುವವರಲ್ಲ. ರಗಳೆಗಳಿಗೆ ಆಸ್ಪದಕೊಡುವ ಜಾಯಮಾನ ಇವರದಲ್ಲ.

ಅಂತಹವರಿಗೆ ಅತಿಕಾಲ ಇದಾಗಿದ್ದರೂ ಜೊಳ್ಳುಗಟ್ಟಿಯ ಬಗೆಗೆ ಅವರಿಗೆ ಅಪಾರವಾದ ಅರಿವಿದೆ. ವಿಶ್ಲೇಷಣೆಯ ಅಂತರ್‌ಶಿಸ್ತೀಯ ಮನವಿದೆ. ಸದಾ ಹಸನ್ಮುಖರಾಗಿ ಪ್ರತಿಯೊಬ್ಬರು ಇವರ ಸಾನಿಧ್ಯವನ್ನು ಬಯಸುವ ವ್ಯಕ್ತಿಯಾಗಿಯೇ ಅರವತ್ತರ ಗಡಿಯಲ್ಲೂ ಉಳಿದಿದ್ದಾರೆ. ಯಾವ ಮಾತು ಅನ್ಯರ ಮನಸ್ಸನ್ನು ಘಾಸಿಗೊಳಿಸಿತೋ ಎಂಬ ಕಟ್ಟೇಚರದ ಮೃದುನುಡಿ. ಹಿತಶತ್ರುಗಳನ್ನು ಗುರುತಿಸಿಯೂ ಮುಖಸಿಂಡರಿಸಿದ ಸೌಜನ್ಯ ಎಲ್ಲರೊಡನೆ ಎಲ್ಲಾ ಕಾಲದಲ್ಲೂ ನಗುವನ್ನೇ ನಿಗಧಿಸುವ ಪ್ರವೃತ್ತಿ ಬಾರಾದ್ದಕ್ಕೆ ಬಾಯ್ಬಿಡದೆ, ಬಂದದ್ದರಲ್ಲಿ ಬೆಳಕು ಕಾಣುವ ಭರವಸೆ ಪಂಥ. ಪಂಗಡಗಳಾಚೆ ನಿಂತು ಸಮಹಿತಕಾಯ್ದುಕೊಳ್ಳುವ ತುಡಿತ. ನಂಬಿದ ನರಕ ನಡೆದ ಸ್ವಭಾವ ಹಮ್ಮು-ಬಿಮ್ಮುಗಳನ್ನು ಬಿಟ್ಟು ಮುಗ್ಧತೆಯನ್ನೇ ಸಂಪನ್ಮೂಲವಾಗಿಸಿಕೊಂಡು ಸಂಸಾರ ಬದುಕ್ಕೊಂದು ಸುಂದರ ಕುಸುಮ ಎಂದು ಜೀವನ ನಡೆಸಿದರು.

ಸಂಸಾರದ ಒಂದೊಂದು ಎಸಳನ್ನು ಸುಗಂಧ ಚೆಲ್ಲುತ್ತ, ಪರಿಸರವನ್ನು ಪರಿಮಳದಿಂದ ತುಂಬಿ ಗಮಗಮಿಸುವಂತೆ ಬಾಳಬೇಕೆಂಬ ಬಯಕೆ ಇವರದು. ತನ್ನಂತೆಯೇ ಇತರರನ್ನು ಬದುಕುಲು ಬಿಡಬೇಕು. ತನ್ನ ಸ್ವಾರ್ಥಕ್ಕಾಗಿ ಮತ್ತೊಬ್ಬರ ಬದುಕನ್ನು ಬಲಿಕೊಡಬಾರದೆಂಬ ಹೃದಯವಂತಿಕೆ ಇವರದು. ಹಾಸಿಗೆ ಇದ್ದಷ್ಟಕ್ಕೆ ಕಾಲುಚಾಚುವ ಮನಃಸ್ಥಿತಿ. ಒಟ್ಟಾರೆ ಸಾಜಾ ಬದುಕಿನ ಸಜ್ಜನಿಕೆಯ ಅಪ್ಪಟ ವ್ಯಕ್ತಿತ್ವ ಪ್ರೊ. ಡಿ.ಕೆ.ರಾಜೇಂದ್ರ ಅವರದು;

ಡಿ.ಕೆ. ರಾಜೇಂದ್ರರವರು ಜನಿಸಿದ್ದು, ಸ್ವಾತಂತ್ರ್ಯಪೂರ್ವದಲ್ಲಿ ಅಂದರೆ ೧೯೪೨ರಲ್ಲಿ ಏಪ್ರಿಲ್ ಹದಿಮೂರರಂದು ತುಮಕೂರುಜಿಲ್ಲೆ, ತುರುವೆಕೆರೆ ತಾಲ್ಲೂಕಿನ "ದಂಡಿಶಿವರ ಎಂಬ ಹಳ್ಳಿಯಲ್ಲಿ ಜನಿಸಿದರು. ತುರುವೆಕೆರೆ ತುಮಕೂರು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂದು ಅದು. ತಾಲೂಕು ಕೇಂದ್ರವು ಹೌದು. ಪೌರಾಣಿಕವಾದ ಹಾಗೂ ಐತಿಹಾಸಿಕವಾದ ಮಹತ್ವವೂ ಈ ತಾಲೋಕಾಗಿದೆ. ತುರುವೆ ಕೆರೆಗೆ ಸೇರಿದ ಕಸಬಾ ಹೋಬಳಿಯೇ ದಂಡಿಶಿವರ, ಇದೂ ಐತಿಹಾಸಿಕ ಮಹತ್ವದ ಸ್ಥಳವಾಗಿದೆ. ಒಂದು ಕಾಲಕ್ಕೆ ತೀರಾ ಹಿಂದುಳಿದಿದ್ದ ಈ ಗ್ರಾಮ. ಸೀಮೆಂಟ್ ಕಾರ್ಖಾನೆ ಕಾಲಿಟ್ಟ ನಂತರ ನಾಗರಿಕತೆಯ ಸೌಲಭ್ಯಗಳೊಡನೆ ಬೆಳೆಯಿತು. ಮೂಲ ಸಂಸ್ಕೃತಿ ಮುಸುಕಾಯಿತು. ಡಿ.ಕೆ.ರಾಜೇಂದ್ರರವರ ತಂದೆಯ ಹೆಸರು "ಕೆಂಪಲಿಂಗೇಗೌಡ, ತಾಯಿ ಗೌರಮ್ಮ. ಸತ್ತು ಉಳಿದ ಎಂಟು ಮಂದಿಯಲ್ಲಿ ಡಿ.ಕೆ.ರಾಜೇಂದ್ರ ಕೊನೆಯವರು. ಮೊದಲು ಐದು ಮಂದಿ ಅಕ್ಕಂದಿರು ನಂತರ ಮೂವರು ಗಂಡುಮಕ್ಕಳು. ಇವರದು ತುಂಬಾ ದೊಡ್ಡ ಮನೆತನ.

ಇವರ ತಂದೆ ಹೇಗೋ ಆಗಿನ ಕಾಲಕ್ಕೆ ಅಕ್ಷರ ಕಲಿತು ಸರ್ಕಾರಿ ಸೇವೆ ಸೇರಿದ್ದರು. ಸುಮಾರು ಏಳು ವರ್ಷದ ಹುಡುಗನಾಗಿದ್ದಾಗ ತಂದೆಯನ್ನು ಕಳೆದುಕೊಂಡು ಇವರು ಕಂಗಾಲಾದದ್ದು. ದೊಡ್ಡಪ್ಪನ ಅಸಹಕಾರ ಕಂಡು ಅವರ ನೆರವಿಗೆ ಬಂದವರು ಹಿರಿಯಕ್ಕನ ಯಜಮಾನರಾದ ಎಚ್.ಬೊಮ್ಮಯ್ಯನವರು. ವೃತ್ತಿಯಲ್ಲಿ ಸಹಾಯಕ ಕಮೀಷನರ್ ಆಗಿದ್ದ ಇವರು ಡಿ.ಕೆ. ರಾಜೇಂದ್ರರವರ ಪಾಲಿಗೆ ದೊಡ್ಡ ಭಾವ ಮಾತ್ರ ಆಗಿರಲಿಲ್ಲ. ಅವರ ಭವಿಷ್ಯದ ರೂವಾರಿ ಆಗಿದ್ದರು. ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣದ ಬಹುಭಾಗವನ್ನು ದಂಡಿನಶಿವರದಲ್ಲಿ ಪೂರೈಸಿದರು. ರಾಜೇಂದ್ರ ಅವರು ಮುಂದಿನ ವಿದ್ಯಾಭ್ಯಾಸಕ್ಕೆ ಅಕ್ಕ ಭಾವನನ್ನು ಸೇರಿಕೊಂಡರು. ಭಾವ ವರ್ಗವಾಗಿ ಹೋದಲೆಲ್ಲಾ ಇವರು ಹಿಂಬಾಲಿಸುವುದು ಅನಿವಾರ್ಯವಾಯಿತು. ಹೀಗಾಗಿ ಮುಂದಿನ ಓದು ಒಂದು ಬಗೆಯ ಅಲೆಮಾರಿತನದ್ದಾಯಿತು. ಪ್ರಾಥಮಿಕ ಶಾಲೆಯನ್ನು ನೆನಪಿಸಿಕೊಂಡಾಗಲೆಲ್ಲ ರಾಜೇಂದ್ರರವರಿಗೆ ಒಂದಂಕಣದ ಪುಟ್ಟಶಾಲೆಗಿಂತ ತಮ್ಮ ಹಳ್ಳಿಯ ಮನೆ ಐವತ್ತುಪಟ್ಟು ದೊಡ್ಡದಾಗಿದ್ದುದ್ದು ನೆನಪಿಗೆ ಬರುತ್ತದೆ. ದೊಡ್ಡ ಮನೆಯ ಹುಡುಗ ಎಂಬ ಕಾರಣಕ್ಕಾಗಿ ಅವರಿಗೆ ಶಾಲೆಯಲ್ಲಿ ವಿಶೇಷವಾದ ಮನ್ನಣೆ ಗೌರವ ಲಭಿಸಿದ್ದವು. ಶಿಕ್ಷಣದ ಕಾರಣಕ್ಕಾಗಿಯೇ ಬಾಲ್ಯದಲ್ಲಿಯೇ ಊರಿನ ಸಂಪರ್ಕ ಕಡಿದುಕೊಂಡರು ನೆನಪು ಮಾತ್ರ ಸದಾ ಹಸಿರಾಗೆ ಇದೆ ಎಂಬುದು ಗಮನಾರ್ಹವಾದುದು. ಊರಿನ ಹೊನ್ನಾದೇವಿ ದೇವಸ್ಥಾನ. ಅದರ ಮುಂದಿನ ದೊಡ್ಡ ಬೀದಿ, ವರ್ಷಕ್ಕೊಮ್ಮೆ ಅಲ್ಲಿ ಜರುಗುವ ಜಾತ್ರೆ ಆ ಸಂದರ್ಭದಲ್ಲಿ ಸೇರುತ್ತಿದ್ದ ಜನಗಳ ಪರುಷೆ ಇವೆಲ್ಲ ಎಳೆವಯಸ್ಸಿನ

ರಾಜೇಂದ್ರ ಅವರ ಮನಸ್ಸನ್ನು ಅಪಹರಿಸುತ್ತಿದ್ದವು. ಜಾತ್ರೆ ಕಾಲದಲ್ಲಿ ಊರಿಗೆ ಬರುತ್ತಿದ್ದ ಟೆಂಟ್ ಸಿನಿಮಾ ಅಂತೋ ಅವರ ಆಕರ್ಷಣೆ ಕೇಂದ್ರವಾಗಿತ್ತು. ಮನರಂಜನೆಗಾಗಿ ಹೊನ್ನಾದೇವಿ ಜಾತ್ರೆಯ ಉತ್ಸವದ ಆಚರಣೆಗಳು, ದೊಡ್ಡ ತೇರು, ಅದರ ವೈಭವ, ಜಾತಿಮತ ಪಂಗಡಗಳನ್ನು ಮರೆತು ಒಟ್ಟಾಗಿ ಬೆರೆತು ಜನಪಡುತ್ತಿದ್ದ ಸಂಭ್ರಮ, ಇವೆಲ್ಲ ಆಗಾಗ ನೆನಪಾಗಿ ಅವರನ್ನು ಕಾಡುವುದುಂಟು. ಊರಿನ ಸಂಪರ್ಕ, ತಪ್ಪಿದರೂ ಸಂಬಂಧ ಹೀಗೆ. ನೆನಪಿನ ಹೊತ್ತು, ಹೃದಯದಲ್ಲಿ, ನೆಲೆಯಾಗಿ ಅನುಭವದ ಕಣಜ ರೂಪುಗೊಂಡದ್ದು ಅರ್ಥಪೂರ್ಣವಾದುದು.

ಶಾಲೆಯ ಯಾವುದೇ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಚಿಕ್ಕಂದಿನಿಂದಲೂ ರಾಜೇಂದ್ರ ಅವರಿಗೆ ಒಂದು ಬಗೆಯ ಸಂಕೋಚ ಪ್ರವೃತ್ತಿ. ಈ ಸಂಕೋಚ ಪ್ರವೃತ್ತಿ ಅವರ ಜನ್ಮಕ್ಕಂಟಿದ ಜಾಡ್ಯವಾಯಿತು. ಊರಿನಲ್ಲಿ ಅರ್ಧಂಬರ್ಧ ಮುಗಿಸಿದ್ದ ಮಾಧ್ಯಮಿಕ ಶಾಲಾ ಓದು ಪೂರ್ಣಗೊಂಡಿದ್ದು, ಬೆಂಗಳೂರಿನಲ್ಲಿ. ಪ್ರೌಢಶಾಲೆಯ ಓದಂತೋ ಹಾಸನ ಜಿಲ್ಲೆಯ ಅರಕಲಗೂಡು. ಅಲ್ಲಿಂದ ತುಮಕೂರು ಜಿಲ್ಲೆಯ ಬರಾಕ್ಕೆ ಜೂಜಾಟದಂತೆ ಜರುಗಿತು. ಮೊದಲೇ ತಿಳಿಸಿದಂತೆ ಅವರ ಭಾವನವರು ಅಮಲ್ದಾರರಾಗಿ ಈ ಊರಿಗೆ ವರ್ಗಾವಣೆಗೊಂಡದ್ದು ಹೀಗಾಗಲು ಕಾರಣವಾಯಿತು. ವಿದ್ಯಾರ್ಥಿದಿಸೆಯಲ್ಲಿ ಹಾಸ್ಟೆಲ್ ಜೀವನ ಬಹಳ ಮಂದಿಗೆ ದಕ್ಕುವಂಥದ್ದಲ್ಲ. ರಾಜೇಂದ್ರ ಅವರಿಗೆ ಅದು ಪಿಯುಸಿ ಓದಿಗೆ ಲಭ್ಯವಾಯಿತು. ತುಮಕೂರಿನಲ್ಲಿ ಪಿಯುಸಿ ವಿದ್ಯಾಭ್ಯಾಸ ಆರಂಬಿಸಿ ಇವರು ತನ್ನ ಜೊತೆಯಲ್ಲಿ ಪ್ರಥಮ ಬಿಎಸ್.ಸಿ ಓದುತ್ತಿದ್ದ. ಎರಡನೇಯ ಅಣ್ಣನನ್ನು ಸೇರಿಕೊಂಡು ಒಂದೇ ಕೊಠಡಿಯಲ್ಲಿದ್ದರು. ಇವರಿಬ್ಬರ ಜೊತೆಯಲ್ಲಿಯೇ ಇನ್ನಿಬ್ಬರಿಗೆ ಅವಕಾಶವಿತ್ತು. ಆ ಕಾಲಕ್ಕೇ ತುಮಕೂರಿನ ಒಕ್ಕಲಿಗೆ ಹಾಸ್ಟೇಲ್. ಅನೇಕ ಸಾಧನೆಗಳ ಮೂಲ ಹೆಸರುವಾಸಿಯಾಗಿತ್ತು. ಆದರೆ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಸೌಕರ್ಯ ಒದಗಿಸುವುದು ಕಷ್ಟವಾಗಿತ್ತು. ೨೫-೩೦ ರೂಪಾಯಿ. ಹಾಸ್ಟೆಲ್ ಬಿಲ್ ಉಳಿಸಿ ಸಿನಿಮಾ, ನಾಟಕ ನೋಡುವ ಪ್ರಯತ್ನಗಳು ವಿದ್ಯಾರ್ಥಿಗಳಿಂದ ನಡೆಯುತ್ತಿದ್ದವು. ರಾಜೇಂದ್ರ ಅವರು ಪಿಯುಸಿ ವಿದ್ಯಾರ್ಥಿಯಾಗಿದ್ದ ವೇಳೆಗೆ "ಹವಾಯ್ ಚಪ್ಪಲಿಗಳು, ಬಳಕೆಗೆ ಬಂದವು. ವಾಸ್ತವವಾಗಿ ಬಾತ್‌ರೂಂ ಚಪ್ಪಲ್' ಎಂಬ ಹೆಸರಿನಲ್ಲಿ ಅದರ ಉಪಯೋಗಕ್ಕೆಂದೇ ನಿರ್ಮಿಸಲ್ಪಟ್ಟ ಈ ಚಪ್ಪಲಿಗಳು ಕ್ರಮೇಣ ಎಲ್ಲರ ಪಾದಗಳನ್ನು ಅಲಂಕರಿಸಿಕೊಂಡವು. ರಾಜೇಂದ್ರರು ಒಂದು ಜೊತೆ ಹವಾಯ್ ಚಪ್ಪಲಿ ಬಳಸಿದರು. ಇವರು ಪಿಯುಸಿ ಮುಗಿಸುವ ವೇಳೆಗೆ ಅವರ ಭಾವನವರನ್ನು ಸಹಾಯಕ ಆಯುಕ್ತರಾಗಿ ಹಾಸನಕ್ಕೆ ವರ್ಗಾಯಿಸಲಾಯಿತು.

ಹಾಸ್ಟೆಲ್ ಜೀವನಕ್ಕೆ ವಿದಾಯ ಹೇಳಿ ಇವರು ಹಾಸನಕ್ಕೆ ತೆರಳಿ ಅಲ್ಲಿನ ಪ್ರಥಮ ದರ್ಜೆ ಕಾಲೇಜಿನಲ್ಲಿ ಬಿ.ಎ.ಗೆ ಪ್ರವೇಶ ಪಡೆದರು.

ಬಿ.ಎ. ಪದವಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ಓದುವ ಇವರ ಆಸೆಗೆ ಪ್ರಾರಂಭದಲ್ಲಿ ದೊಡ್ಡ ಪೆಟ್ಟು ಬಿತ್ತು. ಕಾಲೇಜಿನ ಪ್ರಾಂಶುಪಾಲರು ಇವರ ಮತ್ತು ಇವರ ಗೆಳೆಯರ ಆಸೆಗಳಿಗೆ ಅಡ್ಡಗೋಡೆಯಾಗಿ ನಿಂತರು. ಅವಕಾಶ ಒದಗಿಸಲು ನಿರಾಕರಿಸಿದರು. ಆಗ ಕನ್ನಡದ ಶೈಕ್ಷಣಿಕ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸುತ್ತಿದ್ದವರು. ಪ್ರೊ.ದೇಜಗೌ ಅವರು. ವಿಷಯವನ್ನು ಪೂರ್ವಭಾವಿಯಾಗಿ ತಿಳಿಸಿ ಅವರನ್ನ ನಿಮ್ಮ ಕಾಲೇಜಿನ ಯಾವುದಾದರೂ ಸಮಾರಂಭದ ನೆಪದಲ್ಲಿ ಕರೆಸಿ, ಅವರಿಂದ ಪ್ರಾಂಶುಪಾಲರಿಗೆ ಹೇಳಿಸಿದರೆ ನಿಮ್ಮ ಆಸೆ ಈಡೇರುತ್ತದೆ ಎಂದು. ಯಾರೋ ಉಪಾಯ ಹೇಳಿಕೊಟ್ಟರಂತೆ. ಅದರಮತೆ ಕಾರ್ಯತಂತ್ರ ರೂಪಿಸಿ ಯಶಸ್ವಿಯಾದದ್ದು. ರಾಜೇಂದ್ರ ಅವರ ವಿದ್ಯಾರ್ಥಿ ಜೀವನದ ದೊಡ್ಡ ಸಾಧನೆಯಾಗಿದೆ.

ಬಿ.ಎ. ಪದವಿ ಮುಗಿಯುತ್ತಿದ್ದಂತೆ ರಾಜೇಂದ್ರ ಅವರಿಗೆ ಹಾಸನ ಜಿಲ್ಲೆಯ ದುದ್ದ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಸಿಕ್ಕಿತು. ಒಂದು ವರ್ಷ ಅಧ್ಯಾಪಕ ವೃತ್ತಿ ಮಾಡಿದರು. ಗಂಗೋತ್ರಿಯನ್ನು ಒಮ್ಮೆ ಕಂಡಿದ್ದರ ಫಲವೋ ಏನೋ ಕನ್ನಡ ಎಂ.ಎ ಯಾಕೇ ಮಾಡಬಾರದು ಎಂಬ ಆಲೋಚನೆ ರಾಜೇಂದ್ರರವರ ತಲೆಗೆ ಹೊಕ್ಕಿತು. ಸ್ನೇಹಿತರೆಲ್ಲರು ಒತ್ತಾಯಿಸಿದರು. ಅನಂತರದ ಎರಡು ವರ್ಷಗಳ ಸ್ನಾತಕೋತ್ತರ ಅಧ್ಯಯನದ ವಿದ್ಯಾರ್ಥಿ ಜೀವನ ಬದುಕಿನ ದಿಕ್ಕು ದೆಸೆಯನ್ನೇ ಬದಲಾಯಿಸಿತು. ದೇಜಗೌ ಆಗ ಪ್ರಾಧ್ಯಾಪಕರು ಮಾತ್ರವಲ್ಲ ಕನ್ನಡ ಅಧ್ಯಯನ ಸಂಸ್ಥೆಯ ಸಂಸ್ಥಾಪಕ, ನಿರ್ದೇಶಕರು ಆಗಿದ್ದರು. ಕನ್ನಡ ಎಂ.ಎ. ಓದಿದವರ ಪಾಲಿಗಂತೂ ಕೆಲಸದ ವರಕೊಡುವ ಕಾಮಧೇನು ಆಗಿದ್ದರು. ನಂತರ ರಾಜೇಂದ್ರ ಅವರನ್ನು ಅಧ್ಯಯನ ಸಂಸ್ಥೆಯ ಸಂಶೋಧನ ಸಹಾಯಕ ಹುದ್ದೆಗೆ ನೇಮಿಸಿದರು. ಅಲ್ಲಿಂದ ನಿರಂತರವಾಗಿ ಸಂಸ್ಥೆಯ ಒಡನಾಟ ಇವರ ಬದುಕಿನ ಅವಿಭಾಜ್ಯ ಅಂಗವಾಯಿತು. ಏಳಿಗೆಯ ಸೋಪಾನವಾಯಿತು. ಸಂಶೋಧನಾ ಸಹಾಯಕರಾಗಿ ನೇಮಕಗೊಂಡು ನಂತರ ಪಿಹೆಚ್.ಡಿ ಮಾಡುವ ಆಸಕ್ತಿ ಹೆಚ್ಚಾಗಿ ಪ್ರೊ. ದೇಜಗೌ ಅವರ ಮಾರ್ಗದರ್ಶನದಲ್ಲಿ "ದಕ್ಷಿಣ ಕರ್ನಾಟಕ ಜಾನಪದ ರಂಗಭೂಮಿ" ಎಂಬ ವಿಷಯದ ಮೇಲೆ ಪಿಎಚ್.ಡಿ ಪದವಿಯನ್ನು ಪಡೆದರು. ತದನಂತರ ಒಂದೊಂದೇ ಮೆಟ್ಟಿಲನ್ನು ಏರುತ್ತಾ ಉಪನ್ಯಾಸಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ಸಂಸ್ಥೆಯಲ್ಲಿ ಗುರುತರವಾದ, ಜವಾಬ್ದಾರಿಗಳನ್ನು

ನಿರ್ವಹಿಸಿ ಕೀರ್ತಿಗೆ ಭಾಜನರಾದರು. ನಿವೃತ್ತಿಯಾದ ಮೇಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಬರಹ: ಜನಪದ ಸಾಹಿತ್ಯದಲ್ಲಿ ಡಿ.ಕೆ.ರಾಜೇಂದ್ರ ಅವರದು ದೊಡ್ಡ ಹೆಸರು. ಜಾನಪದಕ್ಕೆ ಸಂಬಂಧಿಸಿದಂತೆ ವೈವಿಧ್ಯಮಯವಾದ "ಸುಮಾರು ಇಪ್ಪತ್ತೈದು ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ" ಜಾನಪದ ಸಂಚಯ, ಜಾನಪದ ಸಮಲೋಕನ, ಜನಪದ ಸಮನ್ವಯ, ಕರಪಾಲ ಮೇಳ, ಮುರಾವು, ಯಕ್ಷಗಾನ, ಬಯಲಾಟ, ಮುಡಲಪಾಯ, ನಮ್ಮ ಸುತ್ತಿನ ನಂಬಿಕೆಗಳು, ದಕ್ಷಿಣ ಕರ್ನಾಟಕ ಜನಪದ ರಂಗಭೂಮಿ, ಚಿಂತನ ಚಿತ್ತಾರ, ಜಾನಪದ ಸಂಪದ, ಜಾನಪದ ಕೆಲವು ಗ್ರಹಿಕೆಗಳು, ಬೆದರುಗೊಂಬೆ ಮತ್ತು ಇತರೆ ಜನಪದ ಕಥೆಗಳನ್ನು ಪ್ರಕಟಿಸಿದ್ದಾರೆ. ನಸುನಗೆಯ ಅಲೆಗಳು ಮಾತಿನ ಮಲ್ಲರು, ದೇವಗಂಗೆ ಎಂಬ ಮುರು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಮೊದಲ ಸಂಕಲನ 'ಮಾತಿನಮಲ್ಲರು' ೧೯೮೭ರಲ್ಲಿ ಪ್ರಕಟವಾಯಿತು. ಸರಿಯಾಗಿ ಹತ್ತುವರ್ಷಗಳನಂತರ ೧೯೯೭ರಲ್ಲಿ ಎರಡನೆಯ ಸಂಕಲನವಾದ ದೇವಗಂಗೆ ಪ್ರಕಟವಾಗಿದೆ. ಇದರಲ್ಲಿ ಮೊದಲ ಪ್ರಬಂಧವಾದ ದೇವಗಂಗೆಯಿಂದ ಸಮಸ್ಯೆಯ ಸುಳಿಯಲ್ಲಿ ವರೆಗೆ ಒಟ್ಟು ಹನ್ನೊಂದು ಲಲಿತ ಪ್ರಬಂಧಗಳಿವೆ. ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾದ "ಮೀಸಾಯಣ ಹೊರತುಪಡಿಸಿ ಉಳಿದವೆಲ್ಲ ಮೊದಲಬಾರಿಗೆ ಓದುಗರ ಕೈಸೇರಿತ್ತು. ಈ ಮೂಲಕ ಕನ್ನಡ ಪ್ರಬಂಧ ಸಾಹಿತ್ಯಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಏಳೆಂಟು ಪುಟಗಳಿಂದ ಹಿಡಿದು ಹದಿನೇಳು–ಹದಿನೆಂಟು ಪುಟಗಳವರೆಗಿನ ವ್ಯಾಪ್ತಿಯನ್ನು ಹೊಂದಿರುವ ಪ್ರಬಂಧಗಳನ್ನು ಇಲ್ಲಿ ಕಾಣಬಹುದು. ವಿಭಿನ್ನ ನೆಲೆಯನ್ನು ಹೊಂದಿರುವ ಸಂಕಲನದ ಬಗ್ಗೆ 'ಎಚ್ಚೆಸ್ಕೆ' ಹೀಗೆ ಹೇಳುತ್ತಾರೆ. "ಭಗೀರಥನ ಗಂಗೆಗೆ ಸಾಗರವೇ ಕೊನೆ. ಈ ಗಂಗೆಗೆ ಮಾತ್ರ ಕೊನೆಯೇ ಇಲ್ಲ. ಮೀಸೆ, ಅಳು, ನಗು, ಪ್ರಕೃತಿ, ಪ್ರವಾಸ, ಕಲೆಗಳು, ಅರಳಿಕಟ್ಟೆ, ಸುಳ್ಳಿನಸೃಷ್ಟಿ, ವಿನೋದ, ವಿವೇಕ, ವೇದಾಂತ, ಜಾನಪದ ಎಲ್ಲವನ್ನೂ ಹದವಾಗಿ ಹೊಂದಿಸಿರುವ ಡಾ. ರಾಜೇಂದ್ರರ ಈ ಕೃತಿ ನಮ್ಮ ಪ್ರಬಂಧ ಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡುಗೆಯಾಗಿದೆ. ದೇವಗಂಗೆ ಜಾಡುಹಿಡಿದು ಹೊರಟವರೆಲ್ಲರಿಗೂ ಇದರ ಅನುಭವವಾಗದಿರದು" ಎಂಬ ಅಭಿಪ್ರಾಯ ಔಚಿತ್ಯವಾದುದು. ಫ್ರಾನ್ಸ್‌ನ ಮಾಂಟೇಸ್‌ನಿಂದ ವಿಶ್ವಸಾಹಿತ್ಯ ಪ್ರವೇಶಿಸಿದ. ಪ್ರಬಂಧ, ಕನ್ನಡಕ್ಕೆ ಇಂಗ್ಲಿಷಿನ ಪ್ರಭಾವದಿಂದ ಕಾಲಿಟ್ಟಿತು. ಮೊದಲಿಗೆ ಅನುವಾದಗಳ ಮುಖಾಂತರ ಪರಿಚಯವಾಗಿ ಆನಂತರ ಸ್ವತಂತ್ರ ರಚನೆಗಳ ಮೂಲಕ ಸಾಹಿತ್ಯಸಕ್ತರನ್ನು ಆಕರ್ಷಿಸಿತು. ಪ್ರಬಂಧ ವಾಮನನಂತೆ ತ್ರಿವಿಕ್ರಮನೂ ಹೌದು. ಕಿರುವ್ಯಾಪ್ತಿಯ ಲಲಿತಪ್ರಬಂಧ ಹರಟೆಗಳು, ಹಾಸ್ಯಲೇಖನಗಳು, ಸಾಹಿತ್ಯ ವಿಮರ್ಶೆಗಳು

ವೈಚಾರಿಕ ಪ್ರಬಂಧಗಳನ್ನು ಕೂಡ ರಚಿಸಿದ್ದಾರೆ. ಹಾಗೆಯೇ ಮುಂದುವರಿದು, ತಲೆಗಳು ಪ್ರವಾಸಕಥನ ಎಂಬ ೧೮ ಪುಟಗಳ ಪ್ರಬಂಧವನ್ನು ರಚಿಸಿದ್ದಾರೆ. ಸ್ಪೇನ್ ದೇಶದ ಗೂಳಿ ಕಾಳಗದ ಅವಲೋಕನದೊಂದಿಗೆ ಹುಟ್ಟಿಕೊಂಡ ಪ್ರಾಣಿಗಳಿಗೆ ಅದರಲ್ಲೂ ಮನುಷ್ಯನಿಗೆ ಅತಿಮುಖ್ಯವಾದ ಭಾಗ ತಲೆಯಾಗಿದೆ. ತಲೆಯನ್ನು ಕುರಿತು ಹಿಂಜಿಕೊಳ್ಳುವ ಬಗ್ಗೆ ಆಕರ್ಷಕವಾಗಿದೆ. ಹಾಗೆಯೇ "ವಿದ್ಯಾರ್ಥಿ ಜೀವನದ ಬಗ್ಗೆಯೂ ಒಂದು ಕಿರುಪ್ರಬಂಧವಿದೆ "ಗೆಳೆಯನ ಮಗನ ಹುಟ್ಟುಹಬ್ಬದ ಅಮಲ್ದಾರಿ ವ್ಯವಸ್ಥೆಯ ಸಮಯದಿಂದ ಸ್ಫೂರ್ತಿಗೊಂಡು ಮುಖವಾಡಗಳು ಪ್ರಬಂಧವನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಯನ್ನು ಗಮನಿಸಿದ ಅವರ ಶಿಷ್ಯರಾದ ಅಭಿಮಾನಿಗಳು ಹೊನ್ನಾ ಹೊಂಬಾಳೆ ಎಂಬ ಅಭಿನವ ಗ್ರಂಥವನ್ನು ರಚಿಸಿ ಸಮರ್ಪಿಸಿದ್ದಾರೆ.

ಹೀಗೆ ಪ್ರಬಂಧ, ಹರಟೆ, ವಿಮರ್ಶೆ, ಜಾನಪದ, ಲಲಿತ ಪ್ರಬಂಧಗಳು, ಹಾಸ್ಯ, ಕಿರುಪ್ರಬಂಧಗಳು ಹೀಗೆ ಎಲ್ಲ ಸಾಹಿತ್ಯ ಕ್ಷೇತ್ರದಲ್ಲೂ ಕೃಷಿ ಮಾಡಿರುವುದು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

*****

ಅಧ್ಯಾಯ – ೩

ಜಾನಪದ ಅಧ್ಯಯನಕ್ಕೆ ಡಿ.ಕೆ. ರಾಜೇಂದ್ರರವರ ಕೊಡುಗೆ

೧.೧. ಜಾನಪದ ಸಂಚಯ

ಹಾಸನಜಿಲ್ಲೆಯ ಜನಪದ ಕಲೆಗಳು: ಹಾಸನಜಿಲ್ಲೆಯ ಜನಪದ ಕಲೆಗಳು ಎಂಬುದು ಡಿ.ಕೆ.ರಾಜೇಂದ್ರ ಅವರ ಸಂಶೋಧನೆ ಕೃತಿಯಾಗಿದೆ. ಒಂದುನಾಡಿನ ಮೂಲಸಂಸ್ಕೃತಿಯನ್ನು ತಿಳಿಯಬೇಕಾದರೆ ಆ ನಾಡಿನ ಜಾನಪದ ಕ್ಷೇತ್ರವನ್ನು ಒಳಹೊಕ್ಕು ನೋಡಬೇಕಾಗುತ್ತದೆ. ಆ ಒಂದು ಕ್ಷೇತ್ರದ ಸಾಹಿತ್ಯ ಕಲೆಗಳನ್ನು ವಿವರವಾಗಿ ನೋಡಿದಾಗ ಅಲ್ಲಿಯ ಜನತೆಯ ನಡೆ-ನುಡಿ ಆಚಾರ-ವಿಚಾರ ಸಂಪ್ರದಾಯ ನಮಬಿಕೆ ನಡವಳಿಕೆಗಳು ಬೇರೂರಿರುವುದು ಗೋಚರಿಸುತ್ತವೆ. ಸಂಸ್ಕೃತಿಯಿಂದ ಸಂಸ್ಕಾರಗೊಂಡ ಅವರ ಸಾಹಿತ್ಯ ಪ್ರತಿಭೆ ಕಲಾಪ್ರತಿಭೆಗಳು ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು.

ಜನಪದ ಕಲೆಗಳು: ಸಮಷ್ಟಿ ಪ್ರಜ್ಞೆಯಿಂದ ಮೂಡಿಬಂದವುಗಳಾಗಿದ್ದರೂ ಧಾರ್ಮಿಕ ಹಿನ್ನೆಲೆಯಿಂದ ಪ್ರೇರಣೆಗೊಂಡವುಗಳು ಎಂದು ಮನಗಾಣಬಹುದು. ಹೀಗೆ ಧಾರ್ಮಿಕ ಸಂಪ್ರದಾಯಗಳಿಂದ ಪ್ರೇರಣೆಪಡೆದು ಉದ್ಭವಿಸಿದ ಜನಪದ ಕಲಾಪ್ರಕಾರಗಳಲ್ಲಿ ತೀರ ವಿರುದ್ಧವಾದ ಪ್ರಭೇದಗಳೇನೂ ಕಂಡುಬರುವುದಿಲ್ಲ. ಕಂಡುಬಂದರೂ ಅವುಗಳ ಮೂಲಸ್ವರೂಪ, ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ಜನಪದಗೀತೆಗಳು ಜನರ ಮನಸ್ಸನ್ನು ಮತ್ತು ಹೃದಯವನ್ನು ತಿಳಿಯಲು ಸಹಕಾರಿಯಾಗಿವೆ. ಒಂದು ಜಿಲ್ಲೆಯ ಜನಪದ ಕಲೆಯನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಅದು ಹೆಚ್ಚುಕಡಿಮೆ ದಕ್ಷಿಣ ಕರ್ನಾಟಕದ ಬಹುಭಾಗದ ಕಲೆಗಳನ್ನು ಪರಿಶೀಲಿಸಿದಂತೆಯೇ ಗೋಚರಿಸುತ್ತವೆ. ಹಾಗೆಯೇ ದಕ್ಷಿಣ ಕರ್ನಾಟಕದ ಜನಪದ ಕಲೆಗಳನ್ನು ಪರಿಶೀಲಿಸಿದಾಗ ಅದರಲ್ಲಿ ಬಹುಭಾಗ ಒಂದು ಜಿಲ್ಲೆಯ ಆಚರಣೆ ನಂಬಿಕೆ, ಸಂಪ್ರದಾಯ, ನುಡಿ-ಕಲೆ, ಭಾಷೆ, ಸೋಗಡು ಕಂಡುಬರುವುದನ್ನು ಕಾಣಬಹುದು. ಡಿ.ಕೆ.ರಾಜೇಂದ್ರರವರು ಈ ಕಲೆಗಳು ಹೆಚ್ಚು ಕಡಿಮೆ ದಕ್ಷಿಣ ಕರ್ನಾಟಕದ ಬಹುಭಾಗದ ಕಲೆಯನ್ನೇ ಹೋಲುತ್ತದೆ ಎಂಬುದನ್ನು ಶೋಧಿಸಿದ್ದಾರೆ.

ಜಾನಪದ ಕ್ಷೇತ್ರ ಒಂದು ನಾಡಿನ ಮೂಲಸಂಸ್ಕೃತಿಯನ್ನು ಅರಿವು ಮಾಡಿಕೊಡುವಲ್ಲಿ ಇಷ್ಟೊಂದು ಪ್ರಮುಖವಾದುದೆನಿಸಿದ್ದರೂ ಕರ್ನಾಟಕದಲ್ಲಿ ಇದುವರೆಗೂ ಅದು ಮೂಲಗುಂಪಾಗಿಯೇ ಉಳಿದುಕೊಂಡು ಬಂತು. ಪಂಡಿತರ ಅವಜ್ಞೆಯಿಂದಾಗಿ ಪಾಮರರ ಪ್ರತಿಭಾ ಶಕ್ತಿಗಳು ಮಸುಕಾಗಿ ಉಳಿದುಕೊಂಡು ಬರಬೇಕಾಯಿತು. ಇದರಿಂದಾಗಿ ಒಂದು

ಕ್ಷೇತ್ರಕ್ಕೆ ಅಪಾರ ನಷ್ಟವಾಯಿತು. ಕರ್ನಾಟಕದಲ್ಲಿ ಜಾನಪದ ತನ್ನ ಮೆರವಣಿಗೆಯನ್ನು ಪ್ರಾರಂಭಿಸಿದ್ದು ಪಾಶ್ಚಾತ್ಯರ ಕಹಳೆಯಿಂದಲೇ ಆಗಿದೆ ಎಂಬುದನ್ನು ಜನಪದದ ಹುಟ್ಟು ಬೆಳವಣಿಗೆಯಾದದ್ದು ಪಾಶ್ಚಾತ್ಯರಿಂದಲೇ ಎಂದು ಡಿ.ಕೆ.ರಾಜೇಂದ್ರರವರು ವ್ಯಾಖ್ಯಾನಿಸಿದ್ದಾರೆ. ೧೮೭೧ರಲ್ಲಿ ಚಾರ್ಲ್ಸ್‌ನ ಇಂಗೋವರ್. ಈ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ನಾಂದಿ ಹಾಡಿದ. ಅನಂತರ "ಫ್ಲೀಟ್" ಎಂಬುವನು ಅಪಾರವಾಗಿ ಲಾವಣಿಯನ್ನು ಸಂಗ್ರಹಿಸಿದ್ದು ಪ್ರಕಟಿಸುವ ಮೂಲಕ ಆ ಕಾರ್ಯಕ್ಕೆ ಸ್ಫೂರ್ತಿ ತುಂಬಿದ, ಕರ್ನಾಟಕದಲ್ಲಿ ಜನಪದ ಗೀತೆಗಳ ಸಂಗ್ರಹಕಾರ್ಯ ಹೀಗೆ ಕುಂಟುತ್ತಾ ಮುನ್ನಡೆಯಿತು. ಮುಂದೆ ಶ್ರೀಗಳಾದ ಮಾಸ್ತಿ, ಬೇಂದ್ರೆ, ಅರ್ಚಕ ರಂಗಸ್ವಾಮಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್; ಮತಿಘಟ್ಟ ಕೃಷ್ಣಮೂರ್ತಿ, ಗದ್ದಗೀಮಠ, ಬೆಟಗೇರಿ ಕೃಷ್ಣಶರ್ಮ, ಹಲಸಂಗಿ ಸೋದರರು, ಬಿ.ಎಂ.ಶ್ರೀ ಮುಂತಾದವರು ಗಣನೀಯ ಪ್ರಮಾಣದಲ್ಲಿ ಜನಪದ ಗೀತೆಗಳ ಸಂಗ್ರಹ ಕಾರ್ಯಮಾಡಿ ಅವುಗಳ ಮಹತ್ವವನ್ನು ಸಾರಿದರು. ಉದಾ: ಹಿಂದೆಯೇ ಪ್ರಕಟವಾದ ಗೊರೂರರ "ಹಳ್ಳಿಯ ಹಾಡು" ಒಂದು ವೈಶಿಷ್ಟ್ಯಪೂರ್ಣ ಸಂಕಲನವಾಗಿದೆ ಎಂದು ತಿಳಿಯಬಹುದು. ಜಾನಪದ ಕ್ಷೇತ್ರದ ಈ ಒಂದು ವ್ಯಾಪಕ ಹಿನ್ನೆಲೆಯಲ್ಲಿ ಹಾಸನಜಿಲ್ಲೆಯ ಜನಪದ ಕಲಾಪ್ರಕಾರಗಳನ್ನು ಗಮನಿಸುವುದು ಸೂಕ್ತವಾಗಿದೆ ಎಂದು ಡಿ.ಕೆ. ರಾಜೇಂದ್ರ ಅವರು ಹಾಸನ ಜಿಲ್ಲೆಯ ಜನಪದ ಪ್ರಕಾರಗಳನ್ನು ಗುರುತಿಸಿದ್ದಾರೆ.

ಹಾಸನಜಿಲ್ಲೆ ಕಲಾ ವೈವಿಧ್ಯಕ್ಕೆ ಹೆಸರಾದುದು. ಒಂದೆಡೆ ಕಲಾಬಂಡಾಯದ ಕೀಲಿಕೈಯ್ಯಂತಿರುವ ಶ್ರವಣ ಬೆಳಗೊಳದ ಗುಮ್ಮಟ ಮತ್ತೊಂದೆಡೆ ಕಲಾಶ್ರೀಮಂತಿಕೆಯ ಸಿರಿಯ ಸೊಬಗಾಗಿರುವ ಹಳೇಬೀಡು, ಬೇಲೂರು ಎಂಬುವು ದೇಶ ವಿದೇಶಗಳಿಂದ ಆಕರ್ಷಿತಗೊಂಡಿವೆ. ಇವೆಲ್ಲವೂ ಪ್ರೌಢಶಾಲೆಯ ಧೀಮಂತ ಶಕ್ತಿಗಳೇ ಆಗಿ ಕಂಡಬಂದರೂ ಜನಪದ ಕಲೆಗಳಿಂದ ಪ್ರೇರಣೆ ಪಡೆದು ಬಂದವುಗಳೆಂಬುದನ್ನು ಮರೆಯುವಂತಿಲ್ಲ. ಈ ಪ್ರಾಂತ್ಯದ ಅಧ್ಯಯನದಲ್ಲಿ ತೊಡಗಿದಾಗ ಅಲ್ಲಿ ಪ್ರಮುಖವಾಗಿ ಕಂಡುಬರುವ ವೃತ್ತಿಗಾಯಕರು ಕರಾಪಾಲದವರು ಗುಡ್ಡರು, ದೊಂಬಿದಾಸರು, ತೊಂಬೂರಿಯವರು, ವಿಶೇಷವಾಗಿ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಈ ವೃತ್ತಿಗಾಯಕರ ಪರಂಪರೆ ತನ್ನ ವಿಶಿಷ್ಟ ಗುಣದಿಂದಾಗಿ ತನ್ನದೇ ಆದ ಹಿರಿಮೆಯನ್ನು ಗಳಿಸಿಕೊಂಡಿದೆ. ಅಲ್ಲದೆ ಹಾಸನಜಿಲ್ಲೆ ಕೋಲಾಟಕ್ಕೆ ಅತ್ಯಂತ ಹೆಸರಾಗಿದ್ದು ಇಲ್ಲಿಯ ಹೊಳೇನರಸೀಪುರದಲ್ಲಿ ಕಂಡುಬರುವ "ವೀರಮಕ್ಕಳ ಕುಣಿತ ಅತ್ಯಂತ ಪ್ರಸಿದ್ಧವಾದುದ್ದು. ಅಲ್ಲದೆ ಜಾನಪದ ಕ್ಷೇತ್ರಕ್ಕೆ ವಿಶೇಷ ಸೇವೆ ಸಲ್ಲಿಸಿದ ಹಿರಿಯ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಮತಿಘಟ್ಟ ಕೃಷ್ಣಮೂರ್ತಿ.

ಇವರು ಈ ಜಿಲ್ಲೆಗೆ ಸೇರಿದವರು ಎಂಬುದು ತಿಳಿಯುತ್ತದೆ. ಅನೇಕ ನಾಠಕಗಳಿಗೂ "ಹಾಸನಜಿಲ್ಲೆಯು ಪ್ರಸಿದ್ಧಿಯನ್ನು ಪಡೆದಿದೆ. ಜಾನಪದ ಉಳಿಯುವಿಕೆ ಮತ್ತು ದೇಶೀಸಂಸ್ಕೃತಿ ರಕ್ಷಣೆಗೆ ಬೆಂಬಲಿಸಿದೆ ಎಂಬುದನ್ನು ಹೇಳುತ್ತಾ ಡಿ.ಕೆ. ರಾಜೇಂದ್ರ ಅವರು ವೃತ್ತಿಗಾಯಕರು ಮತ್ತು ಅವರುಗಳ ವೃತ್ತಿಗಳು ಆ ವೃತ್ತಿಗಾಯಕರು ಕೊಟ್ಟ ಕೊಡುಗೆ, ವೃತ್ತಿಗಾಯಕರ ಶ್ರದ್ಧೆ, ಶ್ರಮ ವೃತ್ತಿಗಾಯಕರು ಆ ವೃತ್ತಿ ಬಗ್ಗೆ ಹೊಂದಿದ್ದ ಕಾಳಜಿ ಮಹತ್ವವನ್ನು ಎತ್ತಿಹಿಡಿಯಲು ಡಿ.ಕೆ. ರಾಜೇಂದ್ರರವರು ಶ್ರಮಿಸಿದ್ದಾರೆ.

ಕರ್ನಾಟಕದಲ್ಲಿ ಪ್ರಮುಖವಾಗಿ ಕಂಡುಬರುವ ಎರಡು ಪ್ರಭೇದಗಳಲ್ಲಿ ಮೂಡಲಪಾಯ ಮತ್ತು ಯಕ್ಷಗಾನ ಬಯಲಾಟವೇ ಅತ್ಯಂತ ಪ್ರಾಚೀನವಾದದ್ದು ಹಾಗೂ ಸಂಸ್ಕೃತ ನಾಟಕಕ್ಕೆ ಸ್ವಲ್ಪಮಟ್ಟಿನ ಪ್ರೇರಣೆಯಿತ್ತ ಕೀರ್ತಿ ಅದಕ್ಕೆ ಸಲ್ಲುತ್ತದೆ. ಹಾಸನದ ಬೀಚನಹಳ್ಳಿಯಲ್ಲಿ ಹರಿಜನರು ಕೂಡ ಯಕ್ಷಗಾನವನ್ನು ಆಡುವುದುನ್ನು ನೋಡಬಹುದು. ತೊಗಲುಗೊಂಬೆಯಾಟವು ಕೂಡ ಅತಿಪ್ರಾಚೀನ ಕಾಲದಿಂದ ಭಾರತದಲ್ಲಿ ಬೆಳೆದು ಬಂದ ವಿದ್ಯೆ ಎಂಬುದನ್ನು ಗಮನಿಸಬಹುದು. ಏಷ್ಯಾಖಂಡದ ಬಿಡಿಭಾಗಗಳಿಗೆಲ್ಲ ಪ್ರಸರಿಸಿತ್ತೆಂದು ತೋರುತ್ತದೆ. ಥೈಲ್ಯಾಂಡಿನ ತೊಗಲುಗೊಂಬೆಯಾಟವು ಕರ್ನಾಟಕದ ತೊಗಲು ಗೊಂಬೆಯಾಟವನ್ನೇ ಹೋಲುತ್ತವೆ. ಜಗತ್ತಿನ ಕಲೆಗೆ ಭಾರತ ಸಲ್ಲಿಸಿರುವ ಕಾಣಿಕೆಗಳ ಪೈಕಿ ಸೂತ್ರದಗೊಂಬೆ ತೊಗಲುಗೊಂಬೆ ಒಂದು ಮುಖ್ಯ ಅಂಶವೆಂದು ಕಲಾಭಿಜ್ಞರು ಪರಿಗಣಿಸುತ್ತಾರೆ. "ಥೈಲ್ಯಾಂಡಿನ ರಾವಣನೊಡನೆ ಯುದ್ಧ ಮಾಡುತ್ತಿರುವ ರಾಮ" ಎಂಬ ಮಾತಿದೆ. "ತೊಗಲುಗೊಂಬೆಯನ್ನು ಜಗತ್ತಿನ ಬುದ್ದಿ ಮತ್ತು ಸಂಸ್ಕೃತಿಗೆ ಹೋಲಿಸಿದ್ದು ಇದಕ್ಕೆ ಬಾರತದ ಕೊಡುಗೆ" Indians' contribution to world thought and culture ಎಂದು ಸ್ವಾಮಿ ವಿವೇಕನಂದರು ಶತಮಾನೋತ್ಸವ ಗ್ರಂಥದಲ್ಲಿ ವರ್ಣಿಸಿದ್ದಾರೆ. ಯಕ್ಷಗಾನ ಬಯಲಾಟಸೂತ್ರದ ಗೊಂಬೆಯಾಟವು ಜಗತ್ತಿನಾದ್ಯಂತ ಪಸರಿರುವುದನ್ನು ಡಿ.ಕೆ. ರಾಜೇಂದ್ರ ಅವರು ಶೋಧಿಸಿದ್ದಾರೆ.

ಇಂತಹ ತೊಗಲುಗೊಂಬೆ ಆಟಕ್ಕೂ ಹಾಸನವೇ ನೆಲೆಯಾಗಿದೆ. ಸೂತ್ರದ ಗೊಂಬೆಯಾಟವೆಂದರೆ ಮನುಷ್ಯನು ಅಂದರೆ, ಸೂತ್ರಧಾರಿಯಿಂದ ನಾಟಕ ಆಡಿಸುವುದು. ಗೊಂಬೆಗಳನ್ನು ಕೈಯಲ್ಲಿ ಹಿಡಿದು ಪರದೆ ಹಿಂದೆ ಮಾತಿಗೆ ತಕ್ಕಂತೆ ಮತ್ತು ಸಂದರ್ಭಕ್ಕೆ ತಕ್ಕಂತೆ ಹಾಸ್ಯಚಟಾಕಿಯನ್ನು ಹಾರಿಸುತ್ತ ಸೂತ್ರದಗೊಂಬೆಯಾಟವನ್ನು ಆಡಿಸುತ್ತಾರೆ. ಈ ಗೊಂಬೆಯಾಟದ ಪ್ರಮುಖ ರೂವಾರಿ "ಗೊಂಬೆರಾಮಯ್ಯ" ಎಂಬುವವನು. ಈತನೇ ಗೊಂಬೆ ಆಡಿಸುವುದು. ಹಾಗೆಯೆ ಮುಂದುವರಿದಂತೆ ಕರಪಲಮೇಳದವರು ಕಂಡುಬರುತ್ತಾರೆ.

ಈ ಮೇಳದಲ್ಲಿ ಕೇವಲ ಸಂಕೇತಗಳ ಮೂಲಕ ಹೆಸರನ್ನು ಹೇಳುವುದಾಗಿದೆ. ಕರಪಲ್ಲವ ಎಂಬ ಶುದ್ಧರೂಪದಲ್ಲಿಯೇ ಅದು ಹಾಸನಜಿಲ್ಲೆಯಲ್ಲಿ ಕಂಡುಬಂದಿದೆ ಎಂಬುದು ನಮಗೆ ಗೋಚರಿಸುತ್ತದೆ. ಈ ಕಲೆಯ ಹೆಸರನ್ನು ಹೇಳುವ ಒಂದು ತಂಡ "ಇಬ್ಬಡಿಯಲ್ಲಿ ಕಂಡುಬರುತ್ತದೆ ಮತ್ತೊಂದು ವೃತ್ತಿಗಾಯಕರ ತಂಡವೆಂದರೆ "ತಂಬೂರಿಯವರು ವೃತ್ತಿಗಾಯಕರು ಕೂಡ ಕಂಡುಬರುತ್ತಾರೆ. ಹಾಸನದ ಹಾರ್‍ನಳ್ಳಿಯಲ್ಲಿ ಇವರು ವಿಶೇಷವಾಗಿ ಕಂಡುಬರುತ್ತಾರೆ. ಗೊಂಬೆಯಾಟದ ಕಲಾ ಪ್ರಕಾರಗಳ ನೆಲೆಬೆಲೆಯನ್ನು ಡಿ.ಕೆ. ರಾಜೇಂದ್ರ ಅವರು ಶೋಧಿಸಿದ್ದಾರೆ. ಇವರು ಹಾಡುವ ಕೆಲವು ಪ್ರಸಿದ್ಧ ಕತೆಗಳು, "ರುದ್ರಕುಮಾರ, ಶೆಟ್ಟಿ ತಿಮ್ಮಪ್ಪ, ಶಿವಶಂಕರ ರಾಮ ಮುಂತಾದವು. ತೆಲಗು ಜಂಗಮರು ಗಾಯಕ ವರ್ಗಕ್ಕೆ ಸೇರಿದ ಕಥೋಪಜೀವಿಗಳು". ಇವರು ಹಾಸನಜಿಲ್ಲೆಯಲ್ಲಿ ವಿರಳವಾಗಿ ಕಂಡುಬರುತ್ತಾರೆ. ಕೋಲಾಟವು ಸದಾ ಈ ಜಿಲ್ಲೆಯಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಕೋಲಾಟ ಅತ್ಯಂತ ಸರಳವಾದ ಮನರಂಜಕ ಆಟವಾಗಿದೆ. ಇದು ಒಂದು ರೀತಿಯ ಸಂಮಿಶ್ರ ಕಲೆ, ಗೀತೆ ನೃತ್ಯ, ಕೋಲಿನ ತಾಳ ಇವುಗಳಿಂದ ಕೂಡಿದ ಒಂದು ಬಗೆಯ ಕಲೆ ಆಗಿದೆ. ಉದಾ: "ಮತಿಗಟ್ಟ ಕೃಷ್ಣಮೂರ್ತಿಯವರ 'ಕೋಲು –ಕೋಲೆ' ಒಂದು ವೈಶಿಷ್ಟ್ಯಪೂರ್ಣ ಸಂಕಲನವನ್ನು ಮನಗಾಣಬಹುದು".

ಹಾಸನ ಜಿಲ್ಲೆಯವರಾದ ಎಂ.ಸಿ.ವಸಂತ್‌ಕುಮಾರ್‌ರವರು 'ಕೋಲಾಟ ಪದಗಳನ್ನು' ವಿಸ್ತಾರವಾಗಿ ಸಂಗ್ರಹಿಸಿ ಪ್ರಸ್ತಾಪಿಸಿರುವುದನ್ನು ಕಾಣಬಹುದು. ಕೋಲಾಟವನ್ನು 'ಆಟ' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ಬಾಬಯ್ಯ ಹಬ್ಬದಲ್ಲಿ ಹುಲಿವೇಷವನ್ನು ಹಾಕುವುದು ಒಂದು ರೂಢಿ. ಅರಕಲಗೂಡು ಹಾಸನದ ಅರಸೀಕೆರೆ ಈ ಕಡೆ ಇಂದಿಗೂ ಏರ್ಪಡುವುದು. ಹಾಗೆಯೇ ಗೌರಿಹಬ್ಬದ ಸಂದರ್ಭದಲ್ಲಿ ಗೊಂಬೆಗಳನ್ನು ಕೂರಿಸಿ ನಡೆಸುವಂತಹ ಪೂಜೆಯನ್ನು ಹೊಳೆನರಸೀಪುರದ ಭಾಗದಲ್ಲಿ ವಿಶೇಷವಾಗಿ ಕಾಣಬಹುದು ಎಂಬುದಾಗಿ ಹಾಸನಜಿಲ್ಲೆಯ ಕಲೆಯ ಆಚರಣೆಗಳನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಪತ್ತೆಹಚ್ಚಿದ್ದಾರೆ. ಇದು ಪ್ರಚಲಿತವಾಗಿದ್ದ ಒಂದು ಸಂಪ್ರದಾಯ. ಇವುಗಳಿಗೆ "ಗೌರಿಗೊಂಬೆಗಳು" ಎಂದು ಹೆಸರನ್ನು ಇಟ್ಟಿದ್ದರು. ನಂದಿಕೋಲು ಕುಣಿತ ಇನ್ನೊಂದು ವಿಶಿಷ್ಟಕಲೆ, ಜನಪದ ಕಲೆಗಳ ಸಾಲಿನಲ್ಲಿ ವಿಶಿಷ್ಟ ಬಗೆಯ ದೇವರ ಉತ್ಸವದ ಸಂದರ್ಭದಲ್ಲಿ ದೇವರ ಮುಂದೆ ಹಿಡಿದು ಕುಣಿಯುವುದು, ಒಂದು ಬಗೆ ಆಗಿದೆ. ನಮ್ಮ ಜನಪದರ ಕಲಾದೃಷ್ಟಿ ಮನುಷ್ಯ ಬದುಕಿನ ಎಲ್ಲಾ ವಲಯಗಳನ್ನೂ ಆವರಿಸಿಕೊಂಡಿದ್ದು ಅದು ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ಶಿಷ್ಟಕಲೆಗಳೊಂದಿಗೆ ಬೆಳೆದುಕೊಂಡಿದೆ. ಇದರಂತೆಯೇ ಹಾಸನಜಿಲ್ಲೆಯು ಶಿಷ್ಟಕಲೆಗಳ

ಆಗರವಾಗಿರುವಂತೆಯೇ ಜನಪದ ಕಲೆಗಳ ಕಣಜವಾಗಿದೆ. ಜನಪದ ಕಲೆಗಳು ಎಲ್ಲ ಶ್ರೀಮಂತವಾಗಿ, ವೈವಿಧ್ಯಮಯವಾಗಿ ಕಂಗೊಳಿಸುತ್ತವೆಯೋ ಶಿಷ್ಟಕಲೆಗಳು ಕೂಡ ಕಂಗೊಳಿಸುತ್ತವೆ ಎಂಬುದನ್ನು ಮನಗಾಣಬಹುದು. ಆಚಾರ, ವಿಚಾರ ಸಂಸ್ಕೃತಿ ಸಂಪ್ರದಾಯ ನಂಬಿಕೆಗಳು ಮುಂತಾದವುಗಳು ಸಂರಕ್ಷಿಸಲ್ಪಡುತ್ತವೆ. ಇಂತಹವಕ್ಕೆ ಮತ್ತು ಜನಪದ ಕಲೆಗಳ ಸಂರಕ್ಷಣೆಗೆ ಹಾಸನಜಿಲ್ಲೆ ನಿದರ್ಶನವಾಗಿದೆ. ಒಟ್ಟಾರೆಯಾಗಿ ಇವೆಲ್ಲವನ್ನು ಗಮನಿಸಿದಾಗ ಹಾಸನಜಿಲ್ಲೆಯು ಕಲೆ ಮತ್ತು ಸಂಸ್ಕೃತಿಗಾಗಿ ಕೊಟ್ಟ ಕೊಡುಗೆ ಅಪಾರ ಎಂದು ಹೇಳುತ್ತ ಕರ್ನಾಟಕದ ಎಲ್ಲ ಕಲೆಗಳು ಸಹ ಈ ಜಿಲ್ಲೆಯಲ್ಲಿ ಅಡಗಿದ್ದು ಹಾಸನಜಿಲ್ಲೆ ಅನೇಕ ಕಲೆಗಳಿಗೆ ಕೇಂದ್ರಬಿಂದುವಾಗಿದೆ ಎಂಬುದನ್ನು ಪ್ರೊ. ಡಿ.ಕೆ. ರಾಜೇಂದ್ರರವರು ತೋರಿಸಿಕೊಟ್ಟಿದ್ದಾರೆ.

ದಕ್ಷಿಣ ಕರ್ನಾಟಕದ ವೃತ್ತಿಗಾಯಕರು: ದಕ್ಷಿಣ ಕರ್ನಾಟಕದ ವೃತ್ತಿಗಾಯಕರು ಎಂಬ ಸಂಶೋಧನ ಲೇಖನದಲ್ಲಿ ಕರ್ನಾಟಕದ ಜಾನಪದ ಕ್ಷೇತ್ರ ವರ್ಣಮಯವೂ, ವೈವಿಧ್ಯಮಯವೂ ಆಗಿ ಕಂಗೊಳಿಸುತ್ತಿದ್ದರೂ ಅದನ್ನು ಗುರುತಿಸಿ ಆಸ್ವಾದಿಸುವ ಸೌಲಭ್ಯ ದೊರೆತದ್ದು ಇತ್ತೀಚೆಗೆ ಭಾರತದಲ್ಲಿ ಜಾನಪದ ಕ್ಷೇತ್ರಕಾರ್ಯ ಆರಂಭವಾದದದ್ದು ಪಾಶ್ಚಾತ್ಯರಿಂದಲೇ. ಹಾಗೆಯೇ ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹಣೆಯ ಕಹಳೆಯನ್ನೊದಿದವರು "ಫ್ಲೀಟ್ ಗೋವರ್" ಮುಂತಾದವರು ಈ ದೃಷ್ಟಿಯಿಂದ ಚಾರಿತ್ರಿಕ ವ್ಯಕ್ತಿಗಳಾಗಿದ್ದಾರೆ. ಗೋವರ್ ಅವರು ಕರ್ನಾಟಕದಲ್ಲಿಯ ದಾಸರಪದಗಳನ್ನು ಸಂಗ್ರಹಿಸಿದರು ಎಂಬುದು ನೈಜಸಂಗತಿಯಾಗಿದೆ. 'ದಾಸರು' ಎಂಬ ಒಂದು ಬಗೆಯ ಗಾಯಕರಿಂದ ಸಂಗ್ರಹಿಸಿದಾಗಿ ಹೇಳಿಕೊಂಡಿದ್ದಾರೆ. ಇಂಥ ಹಾಡುಗಳನ್ನು ಹಾಡುವಾಗ ಅವರು ವಾದ್ಯಗಳನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಪಾಶ್ಚಾತ್ಯರಿಂದಲೇ ಅನೇಕ ಕರ್ನಾಟಕದ ಕಲೆಗಳು ಬೆಳಕಿಗೆ ಬಂದವೆಂಬುದನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ತಿಳಿಸಿದ್ದಾರೆ.

ಇಪ್ಪತ್ತನೆಯ ಶತಮಾನದ ಆರಂಭದಲ್ಲಿಯೇ "ಶ್ರೀ ಮಾಸ್ತಿಯವರು ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ ತೊಡಗಿ ಅನೇಕರ ಗಮನವನ್ನು ಅತ್ತ ಸೆಳೆಯಲು ಕಾರಣರಾದರು. ಇಂಗ್ಲಿಷ್‌ನ ಬ್ಯಾಲೆಡ್‌ಗಳನ್ನು ಓದಿ ಅದರ ಸವಿಯನ್ನು ಸವಿದಿದ್ದ ಅವರಿಗೆ ಕನ್ನಡದಲ್ಲಿಯೂ ಇಂತಹದೇ ಸೊಬಗಿರಬಹುದೆಂಬ ಕುತೂಹಲ ಕೆರಳಿ ಅದರತ್ತ ಕೈಹಾಕಿದ್ದೇನೆಂದು ಹೇಳಿಕೊಂಡಿದ್ದಾರೆ. "೧೯೧೯ರಲ್ಲಿ ಕನ್ನಡನಾಡಿನ ಲಾವಣಿ ಸಾಂಗತ್ಯ ಎಂಬ ವಿಸ್ತಾರವಾದ ಲೇಖನವನ್ನು ಅವರು ಪ್ರಕಟಿಸಿದರು". ಇದಾದ ನಂತರ ಕರ್ನಾಟಕದಲ್ಲಿ ಜನಪದ ಗೀತೆಗಳ ಸಂಗ್ರಹಕಾರ್ಯ ಶ್ರೀಗಳಾದ "ಹಲಸಂಗಿ ಸೋದರರು ಸಿಂಪಿಲಿಂಗಣ್ಣ, ಬೆಟಗೇರಿ ಕೃಷ್ಣಮೂರ್ತಿ, ಮಿರ್ಜಿ ಅಣ್ಣಾರಾಯ, ಬೇಂದ್ರೆ, ಶ್ರೀಗದ್ದಗೀಮಠ, ಅರ್ಚಕ ರಂಗಸ್ವಾಮಿ ಹೀಗೆ

ಸಂಗ್ರಹ ಕಾರ್ಯ ಭರದಿಂದ ಸಾಗಿತ್ತು. ಪಾಶ್ಚಾತ್ಯರೊಂದಿಗೆ ಕರ್ನಾಟಕದ ಸಾಹಿತಿಗಳು ಜನಪದ ಸಂಶೋಧನೆ ಮತ್ತು ಸಂಗ್ರಹಕಾರ್ಯದಲ್ಲಿ ಅಪಾರ ಕೆಲಸಮಾಡಿದ್ದಾರೆ ಎಂಬುದನ್ನು ಡಿ.ಕೆ. ರಾಜೇಂದ್ರ ಅವರು ಶೋಧಿಸಿದ್ದಾರೆ.

ದಕ್ಷಿಣ ಕರ್ನಾಟಕದಲ್ಲಿ ಜಾನಪದ ಕ್ಷೇತ್ರದ ಸಾಹಿತ್ಯ ಹಾಗೂ ಕಲಾಪ್ರಕಾರಗಳಂತೆ ಅಲ್ಲಿ ಕಂಡುಬರುವ ವೃತ್ತಿಗಾಯಕ ಕಥೋಪಜೀವಿಗಳ ಪರಂಪರೆಯೂ ಹಿರಿದಾದುದ್ದು ಹೌದು. ಇಂತಹ ಒಂದು ಬಗೆಯ ಸಂಪ್ರಾದಾಯಿಕ ಹಾಡುಗಳನ್ನು ಸಂಗ್ರಹಿಸಿಕೊಟ್ಟ ಕೀರ್ತಿ "ಡಾ. ಜೀ.ಶಂ.ಪರಮಶಿವಯ್ಯ ಅವರದ್ದು. ಇಂತಹ ವೃತ್ತಿಗಾಯಕ ಕಥೋಪಜೀವಿಗಳಲ್ಲಿ ಅಪಾರವಾದ ಸಾಹಿತ್ಯ ಸಂಪತ್ತಿದೆ ಎಂಬುದನ್ನು ತಿಳಿಯಬಹುದು. ವೃತ್ತಿಗಾಯಕರಲ್ಲಿ ಪ್ರಮುಖವಾಗಿ ಎರಡು ವಿಧಗಳನ್ನು ಕಾಣಬಹುದು. (೧) ಧಾರ್ಮಿಕ ಕಥೋಪಜೀವಿಗಳು (೨) ಲೌಕಿಕ ಕಥೋಪಜೀವಿಗಳು.

ಯಾವುದೇ ದೈವದರಾಧಕರಾಗಿ ಆ ದೇವರ ಮಹಿಮ ವಿಶೇಷಗಳನ್ನು ಬಣ್ಣಿಸುವ ಕಥೆಗಳನ್ನೂ ಹಾಡುಗಳನ್ನೂ ಹಾಡುವವರು ಒಂದು ತೆರನಾದರೆ, ಯಾವ ವರ್ಗಕ್ಕೂ ಸೇರದೆ ಕೇವಲ ಈ ಸಾಹಿತ್ಯವನ್ನು ಅವಲಂಬಿಸಿ ಜೀವಿಸುವವರು ಮತ್ತೊಂದು ತೆರನಾಗುತ್ತಾರೆ. ಮಂಟೇಸ್ವಾಮಿ ಕಂಸಾಳೆಯವರು, ಚೌಡಿಕೆಯವರು, ಜುಂಜಪ್ಪನವರು ಜೋಗಿಗಳು, ಗೊರವರು ಮೊದಲನೆಯ ಗುಂಪಿಗೆ ಸೇರುತ್ತಾರೆ. ಹೆಳವರು, ದೊಂಬಿದಾಸರು, ತೊಂಬುರಿಯವರು, ತೆಲಗು ಜಂಗಮರು, ಯಾವ ಧರ್ಮಕ್ಕೂ, ಯಾವ ವರ್ಗಕ್ಕೂ ಸೇರದ ಸ್ವಾತಂತ್ರ್ಯ ವೃತ್ತಿಗಾಯಕರಾಗಿ ಕಂಡುಬರುತ್ತಾರೆ. ಈ ಬಗೆಯ ವೃತ್ತಿಗಾಯಕರೂ ಕೂಡ ದಕ್ಷಿಣ ಕರ್ನಾಟಕದಲ್ಲಿ ಹರಡಿಕೊಂಡಿದ್ದಾರೆ. ಇವರು ಒಂದೆಡೆ ನಿಲ್ಲದೆ ಕಥೆಗಳನ್ನು ಹಾಡಿಕೊಂಡು ಜನರಿಗೆ ಮನರಂಜನೆಯನ್ನುಂಟುಮಾಡುತ್ತಾ ಜೀವಿತಕ್ಕೆ ಬೇಕಾದ ದವಸಧಾನ್ಯಗಳನ್ನು ಉಡಿಗೆತೊಡಿಗೆಗಳನ್ನು ಉಡುಗೋರೆಯಾಗಿ ಪಡೆಯುತ್ತಾ ಸಂಚರಿಸುತ್ತಾರೆ. ಜೀವನ ಸಾಗಿಸುತ್ತಾರೆ. ಇಲ್ಲಿ ಎರಡು ಸಂಸ್ಕೃತಿಗಳು ಒಂದೇ ಆಗಿದ್ದರೂ ಪೂಜಾ ಮತ್ತು ಆಚರಣಾ ವಿಧಾನಗಳಲ್ಲಿ ಭಿನ್ನತೆ ಇರುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ಮಾಹಿತಿ ನೀಡಿದ್ದಾರೆ.

ಕಂಸಾಳೆಯವರು ಮಂಡ್ಯ, ಮೈಸೂರಿನ ಸುತ್ತ-ಮುತ್ತ ಮತ್ತು ಮಳವಳ್ಳಿ, ಚನ್ನಪಟ್ಟಣ, ರಾಮನಗರ, ಕನಕನಹಳ್ಳಿ ಈ ಕಡೆಗಳಲ್ಲಿ ವಿಶೇಷವಾಗಿ ಕಂಡುಬರುತ್ತಾರೆ. ಇವರನ್ನೂ ದೇವರ "ಗುಡ್ಡರು" ಎಂದು ಕರೆಯುತ್ತಾರೆ. ಗುಡ್ಡರನ್ನು ಬಿಡುವುದು ಒಂದು ಸಂಪ್ರದಾಯ ತಮಗೆ ಮಕ್ಕಳಾಗದೇ ಇದ್ದಾಗ ತಂದೆ-ತಾಯಿಗಳ ಹರಕೆಯ ಫಲವೇ ಈ ಗುಡ್ಡರು".

ಇವರು ಕಂಸಾಳೆ ಎಂಬ ವಿಶೇಷ ವಾದ್ಯದಿಂದ ಕಂಡುಬರುತ್ತಾರೆ. "ಮಂಟೇಸ್ವಾಮಿ ಕಂಸಾಳೆಯವರಂತೆಯೇ ಧಾರ್ಮಿಕ ಕಥಾವರ್ಗಕ್ಕೆ ಸೇರಿದವರು ಇವರು ಮಂಟೇಸ್ವಾಮಿಯ ಸಂಪ್ರದಾಯದವರು. ಇವರು ಬಳಸುವ ವಿಶೇಷ ವಾದ್ಯ. "ತೊಂಬೂರಿ"ಯನ್ನು ಬಳಸುತ್ತಾರೆ. ಮತ್ತೊಂದು ಹೆಸರಿನಲ್ಲಿ ಇವರನ್ನು ನಿಳಗಾರರೆಂದು ಕರೆಯುತ್ತಾರೆ. ಮಂಟೇಸ್ವಾಮಿ ಕಥೆಗಳಲ್ಲಿ ಒಂದು ರೀತಿಯ ರಗಳೆ ಕಂಡುಬರುತ್ತದೆ. ಗೊರವರು ಮೈಲಾರ ಲಿಂಗ ಅಥವಾ ಹಿರಿಯ ಮೈಲಾರಲಿಂಗ ಈ ಕ್ಷೇತ್ರಕ್ಕೆ ಸೇರಿದ ವೃತ್ತಿಗಾಯಕರಾಗಿದ್ದಾರೆ. ಇವರು ದಕ್ಷಿಣಕರ್ನಾಟಕದಲ್ಲಿ ಹರಡಿಕೊಂಡಿರುವ ಜೋಗಿಗಳು ಚುಂಚನಗಿರಿ ಸಂಪ್ರದಾಯಕ್ಕೆ ಸೇರಿದವರು. ಇವರು ವೃತ್ತಿಗಾಯಕ ಕಥೋಪಜೀವಿಗಳೇ ಆಗಿದ್ದರೂ ಇವರು ಉಳಿದ ಸಂಪ್ರದಾಯಿಕ ವೃತ್ತಿಗಾಯಕರಿಗಿಂತ ವಿಶಿಷ್ಟರಾದವರು ಆಗಿದ್ದಾರೆ. ವೃತ್ತಿಯಲ್ಲಿರುವ ಭಿನ್ನತೆಯನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಅಭಿಪ್ರಾಯಪಟ್ಟಿದ್ದಾರೆ.

ಜುಂಜಪ್ಪನ ಪರಂಪರೆಗೆ ಸೇರದ ಇವರು ಕಾಡುಗೊಲ್ಲರು ಜುಂಜಪ್ಪನ ಗಣೆಯನ್ನು ಹೊತ್ತು ಊರೂರು ಮೇಲೆ ಬರುತ್ತಾರೆ. ಇವರು ಪರಂಪರೆಯನ್ನು ಉಳಿಸಿಕೊಂಡು ಬಂದ ವೃತ್ತಿಗಾಯಕ ವರ್ಗಕ್ಕೆ ಸೇರಿದವರು, ಜುಂಜಪ್ಪನ ಕಾಣಿಕೆಯನ್ನು ಇವರು ಸಂಗ್ರಹಿಸಿರುವುದರಿಂದ ಇವರನ್ನು 'ಕಾಣಿಕೆಯವರು' ಎಂದೂ ಕರೆಯುತ್ತಾರೆ. ಈ ಜುಂಜಪ್ಪನ ಕ್ಷೇತ್ರ ಮೊದಲಿಗೆ ಚಿತ್ರದುರ್ಗಾ ಜಿಲ್ಲೆಯಲ್ಲಿ ಅನಂತರ ಹಾಗಲವಾಡಿಯ ಬಳಿಗೆ ಯಾರೋ ತಂದೋ ಸಾಗಿಸಿದರೆಂಬ ನಂಬಿಕೆ ಕಂಡುಬರುತ್ತದೆ. ಹಾಗೆಯೇ ಕಂಡುಬರುವ ಮತ್ತೊಂದು ಕಥಾಮೊ ಜೀವಿಗಳೆಂದರೇ, "ಲೌಕಿಕಥೋಪ ಜೀವಿಗಳು ಯಾವ ಸಂಪ್ರದಾಯಕ್ಕೂ ಸೇರದೆ ಶುದ್ದ ಕಲೋಪಾಸಕರು" ಕತೆಯನ್ನೇ ಒಂದು ವೃತ್ತಿಯನ್ನಾಗಿ ಮಾಡಿಕೊಂಡು ಜೀವಿಸುವವರು, ದೊಂಬಿದಾಸರು, ಹೆಳವರು ಮತ್ತು ತೆಲಗು ಬಣಜಿಗರು ಮುಖ್ಯವಾಗಿ ಕಾಣಬಯಸುತ್ತಾರೆ. ಕಲೆಗಳ ವಂಶಪಾರಂಪರಿಕತೆ ಮತ್ತು ಈ ಕಲೆಯ ವಿಸ್ತಾರವನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಸಂಶೋಧಿಸಿದ್ದಾರೆ.

ಕರಪಾಲ ಒಂದು ಬಗೆಯ ಮೇಳದವರು. ಇದರಲ್ಲಿ ಸಾಹಿತ್ಯ ಸಂಗೀತ-ನೃತ್ಯ ಮೂರು ಸೇರಿಕೊಂಡಿರುತ್ತವೆ. ಇವರು ಕಾಡುಸಿದ್ದಮ್ಮನ ಕಥೆ, ಬಸವಕುಮಾರ ಲೋಹಿತಕುಮಾರ, ನೀಲಕಂಠರೂಪಾವತಿ ಮುಂತಾದ ಕಥೆಗಳನ್ನು ಹಾಡುತ್ತಾರೆ. ಹೆಳವರು ವಂಶವಳಿಗಳನ್ನು ಹೇಳುವುದರಲ್ಲಿ ಹೆಸರಾದವರು; ಜೊತೆಗೆ ದೇವರ ಮೇಲೆ ಸೊಗಸಾಗಿ ಹಾಡುತ್ತಾರೆ. "ಇವರ ವಾದ್ಯ ಘಂಟೆ" ಇದು ವಂಶಪಾರಂಪರ್ಯವಾಗಿ ಅವರಿಗೆ ಬಂದದ್ದು.

ಈ ಹೆಳವರು ಒಕ್ಕಲಿಗರಲ್ಲಿ ನಾವು ಒಬ್ಬರೆಂದು ಹೇಳಿಕೊಳ್ಳುತ್ತಾರೆ. ಮನೆದೇವರ ಹಿರಿಮೆಯನ್ನು ಹಲವು ವಿಶೇಷಣಗಳೊಂದಿಗೆ ಸ್ವಾರಸ್ಯವಾಗಿ ಹೊಗಳಿ ಹಾಡುತ್ತಾರೆ.

"ನಿನ್ನ ಕುಲವೆತ್ತಿ ಕೊಂಡಾಡೇವೊ
ಆನೆಗೂಲರ ಗೌಡರ ಮುದ್ದಿನ ಮಗಳೆ
ನಿನ್ನ ಕುಲವೆತ್ತಿ ಕೊಂಡಾಡೇವೊ
ನಿನ್ನಪ್ಪ ಧೀರ ಮನೆಸ್ವಾಮಿ ಬಿದಿರೆ ಬೈರವಲಿಂಗ
ಬಿದಿರೆ ಬೈರವಲಿಂಗನ ಮುದ್ದಿನ ಹೆಣ್ಣುಮಗಳೆ
ನಿಮ್ಮಪ ಧೀರ ಮನೆಸ್ವಾಮಿ ಹೊಂಗೆ ಲಕ್ಷ್ಮಿ"

ಹೀಗೆ ಜುಂಜಪ್ಪನನ್ನು ಹಾಡಿನ ಮೂಲಕ ಹೊಗಳುತ್ತಾರೆ. ದೊಂಬಿದಾಸರು ವಿಶೇಷವಾಗಿ "ಬೆಂಗಳೂರು, ತುಮಕೂರು, ಮೈಸೂರು, ಮಂಡ್ಯಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಇವರು ಹೊರಗಿನಿಂದ ಬಂದು ನೆಲಸಿದವರು. ಇವರ ಪ್ರಮುಖ ಪ್ರವೃತ್ತಿ ನಾಟಕ ಮಾಡುವುದೇ ಆದರೂ ಎರಡು ಮೂರು ಜನ ಸೇರಿಕೊಂಡು ಜನ ಬಯಸಿದಾಗ ಕತೆಯನ್ನು ಮಾಡುತ್ತಾರೆ. ಈ ಪ್ರವೃತ್ತಿಯನ್ನು ಅಳವಡಿಸಿಕೊಂಡಿರುವುದರಿಂದಲೋ ಏನೋ "ದಾಸರ ಆಟ ಆಟವಲ್ಲ, ದೋಸೆಯ ಊಟ ಊಟವಲ್ಲ" ಎಂಬ ಗಾದೆ ಹುಟ್ಟಿಕೊಂಡಿದೆ ಎಂದಿದ್ದಾರೆ. ಏಕತಾರಿಯನ್ನೂ ನುಡಿಸಿಕೊಂಡು ಇವರು ಹಾಡುವ ಮಾಗಡಿ ಕೆಂಪೇಗೌಡ, ಗಂಗೇಗೌರಿ ಕಥೆಗಳು ಅತ್ಯಂತ ಪ್ರಸಿದ್ಧವು. ಲೌಕಿಕತೆಗಳು, ಕೃಷ್ಣ ಕೊರವಂಜಿ, ಬಾಲನಾಗಮ್ಮ, ಕಲಿಯುಗದ ಬಾಲೆ, ಬಂಜೆಹೊನ್ನಮ್ಮ ಇವು ಮುಖ್ಯವಾದವುಗಳಾಗಿ ಕಂಡುಬರುತ್ತವೆ. "ತೆಲಗು ಜಂಗಮರು, ಮತ್ತೊಂದು ಬಗೆಯ ವೃತ್ತಿಗಾಯಕರು". ಇವರು "ತುಮಕೂರು ಜಿಲ್ಲೆಯಲ್ಲಿ ಮಾತ್ರ ಕಂಡುಬರುತ್ತಾರೆ. ಏಕತಾರಿಯ ಸಹಾಯದಿಂದ ಇವರು ಬಾಲನಾಗಮ್ಮ ಕತೆಯನ್ನು ಹಾಡುತ್ತಾರೆ. ಇಲ್ಲಿ ಪ್ರಸ್ತಾಪಿಸಿರುವ ಹತ್ತು ಬಗೆಯ ವೃತ್ತಿಗಾಯಕ ಕಥೋಪಜೀವಿಗಳನ್ನು ಸಂಶೋಧಿಸಿ ಬೆಳಕಿಗೆ ತಂದ ಕೀರ್ತಿ ಡಾ. ಪರಮಶಿವಯ್ಯರವರಿಗೆ ಸಲ್ಲುತ್ತದೆ. ಈ ವೃತ್ತಿಗಾಯಕರುಗಳಿಂದ ಸಂಗ್ರಹಿಸಿ ಇಟ್ಟಿರುವ ಸಾಹಿತ್ಯ ರಾಶಿಯ ಭಂಡಾರವೇ ಅವರ ಬಳಿ ಇದೆ. ಇವರು ಸಮಾಜದಲ್ಲಿ ಎಲ್ಲೂ ನಿಲ್ಲದೆ ಆಯಾವರ್ಗದ ವೃತ್ತಿಗಾಯಕರು ಆಗಿದ್ದಾರೆ. ಇಲ್ಲಿ ವೃತ್ತಿಗಾಯಕರ ವೃತ್ತಿಯ ಮಹತ್ವ ಮತ್ತು ಪ್ರೌಢಿಮೆಯನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಶೋಧಿಸಿದ್ದಾರೆ.

ಆ ವೃತ್ತಿಗೆ ಸಂಬಂಧಿಸಿದಂತೆ, ದೇವರ ಬಗ್ಗೆ ಮತ್ತು ಸಂಸ್ಕೃತಿಯ ಬಗ್ಗೆ ಊರೂರಲ್ಲಿ ಹಾಡುತ್ತ, ಅವರ ಕುಲದೇವರ ಬಗ್ಗೆ ಧ್ಯಾನದಲ್ಲಿ ಮುಳುಗುತ್ತಾ ಅಲ್ಲಿಯ ಗ್ರಾಮಸ್ಥರಿಂದ

ಕೊಡುವ ದವಸ ಧಾನ್ಯಗಳನ್ನು ಮತ್ತು ಉಡುಗೊರೆಯನ್ನು ಪಡೆಯುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ಇವರಿಂದ ಹಳ್ಳಿಯಲ್ಲಿದ್ದ ಜಾನಪದ ಸಂಸ್ಕೃತಿ, ಹಬ್ಬ, ಆಚರಣೆಗಳು ಸಮಪ್ರದಾಯ ನಂಬಿಕೆ ಉಳಿಯುವಿಕೆಗೆ ದಾರಿಯಾಯಿತು. ಒಂದೆಡೆ ಜನಪದ ಕಾರ್ಯದಿಂದ ಜೀವನ ಸಾಗುತ್ತಿದ್ದರೆ. ಮತ್ತೊಂದೆಡೆ ಸದ್ದಿಲ್ಲದಂತೆ ಜನಪದದ ಸಂಗ್ರಹ ಕಾರ್ಯಭಾರದಿಂದ ಸಾಗುತ್ತಿತ್ತು. ಇಂದಿನ ಶತಮಾನಗಳಲ್ಲಿ ಜಾನಪದ ಸಂಸ್ಕೃತಿ ಆಚರಣೆಗಳು ಅಳಿಸಿಹೋಗುತ್ತಿವೆ ಮತ್ತು ವೃತ್ತಿಗಾಯಕರು ವೃತ್ತಿಗೆ ಸಂಬಂಧಿಸಿದ ನಾಟಕ ದೇವರ ಹಾಡುಗಳು ಕಲೆಗಳು ಮುಂತಾದವು. ಇಂದಿನ ಸಿನಿಮಾ ಪ್ರಪಂಚದಿಂದ ದೂರಸರಿದಿವೆ. ಜಾನಪದ ಕುರಿತಾಗಿ ಜಾನಪದದ ಹೊಸ ಹೊಸ ಕ್ಷೇತ್ರಗಳಲ್ಲಿ ಸಂಶೋಧನಾಕಾರ್ಯ ನಡೆಯಬೇಕಾಗಿದೆ. ಆದ್ದರಿಂದ ಜನಪದ ಉಳಿಯುವಿಕೆಗೆ ದಾರಿಯಾಗುತ್ತದೆ ಎಂಬುದಾಗಿ ಹೇಳುತ್ತ ಹಬ್ಬ, ಆಚರಣೆ, ಸಂಪ್ರದಾಯ ಎಲ್ಲದರಲ್ಲಿಯೂ ಜನಪದದ ನಂಟಿದೆ ಎಂದು ಜನಪದ ಮತ್ತು ಆಚರಣೆಗಳ ಬಗ್ಗೆ ಪ್ರೊ. ಡಿ.ಕೆ.ರಾಜೇಂದ್ರ ಅವರು ತಿಳಿಸಿದ್ದಾರೆ.

ಮಂಡ್ಯಜಿಲ್ಲೆಯ ಜನಪದ ಸಾಹಿತ್ಯ ಎಂಬ ಲೇಖನದಲ್ಲಿ ಜಾನಪದ ಜನಪದರ ಮೂಲ ಸ್ಥಿತಿಗತಿಗಳನ್ನು ಆಚಾರ ವ್ಯವಹಾರಗಳನ್ನು ನಂಬಿಕೆ ನಡಾವಳಿಕೆಯನ್ನು ಇವುಗಳ ಹಾಸುಬೀಸನ್ನೂ ಅರಿಯಲು ಇವರು ಬಹುಮುಖ್ಯ ಸಾಧನವಾಗಿದೆ. ಅದರಲ್ಲಿ ಅವರ ಎಲ್ಲ ಸಹಜ ಪ್ರವೃತ್ತಿಗಳೂ ಸ್ಪಷ್ಟವಾಗಿ ಅಭಿವ್ಯಕ್ತಿಗೊಂಡಿರುತ್ತವೆ. ಮಾನವನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜಾನಪದವು ಅತ್ಯಂತ ಮಹತ್ತರವಾದ ವಿಷಯವಾಗಿದೆ. ಈ ಐತಿಹಾಸಿಕ ವಿಜ್ಞಾನವು ಬರಿಯ ಊಹೆಯನ್ನು ಅವಲಂಬಿಸಿರುವ ಶಾಸ್ತ್ರವಾಗಿರದೆ ವಾಸ್ತವಿಕ ಆಧಾರಗಳ ಮೇಲೆ ಬೆಳೆಯುತ್ತಿರುವ ಅಧ್ಯಯನದ ವಿಷಯವಾಗಿದೆ. ಈ ದೃಷ್ಟಿಯಿಂದ ಒಂದು ರಾಷ್ಟ್ರದ ಅಥವಾ ಒಂದುನಾಡಿನ ಮೂಲ ಸಂಸ್ಕೃತಿಯ ಅರಿವನ್ನು ಮಾಡಿಕೊಳ್ಳಲು ಜಾನಪದ ಕ್ಷೇತ್ರದ ಮೊರೆ ಹೋಗಬೇಕಾಗುತ್ತದೆ. ಇಲ್ಲಿ ಪ್ರೊ. ಡಿ.ಕೆ. ರಾಜೇಂದ್ರ ಅವರು ಜಾನಪದದ ಅಗತ್ಯದ ಬಗ್ಗೆ ಅರಿವು ಮೂಡಿಸಿದ್ದಾರೆ.

"ಜನಪದ ಸಾಹಿತ್ಯ ಸಾಮೂಹಿಕ ಶ್ರಮದ ಫಲ" ಅವರ ನಿತ್ಯ ಬದುಕಿನ ಸತ್ಯಬದುಕಿನ ಅನೂಚಾನವಾದ ಎಲ್ಲಾ ಬಗೆಯ ಸಂಸ್ಕೃತಿಯ ಪರಿಕರಗಳೂ ಆಗಿ ಅವರ ಸಾಹಿತ್ಯದಲ್ಲಿ ಅವತರಿಸಿದ್ದೇವೆ. ಭಾರತೀಯ ಬೃಹತ್ ಕೃತಿಗಳಾದ ರಾಮಾಯಣ, ಮಹಾಭಾರತ, ಮಹಾಕಾವ್ಯಗಳು ರೂಪುಗೊಂಡು ಬೆಳೆದದ್ದು ಜನಪದ ಕಥೆಗಳನ್ನಾಗಿ ಆಧರಿಸಿಯೇ ಎಂಬ ಅಂಶ ಗಮನಾರ್ಹವಾದ ಅಂಶ. ಒಂದು ಜಿಲ್ಲೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ

ಪ್ರಾದೇಶಿಕ ವೈಶಿಷ್ಟ್ಯತೆ ಇದ್ದೇ ಇರುತ್ತದೆ. ಈ ದೃಷ್ಟಿಯಿಂದ ಒಂದೊಂದು ಜಿಲ್ಲೆಯ ಜಾನಪದ ಕ್ಷೇತ್ರವನ್ನೂ ಪ್ರತ್ಯೇಕವಾಗಿಯೇ ಗಮನಿಸುವುದರಲ್ಲಿ ಔಚಿತ್ಯವಿದೆ. ಒಂದು ಜಿಲ್ಲೆಯ ಕೊಡುಗೆಗಿಂತ ಇನ್ನೊಂದು ಜಿಲ್ಲೆಯ ಕೊಡುಗೆ ಯಾವ ರೀತಿಯಿಂದ ಉತ್ತಮವಾಗಿದೆ, ವೈಶಿಷ್ಟ್ಯಪೂರ್ಣವಾಗಿದೆ ಎಂಬುದು ಇದರಿಂದ ಬೆಳಕಿಗೆ ಬರುತ್ತದೆ. ಜನಪದ ಸಾಹಿತ್ಯ ಸಂಗ್ರಹಣೆ ಮತ್ತು ಪ್ರಕಟಣೆಯ ಕಾರ್ಯದಲ್ಲಿ ಮಂಡ್ಯಜಿಲ್ಲೆ ತನ್ನ ವೈಶಿಷ್ಟ್ಯವನ್ನು ಮೆರೆದಿದೆ. ಜನಪದ ಸಾಹಿತ್ಯದ ಅಪೂರ್ವ ಸಂಪತ್ತು ಇಲ್ಲಿ ದೊರೆಯುತ್ತದೆ. ಮಂಡ್ಯಜಿಲ್ಲೆಯು ಜಾನಪದದಲ್ಲಿ ಭೌಗೋಳಿಕ ಚೌಕಟ್ಟುಹೊಂದಿದೆ. ಸಹಜವಾಗಿಯೇ ಅಲ್ಲಿ ನಿರ್ಮಿತ–ಗೊಂಡಿರುವ ಶ್ರೀ "ಆದಿಚುಂಚನಗಿರಿಯ" ಮೇಲೆ ರಚಿತವಾಗಿರುವ ಸಾಹಿತ್ಯ ಅಪಾರವಾಗಿದೆ. ಇದೊಂದು ಪವಿತ್ರಯಾತ್ರಾಸ್ಥಳ. ಇಲ್ಲಿನ ಶ್ರೀ ಗಂಗಾಧರೇಶ್ವರನ ದೇವಾಲಯ ಎಂತಹವರ ಮನಸ್ಸನ್ನು ಸೂರೆಗೊಳಿಸುತ್ತವೆ. "ಇಲ್ಲಿನ ಶ್ರೀಮಠ ಕಲ್ಯಾಣಿ ಗುಡಿಗೋಪುರಗಳು, ಗಳಿಗೆಕಲ್ಲು, ಚೋಳರಕಂಬ ಗವಿಸಿದ್ದನ ಗುಡಿ, ಕತ್ತಲ ಸೋಮೇಶ್ವರನ ಗುಡಿ. ಬಾಗಿಲು ಭೈರವನಗುಡಿ ಮುಂತಾದವುಗಳನ್ನು ಕುರಿತು ಭಕ್ತಾದಿಗಳು ನಾನಾವಿಧವಾಗಿ ಹಾಡಿರುವುದು ಒಂದು ಸಂಗತಿ. ಈ ಒಂದು ಕ್ಷೇತ್ರಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನೇ ಅನೇಕ ಮಂದಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಬಗೆಯ ಸಾಹಿತ್ಯ ರೂಪುಗೊಳ್ಳಲು ಅದಕ್ಕಿರುವ ಈ ವೈಶಿಷ್ಟ್ಯವೇ ಕಾರಣ ಎಂಬುದನ್ನು ಇಲ್ಲಿ ಮನಗಾಣಬಹುದು. ಶಿವರಾತ್ರಿ ನವರಾತ್ರಿಗಳ ಸಂದರ್ಭದಲ್ಲಿ ಬೆಟ್ಟದ ಮೇಲೆ ಯಾತ್ರಾರ್ಥಿಗಳಾಗಿ ಬಂದು ಸೇರುವವರ ಸಂಖ್ಯೆ ಇಲ್ಲಿ ವಿಪುಲವಾಗುತ್ತದೆ. ವಿಶೇಷ ಪೂಜಾ ಕಾರ್ಯಗಳ ಜೊತೆಗೆ ಚುಂಚನಗಿರಿ ಗೀತೆಗಳು. ಪ್ರಾಕೃತಿಕ ಸೌಂದರ್ಯಕ್ಕೆ ಬೆರಗಾಗಿ ಕಟ್ಟಿರುವ ಸಾಹಿತ್ಯ ಅಪಾರವಾಗಿದೆ ಎಂಬುದನ್ನು ಹಾಡಿನಲ್ಲಿ ಕಾಣಬಹುದು. ಒಂದು ಜಿಲ್ಲೆಯಲ್ಲಿ ಸಾಮೂಹಿಕವಾಗಿ ಅಡಗಿರುವ ಜನಪದ ಸೌಂದರ್ಯವನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಪತ್ತೆಹಚ್ಚಿದ್ದಾರೆ.

"ಆದಿಚುಂಚನಗಿರಿಯ ಹೋಗಿ ನೋಡುವ ಬನ್ನಿ
ದಿಕ್ಕು ದಿಕ್ಕಿಗೂ ಹುಲಿಮುಖ ಬೆಟ್ಟಕ್ಕೆ
ಅಪ್ಪ ಭೈರವನ ದೊರೆತನ
ಆ ಬೆಟ್ಟ ಈ ಬೆಟ್ಟ ನಡುವೆ ತಾವರೆ ಕೊಳ
ತಾವರೆ ಹೂವು ಕುಯ್ಯ ಬಂದ। ಭೈರವ
ತಾವೊಳ್ಳೆದೆಂದೊ ನೆಲೆಗೊಂಡ
ಚುಂಚನಗಿರಿ ಹಾದೀಲಿ ಸಾಲು ತೆಂಗಿನಮರ
ಸುತ್ತ ನೋಡಿದರೆ ಸುರಹೊನ್ನೆ। ಮರದಡಿಯ
ಭೈರವ ಸ್ವಾಮಿ ಗುಡಿಕಟ್ಟಿ"

ಅಲ್ಲಿನ ಸೌಂದರ್ಯ ಮತ್ತು ಶ್ರೀಮಂತಿಕೆ ಕೊನೆಯಿಲ್ಲದಂತೆ ಬೆಳೆಯುತ್ತಾ ಹೋಗುತ್ತದೆ. ಅಲ್ಲಿ ಉಳಿದ ವಿಷಯಗಳಿಗೂ ಸಂಬಂಧಿಸಿದಂತೆ ರಚಿತವಾಗಿರುವ ಸಾಹಿತ್ಯ ಅಪೂರ್ವವಾಗಿದೆ. ಮಂಡ್ಯಜಿಲ್ಲೆಯ ಜನಪದ ಸಾಹಿತ್ಯ ಇದರಿಂದಾಗಿ ಒಂದು ಪಟ್ಟು ಮಿಗಿಲಾಗಿ ತನ್ನ ವೈಶಿಷ್ಟ್ಯವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ ಎನ್ನುವುದನ್ನು ಕಡೆಗಣಿಸುವಂತಿಲ್ಲ. ಶ್ರೀ ಆದಿಚುಂಚನಗಿರಿಯ ಜನಪದ ಗೀತೆಗಳು, ಆದಿಚುಂಚನಗಿರಿ, ಭಕ್ತರು ಬರುತ್ತಾರೆ. ಗಂಗಾಧರನ ತೇರು, ಕುಸುಮಾಲೆ ಮಾಳಮ್ಮ, ಕನ್ನೆಕಂಬದವ್ವ ನೆನೆದೇವು ಮುಂತಾದ ಕೃತಿಗಳು ಒಂದು ಕ್ಷೇತ್ರಕ್ಕೆ ಸಂಬಂಧಿಸಿದಂತೆ ರೂಪಿತವಾದ ಸಾಹಿತ್ಯ ಪ್ರಕಾರವಾಗಿದೆ. ಸಾಹಿತ್ಯದಲ್ಲಿ ಎಂತಹ ಮಹತ್ವವಿರುತ್ತದೆ ಎಂಬುದನ್ನು ಮನಗಾಣಬಹುದಾಗಿದೆ. ಹಾಗೆಯೇ ಮಂಡ್ಯದಲ್ಲಿ, ಮಂಟೇಸ್ವಾಮಿ ಕಂಸಾಳೆಯವರು. ಸಿದ್ದಾಪ್ಪಾಜಿ, ದೇವರಗುಡ್ಡ ಮುಂತಾದ ವೃತ್ತಿಗಾಯಕರು ಜನಪದರು ಕಂಡುಬರುತ್ತಾರೆ. ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಜಿಲ್ಲೆಯಲ್ಲಿ ಅಪಾರ ಸಂಪತ್ತಿನ ಬಹುಪಾಲು ಸಾಹಿತ್ಯ ಸಂಗ್ರಹವಾಗಿದೆ. "ಡಾ. ಜೀ.ಶಂ.ಪರಮಶಿವಯ್ಯನವರ ನೆನೆದೇವು, ನಮ್ಮ ಜನಪದ ಸಾಹಿತ್ಯ, ಜನಪದ ಸಾಹಿತ್ಯ ಸಮೀಕ್ಷೆ, ಜನಪದ ಖಂಡಕಾವ್ಯಗಳು ಜನಪದ ಕಾವ್ಯಕಥೆಗಳು. ಜನಪದ ಸಾಹಿತ್ಯಕ್ಕೆ ಮಂಡ್ಯಜಿಲ್ಲೆಯ ಕೊಡುಗೆ ಅಪಾರ ಎಂಬುದನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಗೊತ್ತುಪಡಿಸಿದ್ದಾರೆ.

ಬಯಲಾಟದ ವೇಷಭೂಷಣಗಳು: ಈ ಪ್ರಬಂಧದಲ್ಲಿ ವೇಷ-ಭೂಷಣಗಳು ಯಕ್ಷಗಾನ ಬಯಲಾಟದ ಒಂದು ಆಕರ್ಷಕ ಅಂಗ. ಯಕ್ಷಗಾನ ಕಲೆಗೆ ಹೆಚ್ಚಿನ ಮೆರುಗನ್ನು ಬೆಡಗನ್ನೂ ತುಂಬುವ ಒಂದು ಸೌಂದರ್ಯ ಸಾಧಕನ ನಮ್ಮ ಜಾನಪದರ ಅಪ್ರತಿಮ ಕಲ್ಪನಾ ಶಕ್ತಿ, ಕಲಾಶಕ್ತಿ ಪ್ರತಿಭಾಶಕ್ತಿ ಇವುಗಳು ಇಲ್ಲಿ ಅಸಾಧಾರಣವಾಗಿ ಸಮಾವೇಶಗೊಂಡಿವೆ. ದೇವರನ್ನು ಯಾರು ಕಂಡಿಲ್ಲ ಆದರೂ ದೇವರ, ವೇಷಭೂಷಣ, ಆಕಾರ, ವಿಕಾರಗಳನ್ನು, ಕಲ್ಪನ ದೃಷ್ಟಿಯಿಂದ ನಮ್ಮವರು ಪ್ರತಿಬಿಂಬಿಸಿದ್ದಾರೆ. ಯಕ್ಷಗಾನ ಬಯಲಾಟದಲ್ಲಿ ಬರುವ ವ್ಯಕ್ತಿಗಳು ಅತಿಮಾನವ ವರ್ಗಕ್ಕೆ ಸೇರಿದವರು ಅಲ್ಲಿಯ ಕಥಾಭಾಗವೇ ಅಂತಹದ್ದು. ರಾಮಾಯಣ, ಮಹಾಭಾರತ, ಭಾಗವತ ಹಾಗೂ ಪುರಾಣಗಳಲ್ಲಿಯ, ವ್ಯಕ್ತಿಗಳು ಅತಿಮಾನವರಂತೆಯೇ ಅಪ್ರತಿಮರು ಕೂಡ, ಇಲ್ಲಿ ಬರುವ ವ್ಯಕ್ತಿಗಳಿಗೆಲ್ಲ ನಮ್ಮವರು ಹೊಂದಿರುವ ವೇಷ-ಭೂಷಣಗಳು ಹಾಗೂ ಮುಖವರ್ಣಿಕೆ, ವೈಶಿಷ್ಟ್ಯಪೂರ್ಣ ಹಾಗೂ ವೈವಿಧ್ಯಪೂರ್ಣ ಒಳಗೊಂಡಿದ್ದಾರೆ. ಈ ಬಗೆಯ ಅತಿಮಾನವ ವ್ಯಕ್ತಿಗಳನ್ನು ಮೇಲಿನ ಕಥಾಭಾಗಧಾರಿತ ಬಯಲಾಟಗಳನ್ನು ಬಿಟ್ಟರೆ ಮತ್ತೆ ನಾವು ಕಾಣುವುದು ಜನಪದ ನೃತ್ಯಗಳಲ್ಲೆ. ಈ

ಅತಿಮಾನವರ ವೇಷಭೂಷಣಗಳು ಯಕ್ಷಗಾನ ಬಯಲಾಟದ ವೇಷ ಭೂಷಣಕ್ಕೆ ಹತ್ತಿರವಾದವುಗಳಾಗಿ ಕಂಡುಬರುತ್ತವೆ. ಒಂದು ಕಲೆಯ ವೇಷಭೂಷಣಗಳು ಮತ್ತೊಂದು ಕಲೆಯ ವೇಷಭೂಷಣಕ್ಕೆ ಸರಿಸಾಟಿ ಇರುವುದಿಲ್ಲ. ಹೀಗೆ ವೇಷಭೂಷಣಗಳ ವಿಭಿನ್ನತೆಯನ್ನು ಲೇಖಕರು ಗುರುತಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಭೂತನೃತ್ಯದ ವೇಷ-ಭೂಷಣ ಹಾಗೂ ಮುಖವರ್ಣಿಕೆಯ ಪ್ರಭಾವ ಯಕ್ಷಗಾನದ ವೇಷಭೂಷಣಗಳ ಮೇಲೆ ಪ್ರಬಲವಾಗಿ ಆಗಿವೆ ಎಂಬುದನ್ನು ಮರೆಯುವಂತಿಲ್ಲ. ಬಯಲು ಸೀಮೆಯಲ್ಲಿಯೂ ವಿಶೇಷವಾಗಿ ಕಂಡುಬರುವ ಸೋಮನಕುಣಿತ ವೀರಭದ್ರನ ಕುಣಿತ ಹಾಗೂ ಮುಖವರ್ಣಿಕೆಗಳ ಪ್ರಭಾವ ಮೂಡಲಪಾಯ ಯಕ್ಷಗಾನ ಬಯಲಾಟದ ವೇಷಭೂಷಣಗಳ ಮೇಲೆ ಉಂಟಾಗಿರುವುದು ಕಡೆಗಣಿಸುವಂತಹದ್ದಲ್ಲ. ಆದರೂ ತೆಂಕಟಣತಿಟ್ಟು ಮತ್ತು ಬಡಗಣತಿಟ್ಟು ವೇಷಭೂಷಣದಲ್ಲೂ ವ್ಯತ್ಯಾಸಗಳು ಕಂಡುಬರುತ್ತವೆ. ಮೂಡಲಪಾಯ ಮತ್ತು ಪಡುವಲಪಾಯ ಸಂಪ್ರದಾಯಗಳ ವೇಷಭೂಷಣಗಳಲ್ಲಿ ಕಂಡುಬರುವ ಭೇದಗಳಲ್ಲಿ ಪ್ರಮುಖವಾದವುಗಳೆಂದರೆ ಪಗಡಿಸುತ್ತುವ ಕ್ರಮ ಮೂಡಲ ಪಾಯದಲ್ಲಿ ಕಂಡುಬರುವುದಿಲ್ಲ. ಆದರೂ ರಾಕ್ಷಸ ಕಿರೀಟದಲ್ಲಿಯೂ ವ್ಯತ್ಯಾಸವಿದೆ. ದಕ್ಷಿಣ ಕನ್ನಡ ಜಿಲ್ಲೆಯ ರಾಕ್ಷಸವೇಷದ ಕಿರೀಟ ಕಥಕ್ಕಳಿಯ ರಾಕ್ಷಸವೇಷದ ಕಿರೀಟ ಇವೆರಡಕ್ಕೂ ಹೆಚ್ಚು ಸಾಮ್ಯ ಕಂಡುಬರುತ್ತದೆ." ವರ್ಷಕ್ಕೆ ಹಾಕಿಕೊಳ್ಳುವ ಆಭರಣ ಹಾಗೂ ಭುಜಕೀರ್ತಿಗಳಲ್ಲಿಯೂ ವ್ಯತ್ಯಾಸವಿರುವುದನ್ನು ಕಾಣಬಹುದು. ರಾಕ್ಷಸವೇಷದ ಮುಖವರ್ಣಿಕೆಯ ಕ್ರಮದಲ್ಲಿ ಸಾಕಷ್ಟು ಅಂತರವಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಎರಡು ಸಂಪ್ರದಾಯಗಳಿಗೂ ಹಲವು ಸಣ್ಣ ಪುಟ್ಟ ಪ್ರಭೇದಗಳಿರುವುದನ್ನು ಕಾಣಬಹುದು. ಇಷ್ಟಾದರೂ ಕರ್ನಾಟಕದ ಯಕ್ಷಗಾನ ಬಯಲಾಟದ ವೇಷಭೂಷಣಗಳ ರಮ್ಯತೆ ವೈವಿಧ್ಯಮಯವಾದುದು. ಎಂತವರನ್ನು ಆಕರ್ಷಿಸಿ ಬೆರಗುಗೊಳಿಸುವಂತಹದು ಎಂದರೆ ತಪ್ಪಾಗಲಾರದು. ಲೇಖಕರು ವೇಷಭೂಷಣಗಳ ಬಗ್ಗೆಯೇ ಆಳವಾದ ಸಂಶೋಧನೆ ನಡೆಸಿರುವುದು ಅವರ ಸಂಶೋಧನೆಗೆ ಹಿಡಿದ ಕನ್ನಡಿಯಾಗಿದೆ ಹಾಗೂ ವೇಷಭೂಷಣಗಳ ನೆಲೆಬೆಲೆ ಮತ್ತು ಮೂಲವನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. ಯಕ್ಷಗಾನಗಲ್ಲಿಯ ಪಾತ್ರ ಸೃಷ್ಟಿಯ ಕ್ರಮದಂತೆಯೇ ಅವುಗಳ ವೇಷಭೂಷಣಗಳ ಕ್ರಮದಲ್ಲಿಯೂ ಒಂದು ಹೊಂದಾಣಿಕೆ ಏರ್ಪಟ್ಟಿರುವುದನ್ನು ಕಾಣಬಹುದು.

ಒಂದು ಪಾತ್ರವನ್ನು ನೋಡುತ್ತಿದ್ದ ಹಾಗೆಯೇ ಕೇವಲ ವೇಷಭೂಷಣಗಳ ನೋಡುವುದರಿಂದಲೇ ಇಂತಿಂಥ ಪಾತ್ರ ಎಂದು ಗುರುತಿಸಲು ನೆರವಾಗುವಷ್ಟು ಅವುಗಳ

ಪರಿಪೂರ್ಣತೆಯನ್ನು ಪಡೆದುಕೊಂಡಿದೆ. ಮೂಡಲಪಾಯ, ಯಕ್ಷಗಾನ, ಬಯಲಾಟದಲ್ಲಿಯ ಕಿರೀಟಗಳು ಅತ್ಯಂತ ವೈವಿಧ್ಯದಿಂದ ಕೂಡಿವೆ. ಒಂದೊಂದು ಕಿರೀಟದ ವೈಖರಿಯು ಒಂದೊಂದು ಬೆಡಗಿನಿಂದ ಕೂಡಿರುತ್ತದೆ. ಹಾಗೆಯೇ ಒಂದೊಂದು ಪಾತ್ರದ ಘನತೆ ಗೌರವಗಳನ್ನು ಸೂಚಿಸುವಂತೆ ಇವುಗಳು ನಿರ್ಮಾಣವಾಗಿರುತ್ತದೆ, ಕಿರೀಟಗಳಲ್ಲಿಯೇ ರಾಕ್ಷಸಪಾತ್ರಗಳ ಕಿರೀಟಕ್ಕೂ ರಾಜರ ಅಥವಾ ಉಳಿದ ಸೌಮ್ಯ ಪಾತ್ರಗಳ ಕಿರೀಟಕ್ಕೂ ಇರುವ ಅಂತರವನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತಿರುತ್ತದೆ. ಕಿರೀಟ ರಚನೆಯಲ್ಲಿ ಓಡದ ಗಾಜಿನ ಚೂರುಗಳು ಮತ್ತು ಜೀರುಂಡೆ ರೆಕ್ಕೆಯ ಮೇಲಿನ ಮಿಂಚುವಂಥ ಭಾಗವನ್ನು ಕಿರೀಟಗಳಿಗೆ ಹಾಗೂ ಭುಜಕೀರ್ತಿಗಳಿಗೆ ಬಳಸುತ್ತಾರೆ. ಕಿರೀಟದ ಮೇಲೆ ವಿಶಿಷ್ಟ ರೀತಿಯಲ್ಲಿ ಕಲಾಪೂರ್ಣವಾಗಿ ಈ ರೆಕ್ಕೆಗಳನ್ನು ಕೂರಿಸಿ ಅಲಂಕರಿಸುವ ವಿಧಾನ ಅದ್ಭುತವಾಗಿರುತ್ತದೆ. ಇವುಗಳ ಮಧ್ಯೆ ಕನ್ನಡಿಯ ಚೂರುಗಳನ್ನು ವೃತ್ತಾಕಾರವಾಗಿ ಕತ್ತರಿಸಿ ಅಂಟಿಸುತ್ತಾರೆ. ಇದರಿಂದ ಕಿರೀಟಗಳು ಅದ್ಭುತವಾಗಿ ಕಾಣುತ್ತವೆ, ಗಂಧರ್ವ ಪಾತ್ರಗಳ ಹಾಗೂ ರಾಜ ಪಾತ್ರಗಳ ಸ್ಥಾನಮಾನಕ್ಕೆ ಹೆಚ್ಚಿನ ಮೆರುಗನ್ನು ಉಂಟುಮಾಡುತ್ತವೆ, ಹಾಗೆಯೇ ರಾಕ್ಷಸ ಸ್ತ್ರೀ ವೇಷದ ಕಿರೀಟವೂ ಅವುಗಳ ಮುಖವರ್ಣಿಕೆಯಂತೆಯೇ ಭವ್ಯದ್ಭುತವಾಗಿರುತ್ತದೆ. ಬಿದಿರಿನಿಂದ ಹೆಣೆದು ಮಾಡಿದ್ದು, ಈ ಕಿರೀಟ ಬಟ್ಟಲಿನಾಕಾರದಲ್ಲಿರುತ್ತದೆ. ಮೇಲುಭಾಗ ಅಗಲವಾಗಿದ್ದು, ತಳಭಾಗ ತಲೆಯ ಮೇಲೆ ಕೂರುವುದಕ್ಕೆ ಸರಿಹೊಂದುವಷ್ಟು ಅಗಲದಿಂದ ಕೂಡಿರುತ್ತದೆ. ಹೀಗೆ ಆಭರಣಗಳು ವಿಶಿಷ್ಟ ರೀತಿಯ ಅಲಂಕಾರದಿಂದ ರಚಿತಗೊಂಡು ನೋಡುಗರ ಬೆರಗನ್ನು ಹೆಚ್ಚಿಸಿವೆ.

ಮೂಡಲಪಾಯ ಯಕ್ಷಗಾನ ಬಯಲಾಟದ ಮತ್ತೊಂದು ವೈಭವಪೂರ್ಣ ಆಭರಣ ವಿಶೇಷವೆಂದರೆ "ಭುಜಕೀರ್ತಿ ಹಾಗೂ ಎದೆಯನ್ನು ಅಗಲಿಸಿ ತೋರುವಂತಹ ಎದೆಯ ಹಾರ ಇವುಗಳು ಸದಾ ಮರದಿಂದ ಮಾಡಿದವುಗಳೇ. ಇಲ್ಲಿಯ ಭುಜಕೀರ್ತಿಗಳು ಆಕಾರದಲ್ಲಿ ದೊಡ್ಡವಾಗಿದ್ದು, ಯಕ್ಷಕಿನ್ನರರು ಹಾರಿಬರಲು ಹೊಂದಿರುವ ರೆಕ್ಕೆಗಳಂತೆ ವೈಭವಪೂರಿತ-ವಾಗಿರುತ್ತದೆ. ಇವುಗಳಿಗೂ ಕನ್ನಡಿಯಚೂರು ಜೀರಿಂಟೆ ರೆಕ್ಕೆ, ಬಣ್ಣ ಬಣ್ಣದ ಸುನೇರಿಯನ್ನು ಬಳಸುತ್ತಾರೆ. ಇಲ್ಲಿಯ ಭುಜಕಿರೀಟಗಳು, ಪಡುವಲಪಾಯದ ಭುಜಕಿರೀಟಗಳಂತೆ ಮುಳ್ಳುಮುಳ್ಳಾಗಿರದೆ ಎತ್ತರವಾಗಿರದೆ ವಿವಿಧ ಆಕಾರಗಳಿಂದ ಕೂಡಿರುತ್ತವೆ. ವೇಷಭೂಷಣ, ಎದೆಹಾರ, ತೋಳುಬಂದಿ ಮುಂತಾದ ವಸ್ತ್ರಾಪಹರಣಗಳ ಬಗ್ಗೆ ಈ ಶೀರ್ಷಿಕೆಯಲ್ಲಿ ಕರ್ತೃ ಅವುಗಳ ಬಳಕೆ ನೀಡಿ ರೀತಿಕ್ರಮಗಳ ಬಗ್ಗೆ ಗ್ರಾಸವಾಗಿ ಚರ್ಚಿಸಿದ್ದಾರೆ.

ಹಾಗೆಯೇ ವೇಷಭೂಷಣಗಳಲ್ಲಿ ಮತ್ತೊಂದು ಬಗೆಯ ಭೂಷಣಗಳು ಕಂಡುಬಂದಿವೆ. "ಕೊರಳು, ತೋಳು, ಮುಂಗೈ, ಸೊಂಟ ಹಾಗೂ ಎದೆಕಟ್ಟು ಮತ್ತು ಸೊಂಟದಿಂದ ಕೆಳಕ್ಕೆ ವೀರಗಾಸೆಯಂತೆ ಮುಂಭಾಗದಲ್ಲಿ ಬಿಟ್ಟುಕೊಳ್ಳುವ ಆಭರಣ ವಿಶೇಷಗಳು ಮರದಿಂದ ಮಾಡಿದವುಗಳು"[೧] ಕಾಲಂದಿಗೆಯಂತೆ ಕಾಲಿಗೆ ಹಾಕಿಕೊಳ್ಳುವ ಆಭರಣವು ಮರದಿಂದ ಮಾಡಿದವುಗಳು, ಬಣ್ಣಬಣ್ಣದ ಹರಳುಗಳನ್ನು ಅದ್ದಿದ ಚಿನ್ನದ ಆಭರಣದಂತೆ ಅದ್ಭುತ ಮೆರುಗನ್ನು ಒದಗಿಸುತ್ತವೆ. ಆಭರಣಗಳನ್ನು ಧರಿಸುವುದಕ್ಕೆ ಮುನ್ನ ಅವುಗಳ ಹಿನ್ನೆಲೆಗೆ ಸರಿಹೊಂದುವಂಥ ವಸ್ತ್ರಗಳನ್ನು ಧರಿಸುತ್ತಾರೆ. ಈ ವಸ್ತ್ರಗಳ ಆರಿಸುವಿಕೆಯೂ ಆಯಾ ಪಾತ್ರಗಳ ಸ್ವಭಾವಕ್ಕನುಗುಣವಾಗಿರುತ್ತದೆ, ನಾರದ ಹನುಮನಾಯಕ ಇವರ ಪಾತ್ರಗಳ ವೇಷಭೂಷಣ ಮೇಲಿನ ಪಾತ್ರಗಳಿಗಿಂತ ತೀರ ಭಿನ್ನವಾಗಿರುವುದನ್ನು ಕಾಣಬಹುದು. ರಾಕ್ಷಸ ಸ್ತ್ರೀವೇಷಗಳನ್ನು ಬಿಟ್ಟು ಉಳಿದ ಸಾಮಾನ್ಯ ಸ್ತ್ರೀ ವೇಷಗಳನ್ನು ಗಮನಿಸಿದಾಗ ಹೆಚ್ಚು ಕಡಿಮೆ ನಮ್ಮ ಅಂದಿನ ಕಾಲದ ಸ್ತ್ರೀಯರು ಅಲಂಕರಿಸಿಕೊಳ್ಳುವ ರೀತಿಯಲ್ಲೇ ಇದು ಕಂಡುಬರುತ್ತದೆ. ಇಲ್ಲಿ ದೇವತಾ ಸ್ತ್ರೀಯರಿಗೂ ಸಾಮಾನ್ಯ ಸ್ತ್ರೀಯರಿಗೂ ವೇಷಭೂಷಣಗಳಲ್ಲಿ ಅಂಥದೇನು ಕಂಡುಬರುವುದಿಲ್ಲ. ಸ್ತ್ರೀ ವೇಷದ ಶಿರೋಭರಣವೆಂದರೆ ಇದೊಂದು ರಾಣಿಪಾತ್ರದವರಾದರೆ ಇವುಗಳ ಜೊತೆಗೆ ಬೈತಲೆಯ ಮೇಲಿಂದ ಇಳಿದುಬಂದ ಒಂದು ಆಭರಣ ಹಣೆಯ ತುದಿಗೆ ಬಂದು ಮತ್ತಷ್ಟು ಶೋಭೆಯನ್ನುಂಟು ಮಾಡುತ್ತದೆ. ಈ ವೇಷಭೂಷಣಗಳಿಂದ ದೇಶಿಯ ಸಂಸ್ಕೃತಿ ಸಂರಕ್ಷಿಸಲ್ಪಡುತ್ತದೆ. ಹಾಗೂ ವಸ್ತ್ರಾಭರಣ ಕ್ರಮಬದ್ಧತೆಯನ್ನು ತೋರಿಸುತ್ತದೆ. ಆಚರಣೆಗಳು ಸಂಪ್ರದಾಯ, ನಂಬಿಕೆ ಮತ್ತು ಒಂದು ಜನಾಂಗ ನಾಗರಿಕತೆಯನ್ನು ಶಿಸ್ತುಬದ್ಧಕ್ರಮದಿಂದ ಕಾಣಬಹುದಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಜನಪದ ಕ್ಷೇತ್ರಕ್ಕೆ ವೇಷಭೂಷಣಗಳು ಆಭರಣಗಳು ಸಹ ಕೊಡುಗೆಯನ್ನು ನೀಡಿ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಗುರುತಿಸಿಕೊಂಡಿರುವುದನ್ನು ಈ ಶೀರ್ಷಿಕೆಯಲ್ಲಿ ಪ್ರೊ. ಡಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಜನಪದ ಗೀತ ಪ್ರಕಾರಗಳು

ಜನಪದ ಗೀತ ಪ್ರಕಾರಗಳು ಎಂಬ ಸಂಶೋಧನ ಪ್ರಬಂಧದಲ್ಲಿ ಜನಪದ ಕವಿಗಳು, ತಾವು ಓದು ಬರಹ ಬಾರದ ಅನಕ್ಷರಸ್ಥರು, ಅಕ್ಷರದ ಗಂಧವೂ ತಮಗಿಲ್ಲ ಎಂದು ವಿನಯದಿಂದ ತೋಡಿಕೊಂಡಿದ್ದಾದರೂ ಅವರಿಂದ ರಚಿತವಾಗಿರುವ ವೈವಿಧ್ಯಮಯ ಸಾಹಿತ್ಯ ನಮ್ಮನ್ನು ಬೆರಗುಗೊಳಿಸುತ್ತದೆ.

---

೧. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೦೫-೧೦೭.

ಓದುಬರಹದ ಗಂಧವೇ ಇಲ್ಲದ, ಅವರಿಂದ ಹುಟ್ಟಿಕೊಂಡಿರುವ ಸಾಹಿತ್ಯರಾಶಿಯನ್ನು ಗಮನಿಸಿದಾಗ ಅದರ ಸಾಹಿತ್ಯ ಶ್ರೀಮಂತಿಗೆ ಬೆರಗಾದ ಜನವಿಲ್ಲ. ಪಾಮರರೆನ್ನದೆ ಎಲ್ಲ ವರ್ಗದ ಜನರನ್ನೂ ತನ್ನ ತೆಕ್ಕೆಗೆ ಒಳಗಾಗಿಸಬಲ್ಲ ಶಕ್ತಿ ಜಾನಪದ ಸಾಹಿತ್ಯಕ್ಕೆ ಮಾತ್ರವಿರಲು, ಈ ದೃಷ್ಟಿಯಿಂದ ಗಮನಿಸಿದಾಗ ಶಿಷ್ಟ ಸಾಹಿತ್ಯಕ್ಕೆ ದೊರೆತಿರದ ಒಂದು ಸೌಭಾಗ್ಯ ಜನಪದ ಸಾಹಿತ್ಯಕೆ ಮಾತ್ರ ದೊರೆತಿದೆ.

ಶಿಷ್ಟ ಸಾಹಿತ್ಯ ಪಂಡಿತರಿಗೆ ಮಾತ್ರ ಮೀಸಲು ಆದರೆ ಜನಪದ ಸಾಹಿತ್ಯ ಈಎರಡು ವರ್ಗದ ಜನರಿಗೂ ಅರ್ಥವಾಗಬಲ್ಲಂಥ ಪ್ರಿಯವಾದ ಸಾಹಿತ್ಯ ತಮ್ಮ ಪಾಡನ್ನೇ ಹಾಡಾಗಿ ನೀಡಿದ ಬಾಳಿನ ನೋವು-ನಲಿವುಗಳನ್ನೇ ಸಾಹಿತ್ಯವನ್ನಾಗಿಸಿಕೊಂಡ ಒಂದು ಅಪೂರ್ವ ಪ್ರಕಾರ, ರಾಷ್ಟ್ರೀಯ ಮಹಾಕಾವ್ಯವಾಗಿ ಮೆರೆಯುತ್ತಿರುವುದು ಒಂದು ಜನಪದ ಕಾವ್ಯ. ಅವರ ಹೆಸರು ಕಾಲೇವಲ ಕಾಲೇವಾಲ ಫಿನ್ಲೆಂಡಿನ ಒಬ್ಬ ವೀರಪುರುಷ ಆ ದೇಶಕ್ಕೆ ಮತ್ತು ಅಲ್ಲಿಯ ಸಂಸ್ಕೃತಿಗೆ ಒಂದು ಪರಂಪರೆಯನ್ನು ನಿರ್ಮಿಸಿಕೊಟ್ಟವನು, ಜಾನಪದ ಗೀತೆಗಳು ಜಾನಪದ ಸಾಹಿತ್ಯದ ಒಂದು ಅಂಗ ಅಷ್ಟೇ. ಆದರೆ ಜನಪದ ಗೀತೆಗಳಲ್ಲಿಯೂ ನಾವು ಹಲವು ಒಳಗುಂಪುಗಳನ್ನು ಕಾಣಬಹುದು. ಹೀಗೆ ನೋಡಿದಾಗ 'ಜನಪದ ಗೀತೆಗಳಲ್ಲಿ ಹಲವು ಗೃಹಿಣಿಯರ ಹಾಡುಗಳೂ ಅಥವಾ ಬಿಡಿಹಾಡುಗಳನ್ನು ಗಮನಿಸಬಹುದು. ಇವುಗಳಲ್ಲೇ ಎದ್ದು ಕಾಣುವ ಉಳಿದೆರಡು ಭಾಗಗಳೆಂದರೆ "ಲಾವಣಿಗಳು ಮತ್ತು ಶಿಶುಪ್ರಾಸಗಳು" ಕಂಡುಬರುತ್ತವೆ. ಉಳಿದ ಭಾಗವಾದ ಕೋಲಾಟದ ಪದಗಳನ್ನು ಮತ್ತೊಂದು ಗುಂಪಾಗಿ ಸೇರಿಸಬಹುದು. ಬಿಡಿ ಹಾಡುಗಳು ಅಥವಾ ಗೃಹಿಣಿ ಗೀತೆಗಳು, ಜನಪದ ಗೀತೆಗಳಲ್ಲಿ ಹೆಚ್ಚಾಗಿ ಹೆಣ್ಣಿನ ಪಾಡೇ ಹಾಡಾಗಿ ಹರಿದಿರುವುದನ್ನು ಕಾಣುತ್ತೇವೆ. ಎಂದರೆ ಉಳಿದ ಭಾಗಗಳು ಅಲ್ಲಿಲ್ಲವೆಂದಲ್ಲ. ಅವರ ನಿತ್ಯ ಬದುಕಿನ ಸತ್ಯ ಬದುಕಿನ ಏಳು-ಬೀಳು ನೋವು-ನಲಿವು ಮಕ್ಕಳ ಲಾಲನೆ-ಪಾಲನೆ, ದೇವರ ಮೇಲಿನ ಭಕ್ತಿ ಇವುಗಳೇ ಅಲ್ಲಿ ಸಾಹಿತ್ಯದ ಸ್ಥಾನವನ್ನು ಪಡೆದುಕೊಂಡವು. ನಮ್ಮ ಅನುಭವಗಳನ್ನು ಸುಂದರವಾದ ಪದಗುಚ್ಛಗಳಿಗೆ ಇಳಿಸಿದಾಗ ಅದೇ ಸಾಹಿತ್ಯವೆನಿಸಿಕೊಳ್ಳುತ್ತದೆ. ಅಕ್ಷರಜ್ಞಾನವಿಲ್ಲದ ಅನಕ್ಷರಿಂದಾದ ಸಾಹಿತ್ಯದ ಗಟ್ಟಿತನದ ಕೆಲವನ್ನು ಮತ್ತು ಸಾಹಿತ್ಯಕಟ್ಟುವಂತಹ ಕೆಲಸವನ್ನು ಲೇಖಕರು ಮೆಚ್ಚಿಕೊಂಡಿದ್ದಾರೆ. ಜನಪದ ಸಾಹಿತ್ಯದಿಂದ ಇಡೀ ಸಮಾಜ ಸಂಸ್ಕೃತಿಯ ಆಚರಣೆ ವಿಚಾರಣೆ ಮೂಲಕ ಸಾಹಿತ್ಯ ಕಟ್ಟುವ ಕೆಲಸವನ್ನು ಪ್ರೊ. ಡಿ.ಕೆ. ರಾಜೇಂದ್ರ ಜನಪದರಲ್ಲಿರುವ ಶಕ್ತಿಯ ಬಗ್ಗೆ ಚರ್ಚಿಸಿದ್ದಾರೆ.

ಲಾಲಿಪದ: ಎಂಬ ಸಂಶೋಧನಾ ಪ್ರಬಂಧದಲ್ಲಿ ಜನಪದ ಗೀತೆಗಳ ಸೊಬಗು ಅದರ ಕಾವ್ಯಕ್ಕೆ ಮಾರುಹೋಗದವರಾರು? ಅದರ ಜೀವನ ಸತ್ಯವಾದ್ದರಿಂದ ಎಲ್ಲರು ಬದುಕಿನ

ಸತ್ಯವಾದುದರಿಂದ ಬೇಗ ಎಂಥವರನ್ನು ಅದು ಸೆರೆಹಿಡಿಯುತ್ತದೆ. ಎಳೆಯ ಮಗು ತೊಟ್ಟಿಲಲ್ಲಿ. ತೋಳು ಬೀಸಿ ಆಡುವುದು ಅದರ ಮುದ್ದು ನುಡಿಗಳನ್ನು ಕೇಳುವುದು, ಅದರ ಆಟಪಾಠಗಳನ್ನು ನೋಡುವುದು ಯಾರಿಗೆ ತಾನೆ ಅಪ್ರಿಯವಾದೀತು. ಅದನ್ನೇ ಚಿತ್ರಿಸಿ ರಾಗವಾಗಿ ಹಾಡಿದಾಗ ಅದನ್ನು ಕೇಳಿ ಆನಂದಿಸಿ ಅದಕ್ಕೆ ಮನಸೋಲದವರಾರು. ಅದು ಅವರಲ್ಲಿ ಅಡಕವಾಗಿರುವ ಪದಗಳೇ ಹಾಡಾಗಿವೆ.

"ಆಡಿ ಬಾ ನನಕಂದ ಅಂಗಾಲ ತೊಳೆದೇನು
ತೆಂಗಿನ ಕಾಯಿ ತಿಳಿನೀರ ತೆಕ್ಕೊಂಡು
ಬಂಗಾರದ ಮೋರೆ ತೊಳೆದೇನು" ೨

ಇಂತಹ ಮುದ್ದಾದ ಮಗು ಮನೆಯಲ್ಲಿದ್ದರೆ ಬೇರಾವ ಚಿಂತೆಯೂ ಅವಳಿಗೆ ಕಾಡದು. ಅವಳು ಒಡವೆಯನ್ನಾದರೂ ಬಿಟ್ಟಿರುತ್ತಾಳೆ ಆದರೆ ಮಗುವನ್ನು ಬಿಟ್ಟಿರಳಾರಳು. ಬಡತನ, ಸಿರಿತನ, ಸಕಲಸಂಪತ್ತನ್ನು ಅಂದರೆ ಇಡೀ ಜೀವನದ ನೋವು ನಲಿವನ್ನು ಮಗುವಿನಲ್ಲಿ ಕಾಣುವಳು. ಹೀಗೆ ಮುಂದುವರಿದಾಗ ಸಂಸಾರಕ್ಕೆ ಸಂಬಂಧಿಸದ ಹಾಡುಗಳು ಕಂಡುಬರುತ್ತವೆ. ಹೆಣ್ಣು ಹುಟ್ಟಿದಾಗಲೇ ಹೆರರ ವಸ್ತು. ಅವಳು ಎಷ್ಟು ದಿವಸ ತಂದೆತಾಯಿ ಮನೆಯಲ್ಲಿದ್ದರೂ ಒಂದಿಲ್ಲ ಒಂದು ದಿನ ಗಂಡನ ಮನೆಗೆ ತೆರಳಲೇಬೇಕು ಮಗಳನ್ನು ಒಳ್ಳೆಯ ಕಡೆ ವರನನ್ನು ನೋಡಿ ಅವಳಿಗೆ ವಿವಾಹ ಮಾಡಿ ಅವಳ ಸುಖ ನೆಮ್ಮದಿಯ ಜೀವನವನ್ನು ನೋಡಿ ಸುಖಪಡುವವರು ತಾಯಿತಂದೆಗಳು. ತಾಯಿ-ತಂದೆಯರು ಮಕ್ಕಳ ಜೀವನಕ್ಕೆ ಇಡೀ ತಮ್ಮ ಜೀವನವನ್ನೇ ತೇಯುವುದು. ಮಕ್ಕಳ ಲಾಲನೆ ಪಾಲನೆಯಿಂದ ಇಡೀ ನೋವನ್ನೇ ಪೋಷಕರು ಮರೆಯುತ್ತಾರೆ. ಪ್ರೊ. ಡಿ.ಕೆ. ರಾಜೇಂದ್ರರವರು ವಿಚಾರವನ್ನು ಚರ್ಚಿಸುತ್ತಾ ಮಕ್ಕಳ ಮುಗ್ಧತೆಗೆ ಮನಸೋತಿದ್ದಾರೆ.

"ಹೆಣ್ಣು ಹಡೆಯಲಿ ಬ್ಯಾಡ ಹೆರವರಿಗೆ ಕೊಡಬ್ಯಾಡ
ಹೆಣ್ಣು ಹೋಗಾಗ ಅಳಬ್ಯಾಡ! ಹಡೆದವ್ವ
ಸಿಟ್ಟಾಗಿ ಶಿವನ ಬೈಬ್ಯಾಡ"೩

ಮಗಳ ಮುಂದಿನ ಭವಿಷ್ಯಕ್ಕಾಗಿ ಅವಳ ವಿವಾಹ ಮಾಡಿಕೊಟ್ಟಾಗ ಅವಳು ಮನೆಗೆ ತೆರಳುವಾಗ ತಂದೆ-ತಾಯಿಗಳ ದುಃಖದುಮ್ಮಾನ ಎಷ್ಟೆಂದು ತಿಳಿಸುತ್ತದೆ. ಮಗಳು ದೂರವಾಗುವಾಗ ಶಿವನನ್ನು ಬೈಯುವಂತಹ ಕೋಪವನ್ನು ತಂದೆ-ತಾಯಿಗಳಲ್ಲಿ

---

೨. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೨೭
೩. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೩೦

ಕಾಣಬಹುದು. ಅದಂರೆ ಮಗಳ ಮೇಲಿರುವ ಪ್ರೀತಿ ಮಮತೆ ಎಷ್ಟೆಂದು ತಿಳಿಸುತ್ತದೆ. ತದನಂತರ ಗಂಡನ ಮನೆಯಲ್ಲಿ ಆಕೆ ಒಗ್ಗಿ ತನ್ನ ಗಂಡ ಮತ್ತು ಮಗುವನ್ನು ಬಿಟ್ಟು ತಾಯಿಯ ಮನೆಗೆ ಬರಲಾರದ ಸ್ಥಿತಿಯನ್ನು ಮನಗಾಣಬಹುದು.

"ಹಚ್ಚಡದ ಪದರಾಗ ಅಚ್ಚ ಮಲ್ಲಿಗೆ ಹೂವ
ಬಿಚ್ಚಿ ನನಮ್ಯಾಲ ಬಗೆವಂಥ! ರಾಯರನ
ಬಿಟ್ಯಾಂಗ ಬರಲೆ ಹಡೆದವ್ವ!!"[೪]

ಗಂಡನಾದರು ಅವಳ ಮೇಲೆ ಇಟ್ಟಿರುವ ಪ್ರೀತ ಎಂಥದ್ದು ಒಂದು ದಿನ ಅವಳು ಮನೆಯಲ್ಲಿ ಇಲ್ಲದೆ ಇವನು ಇರಲಾರ. ಹಾಗೆ ಮುಂದುವರಿದಂತೆ ಶಾಸ್ತ್ರದ ಹಾಡುಗಳು ಎಂಬ ಪ್ರಕಾರವು ಕಂಡುಬರುತ್ತದೆ. ಜನಪದ ಸಂಪೂರ್ಣವಾಗಿ ಸಂಪ್ರದಾಯಬದ್ಧವಾದದ್ದು. ಅನಾದಿಕಾಲದಿಂದಲೂ ಬೆಳೆದುಬಂದಿದ್ದು, ಅವರ ಜೀವನ ಸಂಪೂರ್ಣವಾಗಿ ನಂಬಿಕೆಯ ಮೇಲೆ ನಿಂತಿರುವಂಥಾದ್ದು, ಅವುಗಳಿಗೆ ಸಂಬಂಧಿಸಿದ ಶಾಸ್ತ್ರ ಸಂಪ್ರದಾಯಗಳೆಲ್ಲವೂ ಕಾನೂನಿನಂತೆ ಒಂದು ಚೌಕಟ್ಟಿಗೆ ಒಳಪಟ್ಟಿರುತ್ತದೆ. ಹೀಗೆ ಶಾಸ್ತ್ರ ಸಂಪ್ರದಾಯಗಳಿಗೆ ಹಬ್ಬ ಹುಣ್ಣಿಮೆಗಳಿಗೆ ಸಂಬಂಧಿಸಿದ ಹಾಗೆ ಜನಪದ ಗೀತೆಗಳು ವಿಶೇಷವಾಗಿ ದೊರೆಯುತ್ತವೆ. ಹೆಣ್ಣು ಮೈನೆರೆದಾಗ, ಮದುವೆ, ನಿಶ್ಚಿತವಾಗುವ ಸಂದರ್ಭದಲ್ಲಿ ಬಳೆತೊಡುವ, ಹೆಣ್ಣು ಹಸೆ ಏರುವ ಸಂದರ್ಭದಲ್ಲಿ ಹೀಗೆ ಎಲ್ಲಾ ಶುಭ ಸಂದರ್ಭಗಳಲ್ಲಿಯೂ ನಡೆಯುವ ಕಾರ್ಯಗಳಲ್ಲಿ ಇಂತಹ ಹಾಡುಗಳು ಕಟ್ಟಲ್ಪಟ್ಟಿವೆ ಎಂಬುದು ಗಮನಾರ್ಹ. ಇಲ್ಲಿ ಶಾಸ್ತ್ರ ಮತ್ತು ಸಂದರ್ಭಕ್ಕೆ ತಕ್ಕಂತೆ ಜಾನಪದದಲ್ಲಿ ಸಾಹಿತ್ಯ ಬೆಳೆದಿರುವುದನ್ನು ಜಾನಪದದ ವಿಸ್ತಾರ ವ್ಯಾಪ್ತಿ ಬಗ್ಗೆ ಚರ್ಚಿಸಿದ್ದಾರೆ.

"ಶಾಸ್ತ್ರವ ಮಾಡಿರಿ ಸೂತ್ರದ ಗೊಂಬೆಗೆ
ಲೋಕ ಪಾಲಕರ ಮನಗನಿಗೇ। ಮದ್ಲಗಿತ್ತಿಗೆ
ಶಾಸ್ತ್ರವ ಮಾಡಿರಿ ನಡುಮನೇಲಿ
ಅಕ್ಷತೆ ಇಕ್ಕಿರಿ ಅಚ್ಚ ಮುತ್ತೈದೆಯರು
ಪಾರುವತ ಪಡೆದ ಮಗನೀಗೆ। ಮದ್ಲಗಿತ್ತಿಗೆ
ಅಕ್ಷತೆ ಇಕ್ಕಿ ಐವಾರು"[೫]

೪. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೩೨
೫. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೪೯

ಜನಪದ ಗೀತೆಗಳ ಈ ವರ್ಗದಲ್ಲಿಯೇ ಪ್ರತ್ಯೇಕವಾಗಿ ಗುರುತಿಸಬಹುದಾದ ಮತ್ತೊಂದು ವರ್ಗವೆಂದರೆ ಕೋಲಾಟದ ಪದಗಳು. ಇದರಲ್ಲಿ ನಾವು ವೈವಿಧ್ಯಮಯವಾದ ಗೀತೆಗಳನ್ನು ಕಾಣುತ್ತೇವೆ. ಇದರಲ್ಲಿ ಒಂದು ಪ್ರಮುಖವೆಂದರೆ ಎಲ್ಲ ಗಂಡಸರ ಹಾಡೇ ಆಗಿರುತ್ತದೆ. ಆದರೆ ಇಲ್ಲಿ ನಾವು ಕಾಣುವ ವೈಖರಿ ಎಂದರೆ ಭಕ್ತಿ ಮತ್ತು ಪ್ರಣಯದ ಹಾಡುಗಳು. ಇಲ್ಲಿ ಹಾಸ್ಯದ ಹಾಡುಗಳಿಗೇನು ಕೊರತೆಯಿಲ್ಲ. ವಿರಸವು ಕ್ವಚಿತ್ತವಾಗಿ ಕಾಣಿಸಿಕೊಳ್ಳುತ್ತದೆ. ಈ ಕೋಲಾಟದಲ್ಲಿ ಕಂಡುಬರುವ ಹಾಡು ಹೀಗಿದೆ–

"ತೂಗಿರೆ ರನ್ನವ ತೂಗಿರೆ ಚಿನ್ನವ
ತೂಗಿರೆ ಶಿವ ಮಡದಿಯ ಪಾರವತಿ
ತೂಗಿರೆ ಶಿವನ ತೊಡಿಮ್ಯಾಲೆ ತೂಗು"

"ಕಜ್ಜುರನ್ಹಾಕಿ ವಜ್ಜುರ ಬೆಳಿಯೋಳೆ
ಸಜ್ಜುಗೆ ಕಾಣೆ ಪಾರುಮತಿ ಮೀದಾನೀರು
ಗಿಡ್ಡಿ ಮಜ್ಜನಕೆ ದಯವಾದೊ ತೂಗು"[೬]

ಕೋಲು ಪದಗಳಲ್ಲಿ ಈ ಮಾದರಿಯಲ್ಲಿ ಕಂಡುಬರುತ್ತವೆ. ಹೀಗೆಯೇ ಇದರಲ್ಲಿ ಜರಿಯುವ ಪದಗಳು, ಹಾಸ್ಯದ ಪದಗಳು, ಮಗ್ಗಿಯ ಪದಗಳು ಎಂದು ಹಲವು ಬಗೆಗಳನ್ನು ಗುರುತಿಸಬಹುದು. ದೀರ್ಘಾ ಅಧ್ಯಯನದಲ್ಲಿ ಮುಂದುವರಿದಂತೆ ನಮಗೆ ದೊರೆಯುವ ಮತ್ತೊಂದು ಗೀತ ಪ್ರಕಾರ ಎಂದರೆ ಕಥನಗೀತೆಗಳು. ಜನಪದ ಕಥನ ಗೀತೆಗಳು ಜನಪದ ಗೀತೆಗಳಲ್ಲಿಯ ಮತ್ತೊಂದು ವರ್ಗ. ಕಥಾನಾತ್ಮಕ ವಾದಂತಹ ಈ ಬಗೆಯ ಗೀತೆಗಳನ್ನೇ ಲಾವಣಿಗಳೆಂದು ಕರೆಯುವುದು, ಇದರ ಪ್ರಮುಖ ಲಕ್ಷಣ ಕಥನಾತ್ಮಕವಾಗಿದ್ದು, ಹಾಡಲು ಅನುಕೂವಾಗಿರುತ್ತದೆ. ಇದು ಇಂಗ್ಲಿಷ್‌ನ ಬ್ಯಾಲೆಡ್(Balled)ಗೆ ಸಂವಾದಿಯಾಗಿರುವ ಕನ್ನಡ ಪದ.

ಜನಪದ ಗೀತ ಪ್ರಕಾರದಲ್ಲಿ ಕಥನಗೀತೆಗಳು ಹೇರಳವಾಗಿ ದೊರೆಯುತ್ತವೆ. ಕಥೆಯನ್ನು ಗೀತೆಗಳನ್ನಗಿ ಹಾಡುವ ಪದ್ಧತಿಯಾಗಿದೆ. ಕರ್ನಾಟಕದಲ್ಲಿ ಇದೊಂದು ದೊಡ್ಡ ತಂಡವೇ ಇದೆ. ಲವಣಿಗಳು ಕೇಳಲು ಹೆಚ್ಚು ರಮ್ಯವಾಗಿರುತ್ತವೆ. ಅವುಗಳನ್ನು ಹಾಡುವ ದಾಟಿ ವಿಶಿಷ್ಟ ಬಗೆಯದು. ಈ ಕಥನ ಗೀತೆಗಳಲ್ಲಿ ಸುಧೀರ್ಘ ಕಾವ್ಯಗಳಿರುವಂತೆಯೇ ಸಣ್ಣ ಘಟನೆಗಳನ್ನೇ ಕಥೆಯಾಗಿ ಹೆಣೆದು ಸ್ವಾರಸ್ಯವಾಗಿ ಹಾಡಿರುವುದನ್ನು ಕಾಣಬಹುದು. ಒಂದು ಚಿಕ್ಕ ಕಥನಗೀತೆಯೊಂದನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು. ಪ್ರಣಯಕ್ಕೆ

೬. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೪೦

ಸಂಬಂಧಿಸಿದ ಪ್ರೇಮಿಗಳಿಬ್ಬರ ದುರಂತದ ಕಥೆ, "ನುಚ್ಚುಯ್ತು ನೀರ ಹೊಳೆಯಾಗೆ ಎಂಬುದು" ಜನಪದ ಕಥನಗೀತೆಗಳಲ್ಲಿ ಇಂತಹ ಪ್ರಸಂಗಗಳೂ ನೂರಾರಿವೆ. ಉದಾಹರಣೆಗೆ ಒಂದು ಗೀತೆ:

"ನೀರಿಗೋಗೋ ಹೆಣ್ಣೇ ನಿಲ್ಲೆ ನಾ ಬರುತ್ತೀನಿ
ನಿನ್ನಾಣೆ ನಿನ್ನ ಕೊಡದಾಣೆ। ಕೊರಳಿನ ಬಣ್ಣದ ಸರದಾಣೆ
ಕಯ್ಯಿನ ಬಳೆಯಾಣೆ – ನೀರ ಹೊಳೆಯಾಣೆ"[೭]

ಅವಳ ಮಂಗಳವೆನಿಸಿದ ಎಲ್ಲ ವಸ್ತುಗಳ ಮೇಲೆ ಆಣೆಇಟ್ಟು ಹೇಳುತ್ತಾನೆ. ಆದರೆ ಅವಳು ವಿವೇಕ ತಾಳಿ ಬುದ್ಧಿ ಹೇಳುತ್ತಾಳೆ. ನಿಮ್ಮ ಕುಲದ ಹೆಣ್ಣು ತಂದು ಮದುವೆ ಮಾಡಿಕೊ ಎಂದು ಸೂಚಿಸುತ್ತಾಳೆ. ಹೀಗೆ ಮುಂದುವರಿದಂತೆ ಶಿಶುಪ್ರಾಸದ ಗೀತಗಳು ಕಂಡುಬರುತ್ತವೆ. ಭಕ್ತಿಗೀತೆಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ಈ ಗೀತೆಗಳು ಒಂದು ಮಾನವ ಸಂಸ್ಕೃತಿಯ ಆಚಾರ–ವಿಚಾರ, ಸಂಪ್ರದಾಯ, ವಿವಾಹ ಪದ್ಧತಿ, ದೇವರಭಕ್ತಿ, ಕಂದನ ಮೇಲಿರುವ ಪ್ರೀತಿ, ಮದುವೆಯ ಸಂದರ್ಭದ ಶಾಸ್ತ್ರದ ಪದ್ಧತಿಗಳು, ಮನುಷ್ಯನಿಗೆ ನೀತಿ ಹೇಳುವ ನೀತಿಪದಗಳು ಮುಂತಾದ ಪ್ರಕಾರಗಳು. ಗೀತೆಗಳು, ಮಾನವನ ಜೀವನ ಚಿತ್ರಣ ನೀಡುತ್ತವೆ. ಅದರಂತೆಯೇ ಗೀತಾ ಪ್ರಕಾರದಲ್ಲಿ ಹಲವಾರಿದ್ದು ಅವೆಲ್ಲ ಇಡೀ ಮನುಷ್ಯ ಜೀವನ ಸಂಬಂಧವನ್ನೇ ಕೇಂದ್ರವಾಗಿಟ್ಟುಕೊಂಡು ಜನಪದ ಸೊಗಡಿನಲ್ಲಿ ರಚಿತವಾಗಿರಬಹುದಾದ ಒಂದು ಸಾಹಿತ್ಯದ ಪ್ರಕಾರವೇ ಹೌದು ಎಂದು ಪ್ರೊ. ಡಿ.ಕೆ. ರಾಜೇಂದ್ರವರು ಎಲ್ಲಾ ರೀತಿಯ ಪ್ರಕಾರಗಳ ಬಗ್ಗೆ ಈ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ಜಾನಪದ ವಸ್ತುಸಂಗ್ರಹಾಲಯಗಳು

ಜಾನಪದ ವಸ್ತು ಸಂಗ್ರಹಾಲಯಗಳು ಎಂಬ ಸಂಶೋಧನಾ ಪ್ರಬಂಧದಲ್ಲಿ ಸಾಮಾನ್ಯವರ್ಗದ ಜನರಿಂದ ಸೃಷ್ಟಿಗೊಂಡ ಒಂದು ಪರಂಪರೆಯ ಬೆನ್ನೆಲುಬಾಗಿ ಉಳಿದುಬಂದ ಎಲ್ಲ ಬಗೆಯ ಕಲಾತ್ಮಕ ವಸ್ತುಗಳನ್ನೂ ಹಾಗೂ ನಿತ್ಯಬಳಕೆಯ ವಸ್ತುಗಳನ್ನು ಒಳಗೊಂಡ ಆಲಯ, ವಸ್ತುಸಂಗ್ರಹಾಲಯ ಎನಿಸಿಕೊಳ್ಳುತ್ತದೆ. ನಮ್ಮ ಜನಪದರು ಅನುಚಾರವಾಗಿ ಬಳಸಿಕೊಂಡುಬಂದಿರುವ ಏನೆಲ್ಲವಸ್ತುಗಳು ಇದರ ವ್ಯಾಪ್ತಿಗೆ ಬರುತ್ತದೆ. ಅವು ಆ ನಾಡಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಸೂಚಿಸುತ್ತದೆ. ಅಂತಹ ವಸ್ತುಗಳ ಸಂಗ್ರಹಣೆ ಮತ್ತು ಸಂರಕ್ಷಣೆಯ ಕಾರ್ಯವೇ ವಸ್ತುಸಂಗ್ರಹಾಲಯ.

೭. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೨೩

ಸಂಗ್ರಹಾಲಯದಲ್ಲಿ ಕಲೆಹಾಕಿದ ವಸ್ತುಗಳೆಂದರೆ ಕೃಷಿಸಾಧನಗಳು, ಮರಮುಟ್ಟುಗಳು, ಬಡಗಿಕಮ್ಮಾರ, ಅಕ್ಕಸಾಲಿಗರ ಉಪಕರಣಗಳು, ಮೀನು ಬೇಟೆಯ ಸಲಕರಣೆಗಳು, ಕಂಬಾರ ಚಮ್ಮಾರ ಮೇದ ಮಗ್ಗಗಾರ ಹೂವಾಡಿಗ ಕುರುಬ ಕಂಚುಗಾರ, ಕಲ್ಲುಕುಟಿಗ ಮೊದಲಾದ ಕಸುಬುದಾರರ ಹತ್ತಾರುಗಳು. ಹಬ್ಬಹರಿದಿನಗಳಲ್ಲಿ ಮದುವೆ ವಿಧಿಗಳು ಬಳಸುವ ವಸ್ತುವಿಶೇಷಗಳು ಕಾಳರಟ್ಟು, ತಮಟೆ ಮೊದಲಾದ ವಾದ್ಯಗಳು, ಉಡುಗೆ ತೊಡುಗೆಗಳು ಒಡವೆಗಳು, ಗರಡಿಯ ಸಾಧನಗಳು ಕಸೂತಿ ಸಾಮಾನು, ಮನೆಯ ಪಾತ್ರೆ ಪಗಡೆಗಳು, ಆಯುದ ವಿಶೇಷಗಳು ಮಾದರಿ ದೇವಾಲಯ ಸಾಮಗ್ರಿಗಳು. ಪೂಜಾಸಲಕರಣೆಗಳು, ರಂಗವಲ್ಲಿ ಚಿತ್ರಗಳು, ಆದಿವಾಸಿಗಳ ಬಳಸುವ ಬಟ್ಟೆಗಳು, ದಾಸಯ್ಯ, ಗೊರವಯ್ಯ ವೇಷಭೂಷಣಗಳು ಇವುಗಳಿಗೆಲ್ಲವುಗಳಿಗೆ ಸಂಗ್ರಹಾಲಯದಲ್ಲಿ ಸ್ಥಳವುಂಟು, ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳನ್ನು ಕುರಿತು ವಿಚಾರಮಾಡುವ ಸಂಶೋಧಕರುಗಳಿಗಂತೂ ಇದೊಂದು ಪವಿತ್ರಯಾತ್ರಾಸ್ಥಳವಾಗಿ ಪರಿಗಣಿಸುತ್ತದೆ. ವಸ್ತುಸಂಗ್ರಹಾಲಯ ಪರಂಪರೆಯಿಂದ ಉಳಿಸಿಕೊಂಡು ಬೆಳಸಿಕೊಂಡು ಬಂದ ಮೂಲ ಆಸ್ತಿಯನ್ನು ಅಪೂರ್ವ ಕಲಾಸಂಪತ್ತನ್ನು ಕಾಯ್ದುಕೊಂಡು ಬರುವ ಪವಿತ್ರಕೇಂದ್ರವಾಗಿದೆ. ಅದರ ರಕ್ಷಣೆ ಹಾಗೂ ವಿಸ್ತರಣೆ ಮುಂದಿನ ತಲೆಮಾರಿಗೆ ಭವ್ಯ ಅಡಿಪಾಯವವನ್ನು ಹಾಕಿಕೊಟ್ಟಂತೆ ಪರಂಪರೆಯ ಅರಿವಿಲ್ಲದೆ ಯಾವುದೊಂದನ್ನು ಭದ್ರವಾಗಿ ನಿರ್ಮಿಸಲು ರೂಪಿಸಲು ಸಾಧ್ಯವಿಲ್ಲ ಮುಂದಿನ ಪೀಳಿಗೆಯವರು ಭವ್ಯ ನಾಗರಿಕತೆಯನ್ನು ಬೇಕಾದರೆ ನಿರ್ಮಿಸಬಹುದು. ಆದರೆ ಮೂಲವಸ್ತು ಸಲಕರಣೆಯನ್ನು ರಕ್ಷಿಸುವುದು ತುಂಬಕಷ್ಟ. ಆದ್ದರಿಂದ ಸತ್ವ ಮೂಲಸಂಸ್ಕೃತಿಯನ್ನು ಕಾಯ್ದುಕೊಳ್ಳಲು ಪರಂಪರೆ ಅಗತ್ಯ ಅನಿವಾರ್ಯ ಬೇಕೇಬೇಕು. ಎಂದು ಪ್ರೊ. ಡಿ.ಕೆ.ರಾಜೇಂದ್ರ ಅವರು ಅಭಿಪ್ರಾಯಪಟ್ಟಿದ್ದಾರೆ. ಪಾಶ್ಚಾತ್ಯರಲ್ಲಿ ಕೈಗಾರಿಕಾ ಕ್ರಾಂತಿಯ ನಂತರ ಜಾನಪದದ ಬಗ್ಗೆ ಎಲ್ಲಿಲ್ಲದ ಆಸಕ್ತಿಮೂಡಿತು. ಉದಾಹರಣೆಗೆ ಫಿನ್‌ಲೆಂಡ್ ದೇಶವನ್ನು ಇದಕ್ಕೊಂದು ಸ್ಪಷ್ಟ ನಿದರ್ಶನ ತೆಗೆದುಕೊಳ್ಳಬಹುದು. 18ನೆಯ ಶತಮಾನದ ವೇಳೆಗೆ ಅಲ್ಲಿ ಆರಂಭವಾದ “Finnish Literary society” ಅಲ್ಲಿಯ ಭಾಷೆ, ಸಾಹಿತ್ಯ, ಸಂಸ್ಕೃತಿ ಇವುಗಳ ರಕ್ಷಣೆಯ ಕಡೆಗೆ ಹೆಚ್ಚು ಗಮನಕೊಟ್ಟಿತು. ಮೂಲ ಸಂಸ್ಕೃತಿಗೆ ಪರಂಪರೆಗೆ ಸಂಬಂಧಿಸಿದ ಎಲ್ಲಾ ವಸ್ತುಗಳನ್ನು ವಿಷಯವನ್ನು ಸಂಗ್ರಹಿಸಿ ರಕ್ಷಿಸುವ ಕಾರ್ಯ ಬಹಳ ಪ್ರಮುಖವಾದದ್ದಾಗಿದೆ, ಜಾನಪದ ವಸ್ತು ಸಂಗ್ರಹಾಲಯದ ಸ್ಥಾಪನೆಗೆ ಮೊದಲು ಕೈಹಾಕಿದವನು “ಸ್ವೀಡನ್ನಿನ ಡಾ.ಅರ್ಥರ್ ಹೆಜೆಲಿಯಸ್' ಎಂಬುವವನು 1872ರಲ್ಲಿ ಸ್ಟಾಕ್ ಹೋಮ್ ಎಂಬಲ್ಲಿ ಇಂತಹ ಒಂದು ಮಹತ್ಕಾರ್ಯ ಆರಂಭಿಸಿದ". ಪ್ರೊ. ಡಿ.ಕೆ.ರಾಜೇಂದ್ರ ಅವರು ಜಾನಪದ ವಸ್ತುಸಂಗ್ರಹಾಲಯದ ಮಹತ್ವ ಮತ್ತು ಇದನ್ನು ಆರಂಭಿಸಿದವರ ಬಗ್ಗೆ

ಆಳವಾಗಿ ಚರ್ಚಿಸಿದ್ದಾರೆ. ಖಾಸಗಿಯಾಗಿ ಆರಂಭವಾಗಿ ಕ್ರಮೇಣ ಬೃಹತ್ ಆಗಿ ಬೆಳೆದು ರಾಷ್ಟ್ರೀಯ ಸ್ವತ್ತಾಯಿತು. ಇಲ್ಲಿ ಸಣ್ಣಪುಟ್ಟ ವಸ್ತುಗಳಿಂದ ಹಿಡಿದು ಹಿಂದಿನವರು ಜೀವಿಸಲು ಕಟ್ಟಿಕೊಂಡಿದ್ದ ಮಾಧರಿಯ ಗೃಹಗಳನ್ನು ಅಲ್ಲಿ ನಿರ್ಮಿಸಲಾಯಿತು.

ಮಿಚಿಗನ್ನಿನಲ್ಲಿ ಹೆನ್ರಿಫೋರ್ಡ್‌ನಿಂದ '1929ರಲ್ಲಿ ಸ್ಥಾಪಿತವಾದ ಇಂತಹ ಒಂದು ವಸ್ತು ಸಂಗ್ರಹಾಲಯ ಸ್ವೀಡಿಷ್ ಸಂಗ್ರಹಾಲಯದಂತೆ ಸುವ್ಯವಸ್ಥಿತವಾಗಿ ವ್ಯಾಪಕವಾಗಿ ರೂಪಿತಗೊಂಡಿತು. ಇದರಿಂದಾಗಿ ಅಲ್ಲಿ ಉನ್ನತ ಮಟ್ಟದ ಜಾನಪದ ವಸ್ತು ಸಂಗ್ರಹಾಲಯವೇ ಸ್ಥಾಪನೆಗೊಂಡು ಏಳುನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಸ್ವೀಡನ್ನಿನ ಬಯಲು ವಸ್ತು ಸಂಗ್ರಹಾಲಯ (open air museum's)ಗಳಲ್ಲಿ ಬಹುತೇಕ ಜನಪದ ವಸ್ತುಸಂಗ್ರಹಾಲಯಗಳೇ ಆಗಿವೆ. ಕರ್ನಾಟಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಿಭಾಗದಲ್ಲಿ ಸ್ಥಾಪನೆಗೊಂಡಿರುವ ಈ ಜಾನಪದ ಸಂಗ್ರಹಾಲಯ ಅದಕ್ಕಾಗಿ ಮೀಸಲಾದಂತಹದ್ದು. ವಿಶ್ವವಿದ್ಯಾನಿಲಯಮಟ್ಟದಲ್ಲಿ ಜಾನಪದವನ್ನು ಅಧ್ಯಯನ ವಿಷಯವಾಗಿತೆಂದು ಜಾನಪದ ಸಂಗ್ರಹಣೆ. ಸಂಶೋಧನೆ ಮತ್ತು ಪ್ರಕರಣ ಕಾರ್ಯಕಗಳಿಗೆ ಅವಕಾಶ ಕಲ್ಪಿಸಿಕೊಟ್ಟು ಜನಪದ ಬೋಧನಾಂಗ ಮತ್ತು ಸಂಗ್ರಹಾಲಯಗಳಿಗೆ ಪ್ರಥಮ ಬಾರಿಗೆ ಭದ್ರ ಬುನಾದಿ ಹಾಕಿರುವ ಕೀರ್ತಿ ಪ್ರೊ.ದೇಜೆಗೌಡರು ಮತ್ತು ಪ್ರೊ.ಹಾ.ಮಾ.ನಾಯಕರಿಗೆ ಸಲ್ಲುತ್ತದೆ. ಈ ಸಂಗ್ರಹಾಲಯದಲ್ಲಿ ಮೀನು ಹಿಡಿಯುವ ಬಲೆ, ಕಸಪೊರಕೆ, ವ್ಯವಸಾಯ ಉಪಕರಣಗಳು, ಹಿಂದಿನವರು ಬಳಸುತ್ತಿದ್ದ ಉಪಕರಣಗಳು, ಗೊಂಬೆಗಳು, ವಾದ್ಯವಿಶೇಷಗಳು, ಜನಪದ ನಾಟಕ, ನೃತ್ಯಕ್ಕೆ ಸಂಬಂಧಿಸಿದಂತೆ ವೇಷಭೂಷಣಗಳು ಗ್ರಾಮದೇವತೆಯ ವಿಗ್ರಹಗಳು ಕುಟ್ಟುವ ಬೀಸುವ ಆಡಿಸುವ ಸಾಧನಗಳು ಮುಂತಾದವನ್ನು ಕಲೆಹಾಕುವ ಸಾಧನೆಯನ್ನು ಡಾ.ಹಾ.ಮಾ.ನಾಯಕರು ಮತ್ತು ಡಾ.ಜೀ.ಶಂ.ಪರಮಶಿವಯ್ಯ ಮತ್ತು ಕಲಾವಿದ ಪಿ.ಆರ್.ತಿಪ್ಪೇಸ್ವಾಮಿ ಇವರುಗಳು ಈ ವಸ್ತುಗಳನ್ನು ಸಂಗ್ರಹಿಸುವಲ್ಲಿ ಅವಿಶ್ರಾಂತವಾಗಿ ದುಡಿದಿದ್ದಾರೆ. ಹಳ್ಳಿ ಹಳ್ಳಿಯನ್ನು ತಿರುಗಿ ಮನೆಮನೆಗೆ ನುಗ್ಗಿ ಅಪೂರ್ವವಾದ ವಸ್ತುವನ್ನು ಸಂಗ್ರಹಿಸಿ ತರುವಲ್ಲಿ ಇ.ಪಿ.ಆರ್. ತಿಪ್ಪೇಸ್ವಾಮಿ ಅವರು ಖ್ಯಾತಿ ತಂದಿದ್ದಾರೆ. ಭಾರತದಲ್ಲಿನ ಜಾನಪದ ಸಂಗ್ರಹಾಲಯಗಳನ್ನು ಕುರಿತು ಪರಿಶೀಲಿಸುವಾಗ ವಯಸ್ಸಿನಲ್ಲಿ ಕಿರಿದಾದರೂ ತನ್ನ ಗುರಿಯ ಸಾಧನೆಯಲ್ಲಿ ಹಿರಿತನವನ್ನು ಗಳಿಸಿಕೊಂಡಿರುವುದರಿಂದಾಗಿ ಇದನ್ನು ಜನಪದ ಮೊದಲು ಹೆಸರಿಸದೆ ಮುಂದೆ ಹೋಗುವಂತಿಲ್ಲ. ಹಲವು ವಿದ್ವಾಂಸರು ಸಂಗ್ರಹಿಸಿದ ವಸ್ತುಸಲಕರಣೆಗಳ ಬಗ್ಗೆ ಪ್ರೊ. ಬಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಖಾಸಾಗಿಯಾಗಿ ಸ್ಥಾಪಿತವಾಗಿರುವ ಎರಡು ಜನಪದ ಕಲಾವಸ್ತು ಸಂಗ್ರಹಾಲಯಗಳು ಪೂನಾದಲ್ಲಿದೆ. ಇವುಗಳು ತಮ್ಮದೇ ಆದ ಮಿತಿಗೆ ಒಳಗಾಗಿದ್ದರೂ ಅವುಗಳ ಪ್ರಯತ್ನ ಮತ್ತು ಉದ್ದೇಶ ಶ್ಲಾಘ್ಯವಾದದ್ದು. 'ಡಿ.ಜಿ. ಕೀಳ್ಕರ್ ಮತ್ತು ಎಸ್.ಆರ್.ಪೊಡ್ದಾರ್' ಇವರು ಈ ಎರಡು' ಖಾಸಗಿ ವಸ್ತು ಸಂಗ್ರಹಾಲಯಗಳ ಒಡೆಯರು' ಹಾಗೆಯೇ ಬಾಂಬೆಯಲ್ಲಿರುವ ವಿಕ್ಟೋರಿಯಾ ಮತ್ತು ಅಲ್ಬರ್ಟ್ ಮ್ಯೂಸಿಯಂ ಹಲವು ತೆರನಾದ ಜನಪದ ಕಲಾವಸ್ತುಗಳನ್ನು ಒಳಗೊಂಡಿದೆ. ಹಾಗೆಯೇ ಮದ್ರಾಸಿನಲ್ಲಿ ಗೌರ್ನಮೆಂಟ್ ಮ್ಯೂಸಿಯಂ, ಭಾರತ್‌ನಲ್ಲಿರುವ ಭಾರತ್‌ಕಲಾಭವನ್ ಅಲಹಬಾದ್‌ನ ಪೋಕ್ ಆರ್ಟ್‌ಮ್ಯೂಸಿಯಂ ಡೆಲ್ಲಿಯಲ್ಲಿರುವ ನ್ಯಾಷನಲ್ ಮ್ಯೂಸಿಯಂ ಮತ್ತು ಕಲ್ಕತ್ತದಲ್ಲಿನ ಇಂಡಿಯನ್ ಗ್ಯಾಲರಿ. ಈ ಮುಂತಾದ ಸಂಗ್ರಹಾಲಯಗಳಲ್ಲಿ ಜನಪದ ಕಲಾವಸ್ತುಗಳು ಸಾಕಷ್ಟು ಸಂಖ್ಯೆಯಲ್ಲಿ ಸಂಗ್ರಹವಾಗಿದ್ದರೂ ಅದಕ್ಕೆಂದೇ ಮೀಸಲಾದ ಜಾನಪದ ವಸ್ತು ಸಂಗ್ರಹಾಲಯ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿತವಾಗಿರುವುದನ್ನು ಬಿಟ್ಟರೆ ಉಳಿದೆಡೆಗಳಲ್ಲಿ ಇಷ್ಟು ವ್ಯಾಪಕವಾದ ಮತ್ತೊಂದು ಸಂಗ್ರಹಾಲಯವಿಲ್ಲ. ಒಂದು ಪೀಳಿಗೆಯ ಈ ನಾಗರಿಕತೆಯನ್ನು ನಾವು ಕಟ್ಟಬಹುದು, ಉಳಿಸಬಹುದು ಒಂದು ಪೀಳಿಗೆಯ ಜನರ ಕಲಾವಸ್ತುಗಳನ್ನು ಮರುಸೃಷ್ಟಿಸಲು ಸಾಧ್ಯವಿಲ್ಲ. ಜಾನಪದ ಸಂಗ್ರಹಾಲಯಗಳಲ್ಲಿ ಜ್ಞಾನ ಭಂಡಾರವೇ ಅಡಗಿರುತ್ತದೆ. ಎಲ್ಲಾ ಜನಾಂಗ, ಸಮುದಾಯದ ಕಲಾವಸ್ತುಗಳು ಅಲ್ಲಿ ಅಡಕವಾಗಿರುತ್ತದೆ. ಇವುಗಳಿಂದ ಹಿಂದಿನ ಪೀಳಿಗೆಯ ಎಲ್ಲಾ ರೀತಿಯ ಮನುಷ್ಯ ಬಳಕೆಯ ವಸ್ತುಗಳನ್ನು ಗುರುತಿಸದಂತಾಗುತ್ತದೆ ಮತ್ತು ಇಂದಿನ ಪೀಳಿಗೆಯ ಜನರಲ್ಲಿ ಇಂತಿಂಥ ವಸ್ತುಗಳನ್ನು ಬಳಸುತ್ತಿದ್ದರೆಂದು ಅರಿವು ಅವರಿಗೆ ಮೂಡುತ್ತದೆ ಅದರಂತೆಯೇ ಸಹ. ಪ್ರೊ. ಡಿ.ಕೆ. ರಾಜೇಂದ್ರ ಅವರು ರಾಷ್ಟ್ರೀಯ ಜನಪದ ವಸ್ತುಸಂಗ್ರಹಾಲಯಗಳನ್ನು ಪರಿಚಯಿಸುವಲ್ಲಿ ಪಟ್ಟಶ್ರಮ ಪ್ರಸಿದ್ಧವಾದುದ್ದು ಎಂಬುದನ್ನು ಮರೆಯುವಂತಿಲ್ಲ.

೧.೨. ಜಾನಪದ ಕೆಲವು ಗ್ರಹಿಕೆಗಳು

ಜಾನಪದ ಕೆಲವು ಗ್ರಹಿಕೆಗಳು ಕೃತಿಯಲ್ಲಿನ 'ಗೊರೂರರು ಗುರುತಿಸಿರುವ ಜನಪದ ಕಲೆಗಳು' ಎಂಬ ಪ್ರಬಂಧದಲ್ಲಿ ಪ್ರೊ. ಡಿ.ಕೆ.ರಾಜೇಂದ್ರರವರು ಜನಪದ ಕಲೆಗಳನ್ನು ವ್ಯಾಖ್ಯಾನಿಸಿದ್ದಾರೆ. ಕಲೆಗಳು ಎಲ್ಲರನ್ನೂ ಸೆಳೆಯುತ್ತವೆ. ಹಾಗೆಯೇ ಒಂದು ಕಲೆಯು ಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಆ ಕಲಾವಿದನ ಹಿಂದೆ ಕಲೆಯ ಸೆಳೆತ ಮತ್ತು ಕಲೆಯ ಶ್ರದ್ಧೆ ಅಡಗಿರುತ್ತವೆ. ಆ ಶ್ರಮವು ಒಂದು ನಿರ್ದಿಷ್ಟ ದೃಷ್ಟಿಯಿಂದ ಕಲಾವಿದನಿಂದ ಹೊರಹೊಮ್ಮಲು ಪ್ರಯತ್ನಿಸಿ ಕೊನೆಗೆ ಯಶಸ್ಸು ಕಾಣುತ್ತವೆ. ಅದೇ ರೀತಿಯಲ್ಲಿ

ಗೊರೂರರನ್ನು ಕಲೆಯು ತುಂಬಾ ಪ್ರಭಾವಿಸಿತು. ಅವರಿಂದ ಹೆಚ್ಚೆಚ್ಚು ಜನಪದ ಕಲೆಗಳ ಆಸಕ್ತಿ ಹೆಚ್ಚಾಗಿ ಅವರಿಂದ ನಾನಾ ಕಲೆಗಳಲ್ಲಿ ವಿಶಿಷ್ಟ ಅಂಶಗಳನ್ನು ಗುರುತಿಸಲು ಸಾಧ್ಯವಾಯಿತು. ಇದರಿಂದಾಗಿ ವಿಶಿಷ್ಟ ಕಲೆಗಳನ್ನು ಅವರು ಹೊರಹಾಕಿದರು. ನಿರ್ದಿಷ್ಟರೂಪವಾಗಿ ಬೆಳೆದು ಜನಪದ ಸಾಹಿತ್ಯದಲ್ಲಿ ನಿರ್ದಿಷ್ಟ ಸ್ಥಾನ ಪಡೆದುಕೊಂಡವು. ಈ ನಿಟ್ಟಿನಲ್ಲಿ ಹೇಳುವುದಾದರೆ "ಹಳೇಬೇರು ಹೊಸ ಚಿಗುರು ಕೂಡಿರಲು ಮರಸೊಬಗು"[೮] ಅದರಂತೆಯೇ ಎಷ್ಟೇ ಕಣ್ಣಿಗೆ ಕಾಣದೆ ಗೌಣವಾಗಿದ್ದ ಜನಪದ ಕಲೆಗಳ ಹೊರಸೂಸುವ ಕೆಲಸ ಪ್ರಾರಂಭವಾಯಿತು. ಮಾನವನ ಸಂಸ್ಕೃತಿ ಹೆಚ್ಚು ನಾಗರಿಕತೆಯಿಂದ ಕೂಡಿದಂತೆಲ್ಲ ಹೆಚ್ಚೆಚ್ಚು ಕಲೆಗಳು ಮೂಡಲಾರಂಭಿಸಿದವು. ಆ ಕಲೆಗಳೇ ಜನಸಮುದಾಯದ ಸಂಸ್ಕೃತಿಯಾಗಿ ಬೆಳಕುಕಂಡವು. ಇಂತಹ ಸಂದರ್ಭದಲ್ಲಿ ಗೊರೂರರು ಅವುಗಳ ನೆಲೆಬೆಲೆಯನ್ನು ಶೋಧಿಸಲು ಪ್ರಾರಂಭಿಸಿದಾಗ ಜನಪದದ ಕಲೆಗಳು ಒಂದೊಂದೇ ಬಿಡಿಭಾಗವಾಗಿ ಸರಪಳಿ ಆಕೃತಿಯಲ್ಲಿ ಕೂಡಿದ್ದವು. ಆಳವಾದ ಅಧ್ಯಯನದಿಂದ ತೆರೆದುಕೊಂಡವು. ಇದರಿಂದಾಗಿಯೇ ಜನಪದ ಕಲೆಗಳ ಎಸಳನ್ನು ಸೆರೆಹಿಡಿಯಲಾಯಿತು. ಈ ಸಂದರ್ಭದಲ್ಲಿ ಮಾತನಾಡುತ್ತಲೇ ಗೊರೂರರು ಕೆಲವು ಜಾನಪದದ ವಿಶಿಷ್ಟ ಕಲೆಗಳನ್ನು ಗುರುತಿಸಿರುವುದನ್ನು ಡಿ.ಕೆ.ರಾಜೇಂದ್ರರವರು ಓರೆಗೆ ಹಚ್ಚಿ ತಿಳಿಸಿದ್ದಾರೆ. ರಂಗವಲ್ಲಿಯಿಂದ ಹಿಡಿದು ಬಯಲಾಟದವರೆಗೆ ಅಂದರೆ ಯಕ್ಷಗಾನ, ಸಣ್ಣಾಟ, ಬಯಲುಗೊಂಬೆಯಾಟ, ಸೂತ್ರದ ಗೊಂಬೆಯಾಟ, ಕೊಂಬೂದುವುದು, ಕೋಲಾಟ ಇವುಗಳಾಗಿ ಗುರುತಿಸುತ್ತಾ, ಈ ಕಲೆಗಳಿಂದಾಗಿ ಬದಲಾವಣೆಗೊಂಡಂತ ಪರಿಸರವ್ಯವಸ್ಥೆ ಅಲ್ಲಿನ ಸಂಪ್ರದಾಯ ಆಚಾರ–ವಿಚಾರ ಪದ್ಧತಿ ನಂಬಿಕೆ ಮುಂತಾದವುಗಳಲ್ಲಿ ಹಲವು ಪರಿವರ್ತನೆಯಾದವು. ಹೀಗೆ ಪರಿವರ್ತನೆಯ ಹಾದಿಯನ್ನು ಗುರುತಿಸುತ್ತಾ ಮೊದಲನೆಯದಾಗಿ ರಂಗವಲ್ಲಿಯ ಕಲೆಯನ್ನು ಗುರುತಿಸಿದ್ದಾರೆ.

ರಂಗವಲ್ಲಿ ಕಲೆಯಿಂದಾಗಿ ಬುದ್ಧಿಗೆ ಕೆಲಸಕೊಟ್ಟಾಂತಾಗುತ್ತದೆ. ಒಂದೆಡೆ ಎಣಿಕೆಯ ಕ್ರಮ ಕಲಿತಂತಾದರೆ ಮತ್ತೊಂದೆಡೆ ಆ ಕೆಲಸದಲ್ಲಿ ನಮ್ಮ ಶ್ರದ್ಧೆ ಎಷ್ಟೆಂಬುದನ್ನು ಮನಗಾಣಬಹುದು. ಇಂತಹ ಏಕಾಗ್ರತೆಗೆ ಹೆಸರಾದ ಕಲೆಯು ಇಂದು ಗೌಣವಾಗಿರುವುದರಿಂದ ಎಲ್ಲೋ ಒಂದೆಡೆ ಈ ಸಂಸ್ಕೃತಿಯು ನಾಶದ ಅಂಚಿಗೆ ತಲುಪಿರುವುದರಿಂದ ಈ ಕಲೆಯ ಬಗ್ಗೆ ಹೆಚ್ಚು ಗಮನಿಸುತ್ತಾ ಒಂದೆಡೆ ಗೊರೂರರು ಈ

---

೮. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಕೆಲವು ಗ್ರಹಿಕೆಗಳು. ಪುಟ. ೨೮–೧೫೧.

ರಂಗವಲ್ಲಿ ಕಲೆಯನ್ನು ಗುರುತಿಸಲು ಇಚ್ಛಿಸಿದ್ದಾರೆಂಬುದನ್ನು ಡಿ.ಕೆ.ರಾಜೇಂದ್ರರವರು ಪ್ರತಿಪಾದಿಸಿದ್ದಾರೆ.

ಕಲೆಯ ಅವಶ್ಯಕತೆಯನ್ನು ಗುರುತಿಸುತ್ತಾ ತಮ್ಮ ಊರಿನ ಅನುಭವದ ಬಗ್ಗೆ ಮತ್ತು ಅವರ ಜನಸಮುದಾಯದವರ ಕಲೆಯ ಶೈಲಿಯನ್ನು ಇಲ್ಲಿ ತೋರ್ಪಡಿಸಲು ಪ್ರಯತ್ನಿಸುತ್ತಾ ಹೀಗೆ ಹೇಳಿದ್ದಾರೆ. "ನಮ್ಮೂರಿನ ಜನಸಮುದಾಯ ರಂಗೋಲಿಯನ್ನು ನಮ್ಮೂರಿನ ತೇರಿನಂತಿಡುತ್ತಾಳೆ" ಎಂದಿದ್ದಾರೆ. ಅಂದರೇ ಒಂದು ದೇವಸ್ಥಾನವನ್ನು ಕಟ್ಟಬೇಕಾದರೆ ಅಥವಾ ಒಂದು ಮಹತ್ವಪೂರ್ಣ ಕೆಲಸಕ್ಕೆ ಎಷ್ಟರಮಟ್ಟಿಗೆ ಎಚ್ಚರವಾಗಿ ಕೆಲಸ ನಡೆಸಬೇಕೋ ಅದೇ ರೀತಿಯಲ್ಲಿ ಅಷ್ಟೇ ಶ್ರದ್ದೆಯಿಂದ ರಂಗೋಲಿ ಇಡುವ ಕೆಲಸವನ್ನು ನಮ್ಮ ಸ್ತ್ರೀ ಸಮುದಾಯ ಮಾಡುತ್ತದೆ. ರಂಗೋಲಿ ಇಟ್ಟಾಗ ಇಡೀ ಭೂಮಂಡಲಕ್ಕೆಲ್ಲ ಮಲ್ಲಿಗೆ ಚೆಲ್ಲಿದಂತೆ ಕಾಣುತ್ತದೆ. ಇಂದಿಗೂ ಸಹ ರಂಗೋಲಿ ಇಡುವ ಪದ್ಧತಿ ಇರುವುದನ್ನು ನಾವು ಮನಗಾಣಬಹುದು. ರಂಗವಲ್ಲಿ ಇಲ್ಲದೆ ಯಾವುದೇ ಮದುವೆ ಸಂಭ್ರಮಗಳು ಹಬ್ಬ ಹರಿದಿನಗಳು ನಡೆಯುವುದಿಲ್ಲ ಎಂಬುದು ಸಂತೋಷದ ಸಂಗತಿಯಾಗಿದೆ. ಈ ರಂಗವಲ್ಲಿ ಕಲೆಯಲ್ಲಿ ಒಬ್ಬೊಬ್ಬರ ಕಲೆಯು ವಿಶಿಷ್ಟವಾದುದಾಗಿದೆ. ಒಬ್ಬಳು ಸಾವಿರದಳದ ಪದ್ಮದಾಗಿಟ್ಟರೆ, ಮತ್ತೊಬ್ಬಳು ಕಲ್ಕಿಯಂತೆ ಇಡುತ್ತಾಳೆ. ಮತ್ತೊಬ್ಬಳು ಪ್ರಭಾವಳಿ ಗರುಡನಂತೆ ಕಲೆಯ ವಿಶಿಷ್ಟತೆಯನ್ನು ತೋರ್ಪಡಿಸುವುದನ್ನು ನಾವು ಇಂದಿಗೂ ಹಳ್ಳಿಯ ಸಂಸ್ಕೃತಿಯಲ್ಲಿ ಕಾಣಬಹುದಾಗಿದೆ ಎಂಬುದನ್ನು ರಾಜೇಂದ್ರರವರು ಸಮರ್ಥವಾಗಿ ವ್ಯಾಖ್ಯಾನಿಸಿದ್ದಾರೆ. ಒಬ್ಬೊಬ್ಬಳಿಂದ ಒಂದೊಂದು ಕಲೆಯು ಪ್ರದರ್ಶನಗೊಳ್ಳುವುದರಿಂದ ಒಬ್ಬಳ ಕಲೆ ಮತ್ತೊಬ್ಬಳಿಗೆ ಪರಿಚಯವಾಗುತ್ತದೆ. ಮತ್ತೊಬ್ಬಳ ಕಲೆ ಇನ್ನೊಬ್ಬಳಿಗೆ ಪರಿಚಯವಾಗಿ ಬುದ್ದಿಗೆ ಚುರುಕುಮುಟ್ಟಿಸುತ್ತದೆ. ಇದು ಸ್ತ್ರೀಸಮುದಾಯದ ಕಲಾಪ್ರತಿಭೆಯನ್ನು ಪುರುಷ ಗುರುತಿಸಿದರೆ, ಮತ್ತೊಂದೆಡೆ ಪುರುಷರ ಕಲೆಗಳನ್ನು ತೋರ್ಪಡಿಸುತ್ತಾ ಕೊಂಬೂದುವುದು, ತಮಟೆ ಹೊಡೆಯುವುದು, ಕೋಲಾಟವಾಡುವುದು ಎಂಬುದಾಗೆಲ್ಲ ಕಲೆಯ ಸುಳಿಯನ್ನು ತಿಳಿಸಿದ್ದಾರೆ. ಹಿಂದಿನ ಕಾಲಘಟ್ಟದಲ್ಲಿ ಕೊಂಬೂದುವುದು ಒಂದು ವಿಶಿಷ್ಟ ಕಲೆಯೇ. ಇದರಿಂದಾಗಿ ಹಿಂದಿನ ರಾಜರ – ವೀರಾಧಿ ವೀರಾರ ದಿಗ್ವಿಜಯದ ಪತಾಕೆಯ ಕೂಗು ಕೇಳಿಸುತ್ತಿತ್ತು. ಇದರಿಂದಾಗಿ ಒಗ್ಗಟ್ಟಿನ ಬಲದ ಪ್ರದರ್ಶನವನ್ನು ತೋರ್ಪಡಿಸಲು ಸಜ್ಜಾಗಿರುವುದನ್ನು ನೋಡಬಹುದಾಗಿತ್ತು. ಮತ್ತಷ್ಟು ತಮ್ಮೂರಿನ ಶಿಷ್ಟಕಲೆಗಳನ್ನು ಪರಿಚಯಿಸುತ್ತಾ ಕೋಲಾಟದ ಬಗ್ಗೆಯೂ ಚಿಂತಿಸುವುದು ಅವಶ್ಯಕವಾದ ವಿಚಾರವಾಗಿದೆ. ಕೋಲಾಟದಿಂದ ಒಂದು ದೈವಸಂಭ್ರಮದ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸಬಹುದಾಗಿದೆ. ಕೋಲುಗಳಿಂದ

ಬಡಿದಾಗ ಅದರಿಂದ ಹೊರಹೊಮ್ಮುವ ವಿಶಿಷ್ಟ ರಾಗತಾಳದಿಂದ ಒಂದು ಹೊಸ ಸ್ಥಳದ ಪರಿಚಯದಿಂದಾದ ಸಂತೋಷದ ಅನುಭವವೇ ಆಗುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಕೋಲಾಟದ ಪರಿಚಯ ಎಲ್ಲರಿಗೂ ಹರುಷತರುವಂತಹ ವಿಷಯವೇ ಆಗಿರುವುದು ಒಂದು ಸಂತೋಷದ ಶುದ್ಧಿಯಾಗಿದೆ. ಈ ಕಲೆಯಿಂದ ಒಂದು ಜನಸಮುದಾಯದ ಪ್ರತಿಭೆಯನ್ನು ಮನಗಂಡರೇ ಆ ಸಮುದಾಯದ ವಿಶಿಷ್ಟ ರೀತಿಯ ವಸ್ತ್ರಾಭರಣ, ವೇಷಭೂಷಣ ಆ ಕಲೆಗೆ ಅವರು ನೀಡಿರುವ ಮಹತ್ವ ಆ ಕಲೆಯಿಂದಾಗುವ ಮನರಂಜನೆ ಇಡೀ ದೈವಲೋಕದ ಪರಿಯನ್ನೇ ನೋಡಿದಷ್ಟು ಆನಂದಮಯವಾಗಿ ಕಲೆಯು ವೀಕ್ಷಕರ ಕಣ್ಣಿಗೆ ಗೋಚರಿಸುತ್ತವೆ ಎಂಬುದು ಸತ್ಯಸಂಗತಿಯಾಗಿದೆ ಎಂಬುದನ್ನು ಡಿ.ಕೆ.ರಾಜೇಂದ್ರ ಅವರು ಶೋಧಿಸಿದ್ದಾರೆ.

ಕುಣಿತದ ರೂಪದಲ್ಲಿಯೂ ಬೆರೆತಿರುವ ಕಲೆಯ ಭಾಗವನ್ನು ಮತ್ತು ವಾದ್ಯಗಳನ್ನು ಹೇಳುತ್ತ ನಗಾರಿ, ಡೋಲು, ಕಹಳೆ, ಶಂಖ, ಜಾಗಟೆ, ಬಾಂಕಿ, ತುತ್ತೂರಿ ಮುಂತಾದ ವಾದ್ಯಗಳಿಂದ ವಿಶಿಷ್ಟರೂಪದ ಕಲೆಯು ಅಭಿವ್ಯಕ್ತಗೊಳ್ಳುತ್ತದೆ ಎಂಬುದಾಗಿ ವಿವರಿಸತ್ತಲೇ ಇವೆಲ್ಲವೂ ಪಾರಂಪರಿಕ ಸ್ಥಿತಿಯನ್ನು ಆಧರಿಸಿ ರಚಿತಗೊಂಡಂತಹ ಜನಪದ ಅಂಶವೇ ಆಗಿದೆ ಎಂಬುದಾಗಿ ಹೇಳುತ್ತ, ಇವುಗಳೆಲ್ಲವೂ ಇಂದಿನ ಪ್ರಪಂಚಕ್ಕೆ ಅಗಾಧ ಕೊಡುಗೆಯನ್ನು ನೀಡುತ್ತ ಬೆಳೆದುಕೊಂಡಿವೆ ಎಂಬುದು ಗಮನಾರ್ಹ ವಿಷಯ. ಸಂಸ್ಕೃತಿಯು ಹಿಂದಿನಿಂದಲೂ ಚಾಚಿಕೊಂಡಿತ್ತೆಂದರೆ ಕಲೆಯು ಆದ ಸಂಸ್ಕೃತಿಯನ್ನು ಅಪ್ಪಿಕೊಂಡಿದ್ದು ಒಂದೊಂದು ಒಂದನ್ನು ಬಿಟ್ಟಿರಲಾರವು ಎಂಬುದಾಗಿ ಹೇಳುತ್ತಾ ಕಲೆಯ ವಿಶಿಷ್ಟ ರೀತಿಯ ಗುಣಗಳನ್ನು ಮತ್ತು ಕಲೆಗೆ ಸಂಬಂಧಿಸಿದ ವಿಶಿಷ್ಟ ರೀತಿಯ ವಾದ್ಯಗಳ ವಿಶೇಷತೆಯನ್ನು ಗುರುತಿಸುವಲ್ಲಿ ಇವೆಲ್ಲವೂ ಒಂದು ಸಾಂಪ್ರದಾಯಿಕ ಬದ್ದವಾಗಿಯೇ ಉಳಿದಿವೆ ಎಂಬುದಾಗಿ ಪ್ರೊ. ಡಿ.ಕೆ.ರಾಜೇಂದ್ರರವರು ತಮ್ಮದೇ ಆದ ಪ್ರಬುದ್ಧ ಚಿಂತನೆಗಳನ್ನು ಹೊರಹೊಮ್ಮಿಸಿದ್ದಾರೆ.

ಪ್ರದರ್ಶನಾತ್ಮಕ ಜನಪದ ಕಲೆಗಳ ಸಾಂಸ್ಕೃತಿಕ ಮತ್ತು ವೈಚಾರಿಕ ಹಿನ್ನೆಲೆ

ಡಿ.ಕೆ.ರಾಜೇಂದ್ರ ಅವರ ಪ್ರದರ್ಶನಾತ್ಮಕ ಜನಪದ ಕಲೆಗಳ ಸಾಂಸ್ಕತಿಕ ಮತ್ತು ವೈಚಾರಿಕ ಹಿನ್ನೆಲೆ ಎಂಬ ಲೇಕನ ಗಮನಾರ್ಹವಾದುದಾಗಿದೆ. ಪ್ರದರ್ಶನಾತ್ಮಕ ಕಲೆ ಇಲ್ಲದೆ ನಾಟಕಗಳು ಮತ್ತು ಸಂಗೀತಗಳು ಸುಸ್ಸಜ್ಜಿತವಾಗಿ ಸಾಗಲು ಸಾಧ್ಯವಿಲ್ಲ. ಪ್ರದರ್ಶನಾತ್ಮಕ ಕಲೆಗಳೆಂದರೆ ಒಂದು ನಿರ್ದಿಷ್ಟ ಕ್ರಮದಲ್ಲಿ ಆ ನಾಟಕದ ಮೂಲವಸ್ತುವನ್ನು ಒಳಗೊಂಡಿದ್ದು ಅದು ಆ ಕತೆಯದೇ ಆ ನಾಟಕದೇ ಆ ನೃತ್ಯದೇ ವೇಷಭೂಷಣಗಳಿಂದ ವಾದ್ಯ ವಿಶೇಷಗಳಿಂದಲೇ ಕೂಡಿದ್ದು ಕಲಾತ್ಮಕರೂಪದಲ್ಲಿ ಅವು ರೂಪುಗೊಂಡಿರುವುದು ಒಂದು

ನಿರ್ದಿಷ್ಟ ಸಂದರ್ಭದಲ್ಲಿ ಕಲೆಯ ರೂಪದಲ್ಲಿ ಪ್ರದರ್ಶನಗೊಳ್ಳುವ ಮೂಲಕ ಹೊರಹೊಮ್ಮುತ್ತದೆ.

ಜಾನಪದ ಎಂಬುದು ಮನುಷ್ಯ ಮತ್ತು ಆತನ ಜೀವನದ ಅನುಭವದ ಒಂದು ಅಂಗ ಅದರಂತೆಯೇ ಕಲೆಯು ಸಹ ಮನುಷ್ಯನೊಂದಿಗೆ ನಿಕಟ ಸಂಬಂಧ ಹೊಂದಿರುವುದನ್ನು ಮನಗಾಣಬಹುದು. ಮನುಷ್ಯ ಮತ್ತು ಕಲೆಗೆ ಅವಿನಾಭಾವ ಸಂಬಂಧವಿದೆಯೋ ಹಾಗೆಯೇ ಆತನ ಸುತ್ತಲಿನ ಸಂಪ್ರದಾಯ ಆಚಾರವಿಚಾರ ಸಂಸ್ಕೃತಿ ಅವನನ್ನೇ ಆವರಿಸಿಕೊಂಡಿದ್ದು ಸಂದರ್ಭಕ್ಕನುಗುಣವಾಗಿ ಹಬ್ಬಹರಿದಿನಗಳಲ್ಲಿ ಸುಗ್ಗಿ ಸಂದರ್ಭದಲ್ಲಿ ಸಂತೋಷದ ಸಂದರ್ಭದಲ್ಲಿ ಮನುಷ್ಯನಿಂದಲೇ ರೂಪವನ್ನು ಪಡೆದು ಹೊರಹೊಮ್ಮುತ್ತದೆ. ಹಾಗೆಯೇ 'ಬೆಂಕಿ ಇಲ್ಲದೆ ಹೊಗೆಯಾಡುವುದಿಲ್ಲವೋ' ಹಾಗೆಯೇ ಪ್ರದರ್ಶನಾತ್ಮಕ ಕಲೆ ಎಂಬುದು ಮನುಷ್ಯನಲ್ಲಿ ಅಡಗಿರುವ ಮಾಯಶಕ್ತಿಯಾಗಿದೆ. ಈ ನಿಟ್ಟಿನಲ್ಲಿ ಪ್ರದರ್ಶನಾತ್ಮಕ ನಾಯಕರನ್ನು ಹೇಳುತ್ತಾ ಜನಪದ ನೃತ್ಯಗಳು ಬಯಲಾಟ ವೃತ್ತಿಗಾಯಕಮೇಳ, ಕೋಲಾಟ ಸೋಮನ ಕುಣಿತ ಸೂತ್ರದ ಗೊಂಬೆಯಾಟ ಮುಂತಾದವು ಈ ವರ್ಗದಲ್ಲಿ ಕಂಡಿಬಂದಿದ್ದಾರೋ ಇವಕ್ಕೆ ತಕ್ಕ ಹಾಗೆ ವೃತ್ತಿಗಾಯಕರನ್ನು ಕಾಣಬಹುದು. ಈ ವೃತ್ತಿಗಾಯಕರಾದ ಕೋಲಾಟದವರು ದಾಸರು ಮಂಟೇಸ್ವಾಮಿ ಆರಾಧಕರು ಮಲೇ ಮಾಹದೇಶ್ವರ ಆರಾಧಕರು, ಸಿದ್ದಿಗಳು ಕಪ್ಪಡಿರಾಜಪ್ಪನ ಭಕ್ತರು. ಇನ್ನೂ ಮುಂತಾದ ಹತ್ತು ಹಲವು ವೃತ್ತಿಗಾಯಕರನ್ನು ಕಾಣಬಹುದು. ಇವರು ಒಂದು ಆರಾಧ್ಯ ದೈವದ ಅಲ್ಲಿನ ನೀತಿನಿಯಮ ಕಟ್ಟುಪಾಡುಗಳಿಗೆ ಬದ್ದರಾಗಿ ನಿಯಮಕ್ಕೆ ಅನುಸಾರವಾಗಿ ನಡೆಯುತ್ತಾರೆ. ಒಂದು ವೃತ್ತಿ ಎಂದರೇ ತನ್ನದೆಯಾದ ಗೌರವವನ್ನು ಹೊಂದಿರುತ್ತದೆ. ಅದರಂತೆಯೇ ಈ ವೃತ್ತಿಗಾಯಕರು ಶಿಷ್ಟಸಂಸ್ಕೃತಿಯನ್ನು ರಕ್ಷಿಸಲ್ಪಡುತ್ತಾರೆ. ಆಚಾರ-ವಿಚಾರ ಸಂಪ್ರದಾಯಕ್ಕೆ ಬದ್ದರಾಗಿ ಅವುಗಳನ್ನು ಉಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆಂದು ಇಲ್ಲಿ ಡಿ.ಕೆ.ರಾಜೇಂದ್ರವರು ಶ್ಲಾಘಿಸಿದ್ದಾರೆ.

ಹೀಗೆ ಜನಪದ ಕಲೆಗಳ ಬಗ್ಗೆ ವ್ಯಕ್ತಪಡಿಸುತ್ತಾ ಜನಪದ ಕಲೆಗಳಲ್ಲಿ ಪ್ರಮುಖವಾಗಿ ಎರಡು ರೀತಿಯಾಗಿವೆ ಹೌದು. ಪ್ರದರ್ಶನಾತ್ಮಕ ಕಲೆಯಾದರೆ ಮತ್ತೊಂದು ಪ್ರದರ್ಶನಾತ್ಮಕವಲ್ಲದು ಎಂದರ್ಥ. ಪ್ರದರ್ಶನಾತ್ಮಕ ಕಲೆಯಲ್ಲಿ ನೃತ್ಯ. ಬಯಲಾಟ ಕಂಡುಬಂದರೆ ಪ್ರದರ್ಶನಾತ್ಮಕವಲ್ಲದ ಕಲೆಗಳೆ ಒಂದು ರೀತಿಯ ಯಾವುದೇ ಚಟುವಟಿಕೆಗಳಿಲ್ಲದ ಸ್ತಬ್ಧ ಚಿತ್ರಗಳಾಗಿ ಮೂಡಿಬರುತ್ತವೆ. ಗೋಡೆ ಮೇಲಿನ ಚಿತ್ರಗಳು ಮಡಿಕೆ ಮೇಲಿನ ಚಿತ್ರಗಳು ನೇಗಿಲ ಮೇಲಿನ ಚಿತ್ರಗಳು ಹೀಗೆ ಒಂದೆಡೆ ಚಿತ್ರಕಾರನ ವಿಶಿಷ್ಟಶೈಲಿಯು

ಮನದಟ್ಟಾದರೆ ಮತ್ತೊಂದೆಡೆ ಚಿತ್ರಗಳ ವೀಕ್ಷಣೆಯಿಂದ ಜನಪದದ ಕಸುಬು ಮತ್ತು ಕಲೆಗಾರನ ಶ್ರಮಸಂಸ್ಕೃತಿಯನ್ನು ಪರಿಚಯಿಸುವಲ್ಲಿ ಡಿ.ಕೆ.ರಾಜೇಂದ್ರ ಅವರು ಯಶಸ್ವಿಯಾಗಿದ್ದಾರೆ. ಹಾಗೆಯೇ ದೇವರು ಧರ್ಮಗಳಬಗ್ಗೆ ಜನಪದರು ನಂಬಿರುವ ಶಿಷ್ಟವೈಶಿಷ್ಟ್ಯಗಳ ಕಲ್ಪನೆಯೇ ದೇವರು. ಕಾಯಕವೇ ದೇವರು ಕಾಯಕದಲ್ಲೇ ದೇವರನ್ನು ಕಾಣುವರು ಇಡೀ ಸರ್ವಸ್ವವೇ ದೇವರಾಗಿದ್ದರಿಂದ ಪರಿಸರದ ಎಲ್ಲಾ ವಸ್ತುಗಳಾದ ಗಾಳಿ ನೀರು ಮಣ್ಣು ಮುಂತಾದವನ್ನೆಲ್ಲ ದೇವರರೂಪದಲ್ಲಿ ಜನಪದರು ಪೂಜಾವಿಧಾನದಿಂದ ನೋಡಿದ್ದಾರೆ. ಅದರಂತೆಯೇ ಅವರು ಧಾರ್ಮಿಕ ವೃತ್ತಿಗಾಯಕರೆಂದು ಗುರುತಿಸುತ್ತಾ ತಾವು ನಂಬಿರುವ ದೇವರ ಬಗ್ಗೆ ಗುಣಗಾನ ಮಾಡುತ್ತ, ಹಾಡುವ ಮೂಲಕ ಇಡೀ ಸಮಾಜಕ್ಕೆ ತಮ್ಮ ದೈವ ಸಂಸ್ಕೃತಿಯನ್ನು ಪರಿಚಯಿಸಲು ಇಚ್ಛಿಸುತ್ತಾರೆ. ನೀಲಗಾರರು ಚೌಡಿಕೆಯವರು ಗೊರವರು ಜುಂಜಪ್ಪನ ಸಂಪ್ರದಾಯದವರನ್ನಾಗಲೀ ಗುರುತಿಸುವಲ್ಲಿ ಡಿ.ಕೆ.ರಾಜೇಂದ್ರರವರು ಯಶಸ್ವಿಯಾಗಿದ್ದಾರೆ. ಪ್ರದರ್ಶನತ್ಮಕ ಕಲೆಗಳು ಜನಪದರ ಸಾಂಸ್ಕೃತಿಕ ಹಾಗೂ ವೈಚಾರಿಕ ಬದುಕಿನ ಕೈಗನ್ನಡಿಗಳಾಗಿ ಇಂದಿನ ಸಮಾಜದಲ್ಲಿ ಗೌರವ ಸ್ಥಾನವನ್ನು ಪಡೆದುಕೊಂಡಿದ್ದು ಧರ್ಮದ ಪ್ರಕಾರದ ಪ್ರದರ್ಶನಾತ್ಮಕ ಕಲೆಗಳು ಸಹ ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದು ಅವುಗಳ ಪೈಕಿ ಕರಗಹೊತ್ತು ಕುಣಿಯುವುದು, ವೀರಾಗಾಸೆ, ದೊಡ್ಡಕುಣಿತ ಹೀಗೆ ಹತ್ತು ಹಲವು ಜನಪದ ಸಂಸ್ಕ್ರತಿಗಳು ಒಂದನ್ನೊಂದು ಅಪ್ಪಿಕೊಂಡು ಬೆಳೆದುಕೊಂಡಿದ್ದರೂ ಒಂದೊಂದು ಸಹ ಕೊಂಡಿಯಂತೆಯೇ ಸಂಸ್ಕೃತಿ ಮತ್ತು ವೈಚಾರಿಕ ಹಿನ್ನೆಲೆಯನ್ನೆ ಒಳಗೊಂಡಿವೆ. ಪರಂಪರೆಯಿಲ್ಲದೆ ಸಂಸ್ಕೃತಿ ಇಲ್ಲ ಸಂಸ್ಕೃತಿ ಇಲ್ಲದೆ ಜನಪದವಿಲ್ಲ ಅದರಂತೆಯೇ ಸಹ. ಸಂಸ್ಕೃತಿ ಮತ್ತು ಪರಂಪರೇ ಒಂದು ನಾಣ್ಯದ ಎರಡು ಮುಖಗಳಿದ್ದಂತೆ ಒಂದೆಡೆ ನಾಗರಿಕತೆಯ ಅರಿವಿನಿಂದ ಸಂಸ್ಕೃತಿ ಬೆಳೆದರೆ ಮತ್ತೊಂದೆಡೆ ಆ ಸಂಸ್ಕೃತಿಗೆ ಪೂರಕವಾದ ಜನಪದ ಅಂಶಗಳಿಂದಾಗಲಿ ಮಗದೊಂದಗಲಿ ಸಹಾಯಕವಾಗಿರುತ್ತವೆ. ಪ್ರದರ್ಶನಾತ್ಮಕ ಜನಪದ ಕಲೆಗಳಿಗೆ ಹೇಗೆ ಸಂಸ್ಕೃತಿಯ ಹಿನ್ನೆಲೆ ಇರುವಂತೆಯೇ ಸಂಸ್ಕೃತಿಯ ಹಿನ್ನೆಲೆಯು ಅಷ್ಟೇ ಮಹತ್ವದ್ದಾಗಿದೆ. ಒಂದು ದೇವಸ್ಥಾನ ಕಟ್ಟಲು ಎಲ್ಲಾ ಪರಿಕರಗಳು ಜನಸಮುದಾಯದ ಅನುಭವ ಮತ್ತು ಸಂಸ್ಕೃತಿ ಮತ್ತು ವೈಚಾರಿಕ ಹಿನ್ನೆಲೆಗಳು ಸಹ ಅಷ್ಟೇ ಗಟ್ಟಿತನವಾದದ್ದು ಎಂಬುದಾಗಿ ಡಿ.ಕೆ.ರಾಜೇಂದ್ರರವರು ಅತ್ಯಂತ ವಿಶಿಷ್ಟವಾಗಿ ಶೋಧಿಸಿದ್ದಾರೆ.

ಪ್ರೊ. ಡಿ.ಕೆ. ರಾಜೇಂದ್ರ ಅವರು ಸಂಪಾದಿಸಿರುವ ಜಾನಪದ ಕೆಲವು ಗ್ರಹಿಕೆಗಳು ಎಂಬ ಕೃತಿಯಲ್ಲಿ ಗೊರೂರರು ಹೆಸರಿಸಿರುವ ಕರ್ನಾಟಕದಲ್ಲಿ 'ಜನಪದ ಪತ್ರಿಕೆಗಳು' ಎಂಬ ಪ್ರಬಂಧಗಳು ಪತ್ರಿಕೆಗಳ ಪಾತ್ರ ಎಷ್ಟರಮಟ್ಟಿಗೆ ಸಮಾಜದಲ್ಲಿ ಗಟ್ಟಿಯಾಗಿ ಅವಶ್ಯಕತೆಯ

ಹಂತದಲ್ಲಿ ನಿಂತಿದೆ ಎಂಬುದನ್ನು ಪತ್ರಿಕೆಯಿಂದಾಗುವ ಅನುಕುಲಗಳು ಅನಾನುಕೂಲಗಳು ಮತ್ತು ಪತ್ರಿಕೆಯಿಂದಾಗುವ ಜ್ಞಾನಾಭಿವೃದ್ಧಿ ಪತ್ರಿಕೆಯು ಜಾನಪದದಲ್ಲಿ ಬೇರು ಬಿಟ್ಟಿರುವಂತಹ ಗಾಢವಾದ ಬೇರನ್ನು ಬಿಟ್ಟು ಜನಪದದ ಉಳಿವಿಗಾಗಿಯೂ ಪತ್ರಿಕೆಯ ಮಹತ್ವವೂ ಕೂಡ ಗಮನಾರ್ಹವಾದುದ್ದೆಂದು ಸಾಧಕಬಾಧಕಗಳನ್ನು ಕುರಿತು ಗಂಭೀರವಾಗಿ ಚರ್ಚಿಸಿದ್ದಾರೆ.

ಜಾನಪದಕ್ಕೆ ಪತ್ರಿಕೆಯ ಪಾತ್ರ ಅಪಾರವಾದುದ್ದಾಗಿದೆ. ಮನುಷ್ಯನು ನಾಗರಿಕತೆಯಿಂದ ಅಭಿವೃದ್ಧಿಹೊಂದಿದಂತೆಲ್ಲ ಸಂಸ್ಕೃತಿಯು ಬೆಳವಣಿಗೆಯಾಯಿತು. ಸಂಸ್ಕೃತಿಯನ್ನು ಅಪ್ಪಿಕೊಂಡು ಜಾನಪದ ಬೆಳೆಯತೊಡಗಿದಂತೆಲ್ಲ ಪತ್ರಿಕೆಯ ಪಾತ್ರ ಪ್ರಮುಖವಾಯಿತು. ಇಂದಿನ ಪ್ರಬಂಧದಲ್ಲಿ ಪತ್ರಿಕೆ ಇಲ್ಲದೆ ಸುದ್ದಿ ಸಮಾಚಾರಗಳ ಸುಳಿವಿಲ್ಲ. ಅದರಂತೆಯೇ ಸಹ ಪತ್ರಿಕೆಗಳು ಸಾಹಿತ್ಯದ ನೆಲೆಬೆಲೆ ಬಿತ್ತುವಲ್ಲಿ ಗಂಭೀರ ಕೆಲಸವನ್ನು ಮಾಡಿದವು. ಜಾನಪದದ ಅರಿವು ಬಹುಮುಖ್ಯವಾಗಿ ಜನಸಮುದಾಯದವರಿಗೆ ಹಿಂದೆಯೇ ಇತ್ತು. ಅದು ಗೌಣವಾದ ಸಂಸ್ಕೃತಿಯಾಗಿತ್ತು. ಈ ರೀತಿಯ ನಾಶಹೊಂದಿದ ಜನಪದವನ್ನು ಪತ್ರಿಕೆಗಳ ಮೂಲಕ ಮತ್ತು ಜನಪದ ಸಂಸ್ಕೃತಿಯನ್ನು ಪತ್ರಿಕೆಗಳು ಪರಿಚಯಿಸುವಲ್ಲಿ ಮೇಲುಗೈಯಾದವು. ಈ ನಿಟ್ಟಿನಲ್ಲಿ ಕಂಡುಬಂದಂತಹ ಜಾನಪದ ಪತ್ರಿಕೆ "ಜನಪದ ಜಗತ್ತು" ಹೆಸರೇ ಸೂಚಿಸುವಂತೆ ವಿವಿಧ ಜಗತ್ತಿನ ಆಚಾರವಿಚಾರ ಸಂಪ್ರದಾಯ ನಂಬಿಕೆ ಆಚರಣೆಗಳು ಮುಂತಾದ ಜನಪದ ಕಲೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತ ಜನಸಾಮಾನ್ಯರಲ್ಲಿ ಜಾನಪದ ಅಭಿವೃದ್ಧಿಯನ್ನು ಬಿತ್ತುವಲ್ಲಿ ಜನಪದದ ಆಳವನ್ನು ಸೂಚಿಸುತ್ತ ಅಧ್ಯಯನಕ್ಕೆ ದಾರಿಮಾಡಿಕೊಡಲು ನಿರ್ದಿಷ್ಟ ಹಾದಿಯಾದವು. ಸಣ್ಣಪುಟ್ಟ ಜನಪದ ಕಥೆಗಳು, ಕಾವ್ಯಗಳು, ನಾಟಕಗಳು ಇನ್ನೂ ಮುಂತಾದವುಗಳ ಬಗ್ಗೆ ಈ ಪತ್ರಿಕೆಗಳು ಹೆಚ್ಚು ವಿಚಾರವನ್ನು ಹೊರಹಾಕಿದ್ದವೆಂಬುದನ್ನು ಡಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಇನ್ನೂ ಹತ್ತು ಹಲವು ಜಾನಪದ ಪತ್ರಿಕೆಗಳನ್ನು ಗುರುತಿಸಿರುವುದು ಈ ಕೆಳಕಂಡಂತೆ ಕಾಣುತ್ತಾ ಜನಪದದಲ್ಲಿ ಸ್ವದೇಶಿ ಭಾಷಾ ಪತ್ರಿಕೆಗಳು ಮಾತ್ರ ಜನಪದದ ಅರಿವನ್ನೂ ಮೂಡಿಸುವಲ್ಲಿ ಕೆಲಸ ಮಾಡಿಲ್ಲ. ವಿದೇಶಿ ಪತ್ರಿಕೆಗಳು ಸಹ ಕೆಲಸ ಮಾಡಿರುವುದು ನಮಗೆ ಮಾಹಿತಿಯ ದ್ವಾರವನ್ನೆ ತೆರೆದಂತಾಗಿದೆ ಎಂಬಂತೆ ಕೆಲವು ವಿದೇಶಿಪತ್ರಿಕೆಗಳಾದ ಇಂಡಿಯನ್ ಆಂಟಿಕ್ವಯರಿ ಎಂಬುದು ಒಂದಾಗಿದೆ. ಅದು ಸ್ವಾತಂತ್ರ್ಯಪೂರ್ವದ ಹೋರಾಟದ ಬಗ್ಗೆ ಮತ್ತು ಅಂದಿನ ಲಾವಣಿಗೀತೆಗಳನ್ನು ಕಥನಗೀತೆಗಳನ್ನು ಜನಪದ ಗೀತಾಪ್ರಕಾರಗಳನ್ನು ಪತ್ರಿಕೆಯ ಮೂಲಕ ಜೆ.ಎಸ್.ಫ್ಲೀಟ್ ಮಾಹಿತಿಯನ್ನು ಈ ಪತ್ರಿಕೆಯ ಮೂಲಕ ಹೊರಹಾಕಿಸಲು ಪ್ರಯತ್ನಿಸಿದ್ದಾರೆ. ಬ್ರಿಟಿಷರು ಅಂದಿನ ವೇಳೆಯಲ್ಲಿ ನಡೆಸಿದ ರಾಜಕೀಯ

ದಬ್ಬಾಳಿಕೆ ಅಂದಿನ ಜನಪ್ರತಿನಿಧಿಗಳ ಪ್ರತಿಭಟನೆಯ ಧ್ವನಿ ಮುಂತಾದ ವಿಷಯಗಳ ಬಗ್ಗೆ ಲಾವಣಿಗಳ ಬಗ್ಗೆಯೂ ಮಾಹಿತಿಯನ್ನು ಕಟ್ಟಿಕೊಡುವಲ್ಲಿ ಜಾನಪದ ಪತ್ರಿಕೆಗಳು ಸಾಧನೆ ಶ್ಲಾಘನೀಯವಾದದ್ದು ಎಂಬ ಡಿ.ಕೆ.ರಾಜೇಂದ್ರ ಅವರ ಚಿಂತನೆಗಳು ಗಮನಾರ್ಹವಾದವುಗಳು.

ಕರ್ನಾಟಕದಲ್ಲಿಯೂ ಜನಪದ ಪತ್ರಿಕೆಗಳ ಹಾವಳಿ ತುಂಬಾನೆ ಇತ್ತೆಂಬುದನ್ನು ಹೇಳುತ್ತ ಮಯೂರ ಸುಧಾ ತರಂಗ ಇವುಗಳು ಜನಪದದ ಕಥೆಗೀತೆ, ಗಾದೆ ಒಗಟು ಲಘುಪ್ರಬಂಧ ಮುಂತಾದ ಪತ್ರಿಕೆಗಳು ಸಹ ಜನಪದದ ಮಾಹಿತಿಯ ಬಗೆಗೆ ಜನಸಾಮಾನ್ಯರಲ್ಲಿ ಅರಿವುಮೂಡಿಸುವಲ್ಲಿ ಪ್ರಮುಖವಾಗಿದ್ದವು. ಜನಪದದ ಸಂಸ್ಕೃತಿ ಮತ್ತು ಸಾಹಿತ್ಯದ ಸೊಬಗನ್ನು ಜನಪದಾಸಕ್ತರಿಗೆ ಪರಿಚಯಿಸಿಕೊಡಲು ಸಾಧ್ಯವಾದವು. ಪತ್ರಿಕೆಯ ಅವಶ್ಯಕತೆಯನ್ನು ಮನಗಂಡಿದ್ದಾರೆ. ವಿಜ್ಞಾನಗಳ ಬಗ್ಗೆ ಮಾಹಿತಿ ನೀಡಲು ವಿಜ್ಞಾನಕ್ಕೆಂದೇ ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಂದ ಪತ್ರಿಕೆ ಪ್ರಬುದ್ಧ ಕರ್ನಾಟಕ. ಇದರಿಂದಾಗಿ ಜನಪದದ ವಸ್ತುವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಆ ವಸ್ತುಗಳ ನೀತಿನಿಯಮ ಕ್ರಮಗಳನ್ನು ಗುರುತಿಸುತ್ತಾ ವಿಮರ್ಶಾ ಲೇಖನಗಳು, ಪ್ರಬಂಧಗಳು, ಸಂಶೋಧನೆಗಳು ಪ್ರಮುಖವಾಗಿ ಕಂಡುಬಂದಿದ್ದು ಜನಪದದಲ್ಲಿ ಇನ್ನೂ ಹತ್ತು ಹಲವು ಪತ್ರಿಕೆಗಳು ಕಂಡುಬಂದವೆಂದರೇ ಜಾನಪದ, ಜಾನಪದ ಜಗತ್ತು, ಮೂಡಲಪಾಯ, ಜನಪದ ಗಂಗೋತ್ರಿ, ಹೀಗೆ ಜನಪದಕ್ಕಾಗಿಯೇ ಈ ಪತ್ರಿಕೆಗಳು ಬೆಳಕಿಗೆ ಬಂದಿವೆ ಎಂಬ ಚಾರಿತ್ರಿಕ ಮಹತ್ವಗಳನ್ನು ಡಿ.ಕೆ.ಆರ್. ಗುರುತಿಸಿ ಜನಪದದ ಬಗ್ಗೆ ಕನ್ನಡದ ಪತ್ರಿಕೆಗಳೇ ಮಾತ್ರವಲ್ಲ ಇಂಗ್ಲಿಷ್ ಪತ್ರಿಕೆಗಳೂ ಮಹತ್ವವಾದ ಕೆಲಸವನ್ನು ಮಾಡಿವೆ ಎಂಬುದನ್ನು ಹೇಳುತ್ತಾ, ಈ ರೀತಿಯಾಗಿ ಇಂಗ್ಲಿಷ್ ಪತ್ರಿಕೆಗಳನ್ನು ಗುರುತಿಸಿದ್ದಾರೆ.

ಕರ್ನಾಟಕ 'ಫೋಕ್‌ಲಾರ್ ನ್ಯೂಸ್ ಲೆಟರ್ಸ್', 'ಜನರಲ್ ಆಫ್ ಇಂಡಿಯಾ ಫೋಕ್‌ಲೋರ್ಸ್', ಪ್ರಸಾರಂಗ ಎಫ್.ಎಫ್.ಐ. ನ್ಯೂಸ್ ಬುಲೇಟಿನ್ ಎಂಬ ಪತ್ರಿಕೆಗಳ ಮಹತ್ವವನ್ನು ವಿವರಿಸುತ್ತಾ ಜಾನಪದದ ಎಲ್ಲಾ ದೃಷ್ಟಿಯಿಂದಲೂ ಪತ್ರಿಕೆಗಳ ಪಾತ್ರ ದೊಡ್ಡದೆಂದು ವ್ಯಾಖ್ಯಾನಿಸಿರುವುದು ಅರ್ಥಪೂರ್ಣವಾದುದು. ಕರ್ನಾಟಕದಲ್ಲಿ ಜನಪದ ಪತ್ರಿಕೆಗಳ ಚಟುವಟಿಕೆಯನ್ನು ಗುರುತಿಸುತ್ತಾ ಕರ್ನಾಟಕದಲ್ಲಿ ಜನಪದ ಪತ್ರಿಕೆ ಕರ್ನಾಟಕದ ಮೇರು ವಿದ್ವಾಂಸರ ಕೈವಾಡದಿಂದಲೇ ಹೊರಬಂದಿದ್ದು ಶ್ರೀ ಕೆ.ಆರ್.ಲಿಂಗಪ್ಪ, ಹಾ.ಮಾ.ನಾಯಕ, ಡಾ. ಜೀ.ಶಂ.ಪ, ಸಿಂಪಿ ಲಿಂಗಣ್ಣ, ಪಿ.ಅರ್.ತಿಪ್ಪೇಸ್ವಾಮಿ, ಗೊರೂರು ಚನ್ನಬಸಪ್ಪ ಮುಂತಾದವರಿಂದಲೂ ಕರ್ನಾಟಕದಲ್ಲಿ ಜನಪದ ಪತ್ರಿಕೆಗಳ ಚಟುವಟಿಕೆ ಆರಂಭಗೊಂಡಿತೆಂದು ಡಿ.ಕೆ.ರಾಜೇಂದ್ರರವರು ಚರ್ಚಿಸಿದ್ದಾರೆ. ೧೯೬೮ರಲ್ಲಿ ತರೀಕೆರೆಯಲ್ಲಿ

ನಡೆದ ಪ್ರಥಮ ಜಾನಪದ ಸಮ್ಮೇಳನ ನಡೆಯಿತು. ಇದರಿಂದಾಗಿಯೂ ಜನಪದ ಪತ್ರಿಕೆಗಳಿಗೆ ಬೇಡಿಕೆ ಹೆಚ್ಚಾಯಿತು. ಇದರಿಂದಾಗಿ ಕರ್ನಾಟಕದಲ್ಲಿಯೂ ಪತ್ರಿಕೆಗಳ ಬುಡ ಗಟ್ಟಿಯಾಗಲು ಪ್ರೇರಕವಾಯಿತು.

ಪತ್ರಿಕೆಗಳಿಗಾಗಿಯೇ ಹಲವಾರು ಸಂಸ್ಥೆಗಳು ಪ್ರಾರಂಭಗೊಂಡವು. ಈ ಸಂಸ್ಥೆಗಳ ಬಗ್ಗೆ ಕುರಿತು ಹೇಳುತ್ತಾ ಜೀಶಂಪ ಹೀಗೆಂದಿದ್ದಾರೆ. “ಭಾರತದಲ್ಲಿ ಬಹುಮಟ್ಟಿಗೆ ಉನ್ನತ ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಇಂತಹ ಒಂದು ಸಂಸ್ಥೆಯ ಅಗತ್ಯವಿದ್ದು ಅದು ಈಗಾಲಾದರೂ ಅಸ್ತಿತ್ವಕ್ಕೆ ಬಂದಿರುವುದು ಸಂತೋಷದ ವಿಷಯ ಕೆಲವು ತಿಂಗಳುಗಳ ಹಿಂದೆ ಕಲ್ಕತ್ತಾದಲ್ಲಿ ಕೇಂದ್ರಿಯ ಭಾಷಾ ಸಂಸ್ಥೆ ಹಾಗೂ ಕಲ್ಕತ್ತಾದ ಜಾನಪದ ಪರಿಷತ್ತಿನ ಆಶ್ರಯದಲ್ಲಿ ನಡೆದ ಅಖಿಲ ಭಾರತದ ಜಾನಪದ ಸಮ್ಮೇಳನದ ಸಂದರ್ಭದಲ್ಲಿ ಎಫ್ಎಫ್ಐ ಉದಯವಾಗಿದೆ. ಭಾರತದ ಪ್ರಸಿದ್ಧ ಜಾನಪದ ತಜ್ಞರೆಲ್ಲ ಸಂಘಟಿತರಾಗಿರುವುದು ಶುಭದ ಸೂಚನೆಯಾಗಿದೆ. ಈಗಾಗಲೇ ವಾರ್ತಾಪತ್ರಿಕೆಗಳನ್ನು ಬಿಡುಗಡೆ ಮಾಡಿ ಸಮಗ್ರ ಭಾರತದಲ್ಲಿ ಹೊಸಗಾಳಿಯೊಂದು ಬೀಸುವಂತೆ ಮಾಡಿದ್ದು ರಾಜ್ಯಮಟ್ಟದಲ್ಲಿ ಕರ್ನಾಟಕ ಜಾನಪದ ಪರಿಷತ್ತು ಹಾಗೂ ಜೊತೆಯಲ್ಲಿ ಜಾನಪದ ಪತ್ರಿಕೆಯೊಂದು ಆರಂಭವಾದಂತೆ ರಾಷ್ಟ್ರಮಟ್ಟದಲ್ಲಿ ಎಫ್ಎಫ್ಐ. ಪೋಕ್‌ಲೋರ್ ಫೇಲೋಸ್ ಆಫ್ ಇಂಡಿಯಾ ಪರಿಷತ್ತು ಒಂದು ಆರಂಭವಾಗಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ”[೯] ಕರ್ನಾಟಕದ ಜನಪದ ಪತ್ರಿಕೆಗಳಿಂದ ಸಂಗ್ರಹಣೆ, ಸಂಶೋಧನೆ ವೀಡಿಯೋ, ಚಿತ್ರೀಕರಣ ವಿಚಾರಗೋಷ್ಠಿಗಳು ಇತ್ಯಾದಿ ಚಟುವಟಿಕೆಗಳನ್ನು ಪ್ರಕಟಿಸಲು ಸಾಧ್ಯವಾಯಿತು ಮತ್ತು ಜಾನಪದದ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಜನಪದದ ವಿಷಯವನ್ನು ಜನಪದ ಸಾಹಿತ್ಯ ಅಭ್ಯಾಸಿಗಳಿಗೆ ಮತ್ತು ಮಾಹಿತಿಯನ್ನು ಜನಪದರಿಗೆ ನೀಡುತ್ತದೆ ಎಂಬ ಡಿ.ಕೆ.ರಾಜೇಂದ್ರ ಅವರ ಚಿಂತನೆಗಳು ಸ್ವೀಕಾರಾರ್ಹವಾಗಿವೆ.

ಜನಪದ ಆಚರಣೆ, ವಿಚಾರಣೆ, ಸಂಸ್ಕೃತಿ ಸಂಪ್ರದಾಯಗಳ ಬಗ್ಗೆ ನಮಗೆ ಅರಿವೇ ಇರುತ್ತಿರಲಿಲ್ಲವೆಂಬುದು ಸತ್ಯವಾದುದು. ಈ ಎಲ್ಲಾ ಪತ್ರಿಕೆಗಳೂ ಒಂದೊಂದು ಹಂತದಲ್ಲಿ ಸಂದರ್ಭನುಚಿತ ಕೆಲಸವನ್ನೇ ಮಾಡಿದ್ದರು. ಇಂದಿನ ಪೀಳಿಗೆಗೂ ಅವುಗಳು ಇರಬೇಕಿತ್ತು. ಒಂದೆಡೆ ಪತ್ರಿಕೆಗಳು ಹೆಸರನ್ನೇ ಸಂಪಾದಿಸಿದ್ದರೂ ಮತ್ತೊಂದೆಡೆ ಸಮಾಜಕ್ಕೆ ಉಪಯುಕ್ತವಾದ ಕೆಲಸವನ್ನೇ ಮಾಡಿವೆ ಜಾನಪದ ಉಳಿವಿಗೆ ಶ್ರಮಿಸಿವೆ ಎಂಬುದನ್ನು ಶ್ರೀಸಾಮಾನ್ಯರು ಸಾಹಿತ್ಯಭ್ಯಾಸಿಗಳು ಮತ್ತು ವಿದ್ವಾಂಸರುಗಳು ಮರೆಯುವಂತಿಲ್ಲ. ಹೀಗೆ ಡಿ.ಕೆ.ರಾಜೇಂದ್ರ

---

೯. ಡೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಕೆಲವು ಗ್ರಹಿಕೆಗಳು ಪುಟ. ೧೬೭-೧೭೦

ಅವರು 'ಜಾನಪದ ಕೆಲವು ಗ್ರಹಿಕೆಗಳು' ಎಂಬ ಕೃತಿಯ ರಚಿಸುವುದರ ಮೂಲಕ ಕನ್ನಡ ಜಾನಪದ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನೇ ನೀಡಿದ್ದಾರೆ ಎಂಬ ಮಾತನ್ನು ಅಲ್ಲಗೆಳೆಯಲಾಗದು.

೧.೩. ಜಾನಪದ ಸಂಪದ

ಪದವವೆ ನಮ್ಮ ಎದೆಯಲ್ಲಿ ಹಾಡ್ಗತೆಗಳು: ಪದವವೇ ನಮ್ಮ ಎದೆಯಲ್ಲಿ ಯ ಕೃತಿಯಲ್ಲಿ ಆರನೆಯ ದಾಳ– ಹಾಡ್ಗಗತೆಗಳು ಜಾನಪದ ಕ್ಷೇತ್ರದಲ್ಲಿ ಕೆಲವು ಉತ್ತಮ ಸಂಕಲನಗಳನ್ನು ಹೊರತಂದಿರುವ ಹೆಚ್.ಎಲ್.ನಾಗೇಗೌಡರು. 1976ರಲ್ಲಿ ಸಂಪಾದಿಸಿ ಪ್ರಕಟಿಸಿದ ಈ ಕೃತಿ ಒಂದು ಉತ್ತಮ ಸಂಕಲನ. ಜನಪದ ಗೀತೆಗಳ ಹಲವು ಪ್ರಮುಖ ಪ್ರಕಾರಗಳು ಇದರಲ್ಲಿ ಪರಿಚಯಗೊಂಡಿದೆ ಎಂಬುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ಶೋಧಿಸಿದ್ದಾರೆ. ಸೋಬಾನೆ ಪದಗಳು, ಒಸಗೆ ಪದಗಳು, ಲಾಲಿಪದಗಳು, ಬಾಂಧವ್ಯದ ಹಾಡುಗಳು, ದೇವಿ ಮತ್ತು ದೇವರು ಹೊಲೆಯರು ಹೊಗಳುವ ಪದಗಳು, ಕೋಲಾಟದ ಪದಗಳು, ಹಚ್ಚೆ ಹೊಯ್ಯುವ ಪದಗಳು, ಮಕ್ಕಳ ಪದಗಳು ಮುಂತಾದವುಗಳಂತೆಯೇ ಹಾಡ್ಗಗತೆಗಳು ಇವರಲ್ಲಿಯ ಒಂದು ದಳ ಇವೆಲ್ಲವೂ ಕತೆಗಳನ್ನು ಹೇಳುವ ಹಾಡುಗಳು. ಇವುಗಳಲ್ಲಿ ಕಎಲವು ಹೆಂಗಸರು ಹೇಳುವ ಹಾಡುಗಳಾದರೆ, ಇನ್ನೂ ಕೆಲವು ಗಂಡಸರು ಹೇಳುವ ಹಾಡುಗಳಿವೆ. ಗಂಡಸರಲ್ಲಿ ವೃತ್ತಿಗಾಯಕರು ಆಗಿರಬಹುದು ಇಲ್ಲವೇ ಸಾಮಾನ್ಯ ಗಾಯಕರು ಆಗಿರಬಹುದು. ಇವರುಗಳು ವಾದ್ಯದ ಹಿನ್ನಲೆಯಲ್ಲಿ ಹಾಡುವ ಹಾಡ್ಗಗತೆಗಳಾದರೆ ಮತ್ತೆ ಕೆಲವು ಯಾವ ವಾದ್ಯದ ಹಿನ್ನಲೆಯಲ್ಲಿಯೂ ಇಲ್ಲದೆ ರಾಗಿಬೀಸುವಾಗಲೋ ಕಳೆ ಕೀಳುವಾಗಲೋ, ಹಾಡುವ ಹಾಡ್ಗಗತೆಗಳು ಕಂಡುಬರುತ್ತವೆ. ಹಳ್ಳಿಯ ಹಾಡ್ಗಗತೆಗಳಿಗೆ ಪ್ರೊ. ಡಿ.ಕೆ.ರಾಜೇಂದ್ರ ಅವರು ಹೆಚ್ಚಿನ ಪ್ರಾಶಸ್ತ್ಯ ನೀಡಿರುವುದನ್ನು ಚರ್ಚಿಸಲಾಗಿದೆ.

ಹಾಡ್ಗತೆ ಎಂದರೆ ಕತೆಯನ್ನು ಹಾಡುಗಳ ಮುಖಾಂತರ ಪದಗಳ ಗುಚ್ಛವನ್ನು ಬಳಸಿ ಹಾಡುವುದು, ಹಾಡ್ಗತೆಗಳ ಭಾಗದಲ್ಲಿ ಒಟ್ಟು (14) ಹಾಡ್ಗಗತೆಗಳಿವೆ. ಪಾಪಿಗೇಡಿ ಅಣ್ಣಯ್ಯ, ಬಂಜೆ ಹೊನ್ನಮ್ಮ, ಕಾಟಿವಕ್ಕಲು ಕೂಣವೇಗೌಡ, ಕಲಿಯುಗದೊಳಗೆ ಕರ್ಮವೆಚ್ಚಿತು, ಬಾಳಿಗಂಜಿ ಬಂಜೆ ಹೊನ್ನಮ್ಮ, ಸತ್ಯವಂತ ನಾಗಮಣಿ, ಗೌರಮ್ಮನ ಮೇಲೆ, ಕತ್ತಲೆರಾಯ, ಕುಸುಮಾಲೆ ಕೆಂಗಪ್ಪನ ಹಟ್ಟಿ ತಿಮ್ಮಮ್ಮ, ಎಳೆಯನು ಕೆಂಗಪ್ಪ, ಎಳಗನಾಥರು ಸಾಕಿ ಮುಂತಾದವು ಹಾಡ್ಗತೆಗಳು ಕಂಡುಬರುತ್ತವೆ. ತುಂಬಿದ ಬಳ್ಳಾರಿವರೆಗೆ ಮಕ್ಕಳಿಲ್ಲದ, ಬಂಜೆಹೊಕ್ಕಳು ಸಂಜನಗೂಡು ಎತ್ತಿದೆ ನಾಗಪ್ಪನಾ ಸ್ಮರಣೆಯೂ ಈ ಕಥೆಗಿನ ಗೀತೆಗಳಲ್ಲಿ

ಕೆಲವು ಈಗಾಗಲೇ ಹೆಚ್ಚು ಜನಪ್ರಿಯವಾಗಿದ್ದು, ಬೇರೆ ಬೇರೆ ಸಂಕನಗಳಲ್ಲಿಯಾದರೂ ಒಂದೆರಡು ಸಣ್ಣಪುಟ್ಟ ಪಾಠಂತರಗಳೊಡನೆ ಇಲ್ಲಿ ಕಂಡುಬರುವುದು ಕಷ್ಟ.

ಪ್ರೊ. ಡಿ.ಕೆ.ರಾಜೇಂದ್ರ ಅವರು ಹಳ್ಳಿಯ ಸೊಗಡಿನ ನಾನಾ ಹೊಸರೀತಿಯ ಹಾಡ್ಗತೆಯನ್ನು ಪರಿಚಯಿಸಿದ್ದಾರೆ. ಇಲ್ಲಿಯ ಮೊದಲ ಹಾಡ್ಗತೆಯಾದ 'ಪಾಪಿಗೇಡಿಅಣ್ಣಯ್ಯ', ಅದೇ ಹೆಸರಿನಲ್ಲಿ ಡಾ.ಜೀ.ಶಂ.ಪರಮಶಿವಯ್ಯ ಅವರು ಸಂಪಾದಿಸಿರುವ ದೊಂಬಿದಾಸರ ಲಾವಣಿಗಳು ಸಂಕಲನದಲ್ಲಿಯೂ ದೊರೆಯುತ್ತದೆ. ಘಾತುಕ ಅಣ್ಣಯ್ಯ ಎಂಬ ಮತ್ತೊಂದು ಪಾಠಂತರವನ್ನು ಅವರು ಕೊಟ್ಟಿದ್ದಾರೆ. ನಂ.ನಾರಾಯಣಗೌಡರು ಸಂಪಾದಿಸಿರುವ ಚೌಡಿಕೆ ಕಾವ್ಯಗಳು ಸಂಕಲನದಲ್ಲಿ ಅಣ್ಣತಂಗಿ ಎಂಬ ಶೀರ್ಷಿಕಯ ಅಡಿಯಲ್ಲಿ ಈ ಕಥನ ಗೀತೆ ಕಂಡುಬರುತ್ತದೆ. ಕರ್ನಾಟಕದಾದ್ಯಂತ ಕಂಡುಬರುವ, ಹಾಗೆಯೇ ಬೇರೆ ಬೇರೆ ಸಂಪ್ರದಾಯಕ್ಕೆ ಸೇರಿದ ಗಾಯಕರೂ ಇದನ್ನು ಹಾಡುತ್ತಾರೆ. ಇಲ್ಲಿನ ಅಧ್ಯಯನದಲ್ಲಿ ಮೂವರು ಸಂಗ್ರಹಕಾರರೂ ಎರಡು ಸಂಪ್ರದಾಯದವರಿಂದ ಸಂಗ್ರಹಿಸಿರುವುದನ್ನು ವ್ಯಾಖ್ಯಾನಿಸಲಾಗುತ್ತದೆ.

ಡಾ. ಜಿ.ಶಂ.ಪ. ಅವರು ಹಾಗೂ ಎಚ್.ಎಲ್.ನಾಗೇಗೌಡರು ದೊಂಬಿದಾಸರಿಂದ ಈ ಹಾಡ್ಗತೆಯನ್ನು ಸಂಗ್ರಹಿಸಿದ್ದಾರೆ. ಒಬ್ಬರು ತುರುವೆಕೆರೆಯಲ್ಲಿ ಸಂಗ್ರಹಿಸಿದ್ದರೆ, ಮತ್ತೊಬ್ಬರು ಚನ್ನರಾಯಪಟ್ಟಣ ಭಾಗದಲ್ಲಿ ಸಂಗ್ರಹಿಸಿದ್ದಾರೆ. ಭೌಗೋಳಿಕವಾಗಿ ಅಂತಹ ಅಂತರ ಕಂಡಬಂದರು ಕಥೆಯಲ್ಲಿ ಅಂತರ ಬಹಳಷ್ಟು ಇದೆ. ಹೆಚ್.ಎನ್.ನಾಗೇಗೌಡರ ಹಾಡ್ಗತೆಗಳು ಭಾಗದಲ್ಲಿ ಬರುವ ಕಥೆಯನ್ನು ಹೀಗೆ ಸಂಗ್ರಹಿಸಿರುವುದನ್ನು ನೋಡಬಹುದು.

ವರ್ಷಕ್ಕೊಂದು ಸಾರಿ ಬರುವ ದೀಪಾವಳಿಗೆ ತನ್ನನ್ನು ಕರೆದುಕೊಂಡು ಹೋಗಲು ಅಣ್ಣ ಬರುವನೆಂಬ ಕನಸನ್ನು ತಂಗಿ ಕಾಣುತ್ತಾಳೆ. ಗಂಡನ ಮನೆಯಲ್ಲಿರುವ ಹೆಣ್ಣುಮಕ್ಕಳು ಅದಕ್ಕಾಗಿ ಸಂತೋಷದಿಂದ ಅಣ್ಣನ ಬರುವಿಕೆಗೆ ಕಾಯುತ್ತಿರುತ್ತಾಳೆ.

"ಅಣ್ಣರಾಜನು ಬರುತ್ತಾನೆ
ಈಡುಗಾಯ ಒಡುದೇನೂ
ಜೋಡುಗಾಯ ಒಡೆದೇನೂ
ಊರು ಮುಂದಲ ದೇವರಿಗೆ
ಹರಕೆನಾದರೂ ಮಾಡುತ್ತಾಳೆ"[೧೦]

೧೦. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೨

ಅಣ್ಣನ ಬರುವನ್ನು ಇಷ್ಟೊಂದು ಸಂಭ್ರಮದಿಂದ ನಿರೀಕ್ಷಿಸುತ್ತಿರುವಂತೆಯೇ ಅಣ್ಣ ಬರುತ್ತಾನೆ. ಅವಳ ಸಂತೋಷಕ್ಕೆ ಎಣೆಯೇ ಇಲ್ಲದಂತಾಗುತ್ತದೆ. ಅಪರೂಪಕ್ಕೆ ಬಂದ ಅಣ್ಣನಿಗಾಗಿ

ಹಾಲಕ್ಕಿನಲ್ಲಿ ಅಕ್ಕಿ ತೊಳೆದು
ಅಣ್ಣನಿಗಡಿಗೆ ಮಾಡ್ಯವ್ಳೆ[೧೧]

ಮಾರನೇ ದಿನ ಅತ್ತೆ ಮಾವ ಗಂಡನ ಅಪ್ಪಣೆಯನ್ನು ಪಡೆದು ಅಣ್ಣನೊಂದಿಗೆ ತೌರಿಗೆ ಹೊರಡುತ್ತಾಳೆ ಹೋಗುತ್ತಾ ಹೋಗುತ್ತಾ ಅಣ್ಣ ಊರದಾರಿಯನ್ನು ಬಿಟ್ಟು ಕಾಡುದಾರಿಯನ್ನು ಹಿಡಿದಿದ್ದಾನೆ, ತಂಗಿತೊಟ್ಟಿದ್ದ ಒಡವೆ, ವಸ್ತ್ರ ಅವನನ್ನು ರಾಕ್ಷಸನನ್ನಾಗಿ ಮಾಡುತ್ತದೆ. ಸ್ವಾರ್ಥದ ಮುದ್ದೆಯನ್ನಾಗಿಸುತ್ತದೆ. ಇಲ್ಲಿ ಅಣ್ಣ ತಂಗಿ ಸಂಬಂಧವನ್ನು ಒಡವೆ ವಸ್ತ್ರದ ದುರಾಸೆಯು ಈ ಸಂಬಂಧವನ್ನು ಮುರಿದು ರಾಕ್ಷಸನ ದಾರಿ ತಲುಪುವಂತೆ ಮಾಡುತ್ತದೆ ಎಂಬುದಾಗಿ ಪ್ರೊ. ಡಿ.ಕೆ.ರಾಜೇಂದ್ರ ಅವರು ಸಂಕಟ ವ್ಯಕ್ತಪಡಿಸಿದ್ದಾರೆ.

'ತಂಗಿ ತೊಟ್ಟ ಆಭರಣ
ನನ್ನ ಹೆಂಡ್ತಿಗಾದರೆ ಇಲವಲ್ಲೋ
ಕಾಡಿಗೆ ಕರೆದುಕೊಂಡು ಹೋಗಬೇಕು
ತಂಗಿ ತಲೆಯ ಹುಯ್ಯಬೇಕು
ಬೆಟ್ಟದ ಪುರದ ಕಾಡಿನಲ್ಲಿ
ಮಾನಭಂಗ ಮಾಡಬೇಕು'[೧೨]

ಎಂದು ಮನದಲ್ಲಿಯೇ ಆಲೋಚಿಸುತ್ತಾ ಅದರಂತೆ ಕಾಡಿನ ಮಧ್ಯೆ ಕರೆತಂದಿದ್ದಾನೆ. ಹಣದ ದಾಹ ಎಂತಹ ಒಳ್ಳೆಯ ವ್ಯಕ್ತಿಯನ್ನು ಕೂಡ ಕ್ರೂರ ರಾಕ್ಷಸನಾಗುವಂತೆ ಮಾಡುತ್ತದೆ ಎಂಬುದು ಗಮನಾರ್ಹ ಅಂಶವಾಗಿದೆ.

ನೀ ತೊಟ್ಟಿರೋ ಸೀರೆ ಒಡವೆ
ಬಿಚ್ಚು ಮಡಗೆ ಹೊಲೆರಂಡೆ

ಎಂದು ಕೆಟ್ಟ ಮಾತುಗಳಿಂದ ನಿಂದಿಸುತ್ತಾನೆ. ಅವಳು ಎಷ್ಟು ಅಂಗಲಾಚಿ ಬೇಡಿದರೂ ಕೇಳುವಂತಿಲ್ಲ. ಎಂಟು ತಿಂಗಳ ಬಿಮ್ಮನ್‌ಸೆಗೆ ಮಾನಭಂಗ ಮಾಡಬೇಡ' ಎಂದು ಕಾಲನ್ನು ಹಿಡಿದು ಬೇಡಿದರೂ ಅವನು ಕೇಳುವಂತಿಲ್ಲ,

೧೧. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ. ಪುಟ. ೩
೧೨. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ. ಪುಟ. ೪

ಸೀರೆಕೊಡದಿದ್ರೆ ಎಳಗೊಂಡು ಕಂಡ ಮಾಡನು' ಎಂದು ಕ್ರೂರವಾಗಿ ನುಡಿಯುತ್ತಾನೆ. ಆಗ ಅವನೇ ಮುಂದಾಗಿ ಕಣ್ಣಿಗೆ ಬಟ್ಟೆಯನ್ನು ಬಿಗಿಯುತ್ತಾನೆ. ಸೀರೆ ಒಡವೆ ಬಿಚ್ಯಾನೆ ಪಾಪಿಗೇಡಿ ಅಣ್ಣಯ್ಯ ಕಾರೆಮುಳ್ಳು ತತ್ತಾನೆ, ಕಣ್ಣಿಗಾದರೂ ಹೊಡಿತಾನೆ ಈಚಲು ಮುಳ್ಳು ತತ್ತಾನೆ ಬಾರಿ ಹಿಂಸೆ ಮಾಡುತ್ತಾನೆ ಆಗ ತಾಳಲಾರದೆ ಅವಳ ಗರ್ಭದಲ್ಲಿಯ ಪಿಂಡವೇ ಮಾವನನ್ನು ಕುರಿತು

'ಬೇಡ ಬೇಡ ಮಾವಯ್ಯ
ತಂಗಿಗೆ ಮೋಸ ಮಾಡಬೇಡ
ಅತ್ಯಮ್ಮ ಸತ್ತರೆ
ಇನ್ನೊಬ್ಬಳ ತರಬಲ್ಲೆ
ಒಡಹುಟ್ಟಿದ ತಂಗಿ ಕೊಂದರೆ
ಇನ್ನೊಂದು ಸಾರಿ ಸಿಕ್ಕುವಳೇ'[೧೩]

ಎಲ್ಲೋ ಒಂದೆಡೆ ಮನಸ್ಸು ಮಗುವಿನ ರೂಪತಾಳಿ ತಾಯಿಯ ಗರ್ಭದಲ್ಲಿಯೇ ನಿಂತು ಈ ಮಾತನ್ನು ಹೇಳುತ್ತದೆ. ಏಕೆಂದರೆ ಪ್ರಪಂಚದಲ್ಲಿ ಎರಡು ವಸ್ತುಗಳು ತುಂಬ ಪ್ರಮುಖವಾದವು. ಅವುಗಳೆಂದರೆ ತಾಯಿ, ತಂಗಿ, ಅದರಂತೆಯೇ ಸಹ ಹೆಂಡತಿ ಸತ್ತರೆ ಮತ್ತೊಬ್ಬಳನ್ನು ತರಬಹುದು ತಾಯಿ-ತಂಗೆ ಎಂಬ ಅಮೂಲ್ಯ ವಸ್ತುಗಳು. ಕಳೆದರೆ ಬರಲಾರವು. ಆದರೆ ಏನೇ ಹೇಳಿದರು ಅಣ್ಣನ ಮನಸ್ಥಿತಿಯೇ ಬೇರೆ ಮನಸ್ಸಿನಲ್ಲಿ ಹಣ ಸಂಪತ್ತಿನ ದಾಹ ಮತ್ತು ಕಾಮುಕತನ ಆಳವಾಗಿ ಬೇರೂರಿರುತ್ತದೆ, ಎಷ್ಟೇ ಬುದ್ದಿಯನ್ನು ಆ ಮಗು ಹೇಳಿದರು ಕೇಳುವುದಿಲ್ಲ, ತೌರಿಗೆ ಬಂದರೆ ಎಲ್ಲವನ್ನು ಹೇಳುತ್ತಾಳೆಂದು ಸಾಕ್ಷಿಯನ್ನು ಹತ್ತಿಕ್ಕಲು ಮುಂದಾಗುತ್ತಾನೆ, ತನ್ನ ಕೈಯಲ್ಲಿದ್ದ ಕತ್ತಿ ಶಿವನ ಕರುಣೆಯೆಂಬ ಬೆಳಕು ಸೋಕಿ ಮಾಯವಾಗುತ್ತದೆ. ಆದರೂ ಪ್ರಯತ್ನ ಬಿಡದೆ ಬಳಿ ಇದ್ದ ಕಲ್ಲನ್ನು ತಲೆಯ ಮೇಲೆ ಹಾಕಲು ಕೈಗೆತ್ತಿಕೊಳ್ಳಲು ಹೋಗಿದ್ದಾನೆ. ಆಗ ಕಲ್ಲಿನಡಿಯಲ್ಲಿ ಮಲಗಿದ್ದ ಸರ್ಪ ಅವನ ಕೈಗೆ ಕಚ್ಚುತ್ತದೆ. ತನ್ನ ಪ್ರಾಣ ಉಳಿಸುವಂತೆ ತನ್ನ ತಂಗಿಯನ್ನು ಬೇಡಿದ್ದಾನೆ. ತಂಗಿಯ ರಕ್ತಸಂಬಂಧದ ಗುಣ ಮತ್ತು ತಾಳ್ಮೆ ಮತ್ತು ಧೈರ್ಯದ ಮನಃಸ್ಥಿತಿಯಲ್ಲಿ ಅಣ್ಣನ ರಕ್ಷಣೆಯನ್ನು ಮಾಡುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಅಪಕಾರ ಮಾಡಿದವನಿಗೂ ಉಪಕಾರ ಮಾಡು ಎಂಬ ಚಿಕಿತ್ಸಕ ಬುದ್ಧಿ ಗುಣವು ಕಂಡುಬರುತ್ತದೆ. ಕೈಕಾಲು ಕಟ್ಟಿದ್ದೀಯ ಹೇಗೆ ಬರಲಣ್ಣಯ್ಯ ಎಂದು ತನ್ನ

೧೩. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೯

ಅಸಹಾಯಕತೆಯನ್ನು ತೋರಿದ್ದಾಳೆ. ಅಣ್ಣನ ಪರಿಸ್ಥಿತಿಯನ್ನು ಕಂಡು ದುಃಖಿಸಿದ್ದಾಳೆ. ಈಕೆಯ ಸತ್ಯವನ್ನು ಪರೀಕ್ಷಿಸಲು ಶಿವನು ಬಂದು ದುಃಖಕ್ಕೆ ಕಾರಣವನ್ನು ಕೇಳುತ್ತಾನೆ. ತಂಗಿ ಅಣ್ಣನನ್ನು ಬಿಟ್ಟುಕೊಡುವುದಿಲ್ಲ ಅಣ್ಣನ ಸಾವಿಗೆ ನಿಜವಾದ ಕಾರಣವನ್ನು ತಿಳಿಸದೆ ಕಾಡಿನಲ್ಲಿ ಬರುವಾಗ ಏಳುಜನ ಕಳ್ಳರು ಎಲ್ಲವನ್ನು ಅಪಹರಿಸಿ ಈ ಸ್ಥಿತಿಗೀಡುಮಾಡಿದ್ದಾರೆಂದು ಹೇಳುತ್ತಾಳೆ. ಇವಳು ಅಣ್ಣನ ಆಸೆಯನ್ನು ಬಿಡದ ಸತ್ಯವಂತೆ ಎಂಬುದು ಸಾಬಿತಾಗುತ್ತದೆ. ಕೈಕಾಲು ಬಿಚ್ಚಿ ಸೀರೆ ಒಡವೆ ಕೊಡುತ್ತಾನೆ. ತಂಗಿಯ ಸತ್ಯಕ್ಕೆ ಮೆಚ್ಚಿದ ಶಿವನು ಅವನು ಮಾಡಿದ ಕರ್ಮಕ್ಕೆ ಅವನು ಸಾಯಲಿ ಎಂದು ಹೇಳಿದಾಗಲು ತನ್ನ ಅಣ್ಣನನ್ನು ಉಳಿಸಲು ಪ್ರಯತ್ನಿಸುತ್ತಾಳೆ. ಇಲ್ಲಿ ತಂಗಿಯ ಅರಿವು, ಜ್ಞಾನ ಮತ್ತು ತಂಗಿಯ ಮನಸ್ಸು ವಿಶಾಲವಾದುದು. ಅಣ್ಣನು ಮಾಡಿದ್ದು ತಪ್ಪೆಂದು ಅವನಿಗೆ ಅನಿಸುವುದೇ ಇಲ್ಲ ಬದಲಿಗೆ ಸಹೋದರಿಯಿಂದ ಯಾರಿಗೂ ಈ ವಿಷಯವನ್ನು ಬಾಯಿ ಬಿಡದಂತೆ ಭಾಷೆಯನ್ನು ಪಡೆಯುತ್ತಾನೆ. ಸತ್ಯ, ಧರ್ಮ, ನ್ಯಾಯಕ್ಕೆ ಸಹೋದರಿಯು ಬೆಲೆಯನ್ನು ನೀಡಿದರೆ ಅಣ್ಣ ದನದ ದಾಹದಿಂದ ಆಕೆಗೆ ಮೋಸ ಬಗೆಯಲು ಮುಂದಾಗುತ್ತಾನೆ. ಮನುಷ್ಯನಲ್ಲಿ ಮಾನವೀಯತೆ ಗುಣ ಮತ್ತು ಸತ್ಯಧರ್ಮಕ್ಕೆ ಬೆಲೆಕೊಡುವ ಮನುಷ್ಯತ್ವ ಇರಬೇಕೆಂದು ಪ್ರೊ. ಡಿ.ಕೆ.ರಾಜೇಂದ್ರ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಚೌಡಿಕೆ ಸಂಪ್ರದಾಯದವರು ಹಾಡುವ ಅಣ್ಣತಂಗಿ ದೊಂಬಿ ದಾಸರು ಹಾಡುವ ಹಾಡ್ಗತೆಗಿಂತ ಸಂಪೂರ್ಣ ಬೇರೆಯಾದುದು. ಈ ಹಾಡ್ಗತೆ ಇಲ್ಲಿ ಆರಂಭದಿಂದ ಅಂತ್ಯದವರೆಗೂ ಬೇರೆ ಬೇರೆಯಾಗಿಯೇ ಬರುತ್ತದೆ. ಚೌಡಿಕೆ ಕಾವ್ಯದಲ್ಲಿ ಬರುವ ಅಣ್ಣ ತಂಗಿಯರ ಕಥೆ ಹೀಗಿದೆ– ಕೆಟ್ಟ ನಕ್ಷತ್ರ ಹುಟ್ಟಿದವನು ಎಂಬ ಕಾರಣದಿಂದಾಗಿ ಹುಟ್ಟುತ್ತಲೆ ತಂದೆ–ತಾಯಿಯನ್ನು ದೂರ ಮಾಡಿದ್ದ, ಅಣ್ಣನ ಗುರುತನ್ನು ಹಿಡಿದ ತಂಗಿ ಮಾತನಾಡಿಸಿ ಅಂಬಿಗ ಅಣ್ಣನನ್ನು ಹೊಳಡ ದಾಟಿಸುವಂತೆ ಕೇಳಿಕೊಳ್ಳುತ್ತಾಳೆ. ಅಣ್ಣ ಎಂದು ಸಂಬೋಧಿಸಿದ ಅವಳನ್ನು ಕಾಮಿಸಿದ ಅಣ್ಣ ತಂಗಿಯನ್ನು ಕುರಿತು

"ಕೇಳೆ ಕೇಳೆ ಸೀಲವಂತರ್ಲೆಣ್ಣ
ಮಾತು ಮಾತು ಇದ್ದಗೆ ನೀನು
ಯಣ್ಣ ಯಪ್ಪ ಅನ್ನಲಿಬೇಡ
ನನ್ಗೆ ನಿಮ್ಮಪ್ಪ ಮಾವಾಗಬೇಕು
ನನ್ಗೆ ನಿಮ್ಮವ್ವ ಅತ್ಯಾಗಬೇಕು
ನನ್ಗೆ ನಿಮ್ಮಕ್ಕಾರು ಅತಿಗಾರಗಬೇಕು

ನಿಮ್ಮಾಣ್ಣರು ಬಾಮ್ಯೆದ್ರು ಕಾಣೆ ಕನ್ನೆ ಪ್ರಾಯ ಬಾಲೆ"[೧೪]

ಎಷ್ಟೇ ಬೇಡ ಬೇಡ ಎಂದು ಕೇಳಿ ಅಂಗಲಾಚಿದರು ಅದನ್ನು ಅಣ್ಣನು ಗಮನಕ್ಕೆ ತೆಗೆದುಕೊಳ್ಳದೆ ಕಾಮಿಸಿ ಪೀಡಿಸುತ್ತಾನೆ. ಈ ಹಾಡ್ಗತೆಗೆ ಸಂಬಂಧಿಸಿದ ಈ ನಾಲ್ಕು ಪಾಠಾಂತರಗಳನ್ನು ಗಮನಿಸಿದಾಗ ಮೊದಲ ಮೂರು ಪಾಠಗಳಲ್ಲಿ ಕೆಲವು ವ್ಯತ್ಯಾಸಗಳು ಕಂಡುಬರುತ್ತವೆ, ಹಲವು ಸಾಮ್ಯಗಳು ಇರುವುದು ಗಮನಾರ್ಹ.

ಅಣ್ಣ ತಂಗಿಯನ್ನು ದೀಪಾವಳಿ ಹಬ್ಬಕ್ಕೆ ಕರೆದುಕೊಂಡು ಹೋಗಲು ಮೂರು ಪಾಠಗಳಲ್ಲಿಯೂ ಒಂದೇ ಆಗಿಕಂಡುಬರುತ್ತದೆ. ನಂತರದ ಘಟನೆಗಳ ನಿರೂಪಣೆ ವ್ಯತ್ಯಾಸಗಳು ಕಾಣಿಸಿಕೊಂಡು ಪಾಠಬೇಧಗಳನ್ನು ಹೆಚ್ಚಿಸಿವೆ, ಅಣ್ಣನ ಕ್ರೂರ ವರ್ತನೆ ಇಲ್ಲಿಯ ಮೊದಲ ಹಾಗೂ ನಾಲ್ಕನೆಯ ಪಾಠಗಳಲ್ಲಿ ದಟ್ಟವಾಗಿ ಕಂಡುಬರುತ್ತವೆ. ಆದರೆ ನಾಲ್ಕು ಪಾಠಗಳಲ್ಲಿ ತಂಗಿಯ ಅಪರಿಮಿತ ಪ್ರೇಮ, ವಾತ್ಸಲ್ಯ ಅಷ್ಟೇ ದಟ್ಟವಾಗಿ ಅಣ್ಣನ ಮೇಲಿರುವುದು ಗಮನಾರ್ಹ. ತನ್ನ ಪ್ರಾಣವನ್ನು, ಶೀಲವನ್ನು ಕಳೆಯಲು ಬಂದ ಅಣ್ಣನನ್ನು ಬದುಕಿಸಿಕೊಳ್ಳುವುದನ್ನು ಇಲ್ಲಿ ಮೊದಲ ಮೂರು ಪಾಠಗಳಲ್ಲಿ ಕಾಣುತ್ತೇವೆ. ಹೆಂಡತಿಯ ಮುಂದೆ ತಂದೆ ತಾಯಿಯ ಮುಂದೆ ಕೊನೆಗೆ ಸಾಕ್ಷಾತ್ ಭಗವಂತನ ಮುಂದೆಯೂ ಅಣ್ಣನ ಮರ್ಯಾದೆಯನ್ನು ಉಳಿಸಲು ತಂಗಿ ಸುಳ್ಳು ಹೇಳುವುದನ್ನು ಗಮನಿಸುತ್ತೇವೆ, ಚೌಡಿಕೆ ಸಂಪ್ರದಾಯದಲ್ಲಿ ಬರುವ ಇಲ್ಲಿಯ ನಾಲ್ಕನೆ ಪಾಠವಾದ ಅಣ್ಣ ತಂಗಿಯ ಮೊದಲ ಮೂರು ಪಾಠಗಳಿಗಿಂತ ಭಿನ್ನ ಕಂಡರೂ ಆ ಮೂರು ಪಾಠಗಳಲ್ಲಿ ಕಂಡುಬರುವ 'ದನಕನಕ' ವಸ್ತುಗಳಿಗೆ ಬದಲಾಗಿ ಇಲ್ಲಿ ಕಾಮ ಪ್ರಧಾನವಾಗಿ ಕಂಡುಬರುತ್ತದೆ. ಮೊದಲ ಮೂರು ಪಾಠಗಳ ಕಥೆಯೂ ಸುಖಾಂತವಾಗಿದ್ದರೆ ಇದು ದುಃಖಾಂತರವಾಗಿರುವುದು ಗಮನಾರ್ಹ. ಇದು ದುರಂತದಲ್ಲಿ ಕೊನೆಗೊಳ್ಳುತ್ತದೆ. ಅಣ್ಣನ ಸ್ವಾರ್ಥ, ಕ್ರೌರ್ಯ, ದೌರ್ಜನ್ಯ ತಂಗಿಯ ನಿರ್ವಿಕಾರ ಪ್ರೇಮ, ವಾತ್ಸಲ್ಯ, ಅಭಿಮಾನ ಇವುಗಳ ನಡುವಣ ಹೋರಾಟದಂತೆ ಕಂಡು ನಿರ್ವಿೀಕಾರ ಪ್ರೇಮ ವಾತ್ಸಲ್ಯಕ್ಕೆ ಜಯ ಎಂಬುದನ್ನು ಇಲ್ಲಿ ಮನಗಾಣುತ್ತೇವೆ, ಹಾಡ್ಗತೆಗಳಲ್ಲಿಯೇ ಬರುವ 'ಸತ್ಯವಂತ ನಾಗಮಣಿ' ಮೊದಲ ಮೂರು ಪಾಠಗಳನ್ನು ಹೆಚ್ಚಾಗಿ ಹೋಲುತ್ತದೆ. ಈ ಹಾಡ್ಗತೆ ಇಂದಿಗೂ ಜನಪ್ರಿಯವಾಗಿ ಎಲ್ಲೆಡೆಯೂ ಹರಡಿಕೊಂಡಿದೆ, ಹಾಗಾಗಿಯೇ ಇದರ ಹಲವಾರು ಪಾಠಂತರಗಳು ದೊರೆಯಲು ಕಾರಣವಾಗುವುದು.

ಇಲ್ಲಿಯ ಎರಡನೆಯ ಹಾಡ್ಗತೆ 'ಬಂಜೆ ಹೊನ್ನಾಮ್ಮ' ಬಂಜೆತನದ ನಿಷ್ಕೃಷ್ಟತೆಯನ್ನು ನಿರೂಪಿಸುವ ಕರುಣಾಜನಕ ಕಥೆ. ತಾಯ್ತನದ ಮಹತ್ವ ಬಂಜೆತನದ ಹೀನತೆ ಇವುಗಳ

೧೪. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೮

ಚಿತ್ರಣ ಕಲಾವಿದನ ಪ್ರತಿಭಾ ಮೂಸೆಯಲ್ಲಿ ಮನಮುಟ್ಟುವಂತೆ ಮೂಡಿಬಂದಿದೆ. ವೃತ್ತಿಗಾಯಕರೂ ಸಾಮಾನ್ಯ ಗಾಯಕರು ಹಾಡುವ ಈ ಹಾಡ್ಗತೆ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿಯೂ ದೊರೆಯುವುದಲ್ಲದೆ ಬೇರೆ ಬೇರೆ ಪಾಠಗಳೂ ದೊರಕುತ್ತವೆ. ಪ್ರಸ್ತುತ ಲೇಖನದಲ್ಲಿ ಆರು ಅಂತಹ ಪಾಠಗಳು ದೊರಕುತ್ತವೆ. ಅದು ಗಮನಾರ್ಹ ರೀತಿಯಲ್ಲಿ ಪಾಠಬೇಧಗಳನ್ನು ಹೊಂದಿರುವುದು ಗಮನೀಯವಾದುದಾಗಿದೆ. ಎಚ್.ಎಲ್.ನಾಗೇಗೌಡರು 'ಪದವವೆ ನಮ್ಮ ಎದೆಯಲ್ಲಿ' ಸಂಕಲನದಲ್ಲಿಯೇ ಇವರ ಮೂರು ಪಾಠಗಳು ದೊರೆಯುತ್ತವೆ. ಮೊದಲನೆಯದು ದೊಂಬಿದಾಸರಿಂದ ಸಂಗ್ರಹಿಸಿದ 'ಬಂಜೆ ಹೊನ್ನಮ್ಮ' ಎರಡನೆಯದು ದೊಂಬಿದಾಸರ ಗಾಯಕಿಯಿಂದ ಸಂಗ್ರಹಿಸಿದ ಬಾಳುಗಂಜಿ ಬಂಜೆ, ಹೊನ್ನಮ್ಮ, ಮೂರನೆಯದು ಸಾಮಾನ್ಯ ಗಾಯಕಿಯಿಂದ ಸಂಗ್ರಹಿಸಿದ ಮಕ್ಕಳಿಲ್ಲದ ಬಂಜೆ ಹೊಕ್ಕುಳ ನಂಜನಗೂಡು, ಇಲ್ಲಿ ಮೊದಲನೆಯ ಪಾಠದ ಕಥೆಯನ್ನು ಸಂಗ್ರಹಿಸಿಕೊಟ್ಟು ಉಳಿದವುಗಳನ್ನು ಅವರೊಂದಿಗೆ ತೌಲನಿಕವಾಗಿ ಪ್ರೊ. ಡಿ.ಕೆ. ರಾಜೇಂದ್ರ ಅವರು ಗಮನಿಸಿದ್ದಾರೆ.

ಏಳು ಜನ ಹೆಣ್ಣು ಮಕ್ಕಳಲ್ಲಿ ಕೊನೆಯವಳು ಹೊನ್ನಮ್ಮ, ಆರುಜನ ಅಕ್ಕಂದಿರೂ, ಮಕ್ಕಳನ್ನು ಪಡೆದು ಗಂಡನ ಮನೆಯಲ್ಲಿ ಸುಖವಾಗಿದ್ದರೆ, ಇವಳದು ತುಂಬ ಸಮಸ್ಯೆಯ ಬದುಕಾಗಿ ಕಂಡುಬರುತ್ತದೆ, ಮಕ್ಕಳಿಲ್ಲದೆ ಇರುವ ಸ್ತ್ರೀಯನ್ನು ಸಮಾಜದ್ಲಲಿ ನೋಡುವ ದೃಷ್ಟಿಕೋನವನ್ನು ಮತ್ತು ಸರ್ವಸಮಾನರಲ್ಲಿ ಅವರಿಗೆ ದೊರೆಯುವ ನೆಲೆಬೆಲೆಯನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಗುರುತಿಸಿದ್ದಾರೆ.

ಅಪೂರ್ವ ಸಂಕಲನ, ಗರತಿಯ ಹಾಡು

ಡಿ.ಕೆ.ರಾಜೇಂದ್ರ ಅವರ ಜಾನಪದ ಸಂಪದ ಎಂಬ ಕೃತಿಯಲ್ಲಿ ಅಪೂರ್ವ ಸಂಕಲನ ಎಂಬ ಗರತಿಯ ಹಾಡು ಎಂಬ ಸಂಕಲನ ಜನಪದ ಸಾಹಿತ್ಯದ ಅದರಲ್ಲಿಯೂ ಜನಪದ ಗೀತೆಗಳ ಸೊಗಸನ್ನು ಸೊಬಗನ್ನು ಸವಿಯಬೇಕಾದರೆ ಹಾಡು ಸಂಕಲನಕ್ಕೆ ಮೊರೆ ಹೋಗಬೇಕಾಗುತ್ತದೆ. ಪ್ರಕಟಣೆಯ ದೃಷ್ಟಿಯಿಂದ ಅದು ಐತಿಹಾಸಿಕ ಮಹತ್ವವನ್ನು ಪಡೆದ ಕೃತಿಯಷ್ಟೇ ಅಲ್ಲ ಕಾವ್ಯ ಮೌಲ್ಯ ಹಾಗೂ ಸ್ವರಸ್ಯದ ದೃಷ್ಟಿಯಿಂದಲೂ ಗಮನ ಸೆಳೆಯುವ ಕೃತಿ. ಒಮ್ಮೆಗೆ ಜನಪದ ಸಾಹಿತ್ಯದ ಉತ್ತಮ ಸಾಹಿತ್ಯ ಭಾಗಗಳನ್ನೆಲ್ಲ ಮೈಗೂಡಿಸಿಕೊಂಡು ಸಂಗ್ರಹಣೆ ಸಂಪಾದನೆ ಹಾಗೂ ಪ್ರಕಟಣೆಯ ದೃಷ್ಟಿಯಿಂದಲೂ ಮಹತ್ವವನ್ನು ಪಡೆದ ಕೃತಿ. ಎಲ್ಲ ಜನರ, ವಿದ್ವಾಂಸರ, ವಿಮರ್ಶಕರ ಮೆಚ್ಚುಗೆಯನ್ನು ಪಡೆದುಕೊಂಡು ಒಂದು ಅದ್ಭುತ ಸಂಕಲನ "ಗರತಿಯ ಹಾಡು". ಈ ಹಾಡಿನ ಮಹತ್ವವನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಶೋಧಿಸಿದ್ದಾರೆ.

ಒಟ್ಟಾರೆ ಜಾನಪದವಿರಲಿ, ಜನಪದ ಸಾಹಿತ್ಯಕ್ಕೆ ಮಹತ್ವವಿಲ್ಲದೆ ಮೂಲೆಗುಂಪಾಗಿದ್ದ ಕಾಲದಲ್ಲಿ ಹಲಸಂಗಿ(ಗೆಳೆಯರು) ಸಹೋದರರು ಈ ಕೃತಿ ಒಂದು ಪವಾಡವನ್ನೇ ಮೆರೆಯಿತೆನ್ನಬಹುದು. 1931 ಈ ಮೊದಲ ಮುದ್ರಣಕಂಡ ಈ ಸಂಕಲನ ಅಸಾಧಾರಣ ಸಂಕಲನವೆಂದು ಪ್ರಶಂಸೆಗೆ ಪಾತ್ರವಾಯಿತು. ಬಿ.ಎಂ.ಶ್ರೀ, ಧಾರಾಬೇಂದ್ರೆ, ಮಾಸ್ತಿ, ಸಿಂಪಿಲಿಂಗಣ್ಣ ಮುಂತಾದವರ ಮಚ್ಚುಗೆಗೆ ಮತ್ತು ವಿಮರ್ಶಕರ ಮೆಚ್ಚುಗೆಗೆ ಇದರ ಮಹತ್ವ ಹಿರಿದಾದುದು". 1936ರಲ್ಲಿಯೇ ಈ ಸಂಕಲನವು ಎರಡನೇಯ ಮುದ್ರಣದ ಬಾಗ್ಯ ಕಂಡಿತು. ಐದು ದಶಕಗಳ ಹಿಂದೆಯೇ ಜನಪದ ಸಾಹಿತ್ಯ ಕೃತಿಯೊಂದಕ್ಕೆ ಈ ಭಾಗ್ಯ ದೊರೆತದ್ದು, ಅವರ ಅಪೂರ್ವತೆಯನ್ನು ಮತ್ತು ಮಹತ್ವದ ಅಧ್ಯಯನದ ದೃಷ್ಟಿಯನ್ನು ಸೂಚಿಸುತ್ತದೆ. ಹೆಣ್ಣು ಸಂಸಾರದ ಸುಖದ ಸಾಧನವಾಗಿ ಅದರ ಕೇಂದ್ರಬಿಂದುವಾಗಿ ನಿಲ್ಲುತ್ತಾಳೆ. ಅವಳ ಸುತ್ತ ಬಾಂಧವ್ಯದ ಬಲೆ ಹೆಣೆದುಕೊಳ್ಳುತ್ತದೆ. ಆ ಕೇಂದ್ರಶಕ್ತಿ ಸುಖದ ನೆಮ್ಮದಿಯ ಸಾಧನಾಗಿ ಇರವವರೆಗೂ ಬಾಂಧವ್ಯದ ಬಲೆ ಭದ್ರವಾಗಿರುತ್ತದೆ. ಇದೂ ಸ್ವಲ್ಪ ಅಲುಗಿದರೂ. ಚೆಲ್ಲಾಪಿಲ್ಲಿಯಾಗತ್ತದೆ.

ಇಡೀ ಸಂಸಾರದ ಸುಖ ಮಣ್ಣುಗೂಡುತ್ತದೆ. "ಹೆಣ್ಣು ಒಲಿದರೆ ನಾರಿ ಮುನಿದರೆ ಮಾರಿ" ಸಂಸಾರವನ್ನು ಜೇನಾಗಿಸುವ ಮತ್ತು ನೇಣಾಗಿಸುವ ಶಕ್ತಿ ಅವಳಲ್ಲಿದೆ. ಗಂಡು ದುಡಿದು ತಂದು ಹಾಕಬಲ್ಲ ಹಣದ ರಾಶಿಯನ್ನೆ ತರಬಲ್ಲ ಆದರೆ ಸುಖಕ್ಕೆ ಕಾರಣವಾಗುವಂತಹವು ಅಂತಹ ಸುಖಕ್ಕೆ ಕಾರಣವಾಗುವಂತವಳು ಹೆಣ್ಣು. ಅವಳು ತ್ಯಾಗಮಯಿ ಪ್ರೇಮಮಯಿಯಾಗಿ ಇಡೀ ಜೀವನವನ್ನು ಪರರ ಸುಖಕ್ಕಾಗಿ ಮುಡಿಪಾಗಿ ಇಡುತ್ತಾಳೆ. ಇದೇ ಕಾರಣಕ್ಕಾಗಿ ಹೆಣ್ಣನ್ನು ಭೂಮಿತಾಯಿ ಗಂಗೆತಾಯಿಗೆ ಹೋಲಿಸಲಾಗಿದೆ. ಹೆಣ್ಣಿನ ಮೇಲೆ ದೂರು ಬರುವುದು ಬಹುಬೇಗ. ಅವಳು ಸಮಾಜದಲ್ಲಿ ಹೇಗೆ ನಡೆದುಕೊಂಡರು ಕಷ್ಟ. ಕತ್ತಿ ಅಲುಗಿನ ಮೇಲೆ ನಡೆದಂತೆ ಅವಳ ಬಾಳು' ಸಂಸಾರದಲ್ಲಿ ಅವಳು ಮೆಚ್ಚಿಸಬೇಕಾದುದು. ಒಲಿಸಿಕೊಳ್ಳಬೇಕಾದುದು. ಒಬ್ಬರನ್ನಲ್ಲ ಇಷ್ಟೆಲ್ಲ ಮಾಡಿದರು ಅವಳನ್ನು ದೂರುವರು. ಇಷ್ಟೆಲ್ಲ ಕಷ್ಟಗಳ ನಡುವೆ ಯಾರು ತನ್ನ ಗೆಲುವನ್ನು ಕಂಡುಕೊಳ್ಳುತ್ತಾಳೋ/ಗಟ್ಟಿತನದ ಯೋಜನರಹಿತ ಒಂದು ನಿಯಮದ ಬದುಕನ್ನು ಕಟ್ಟಿಕೊಳ್ಳುತ್ತಾಳೋ "ಬಿಟ್ಟ ಮನೆ ಮತ್ತು ಸೇರಿದ ಮನೆ ಎರಡಕ್ಕೂ ಕೀರ್ತಿ ತರುತ್ತಾಳೋ ಅವಳೇ ನಿಜವಾದ ಗರತಿ. ಒಂದು ಸ್ತ್ರೀಯ ಧೈರ್ಯ ಸಹನೆ, ಮಮತೆ ಇಂದಿನ ಜಗತ್ತಿಗೆ ಆದರ್ಶವಾಗಿವೆ. ಆದ್ದರಿಂದ ಇವು ಜಗತ್ತಿಗೆ ವಾಸ್ತವವಾಗಿರಬೇಕು ಎಂದು ಪ್ರೊ. ಡಿ.ಕೆ. ರಾಜೇಂದ್ರ ಅವರು ಹೆಣ್ಣಿನ ಮಹತ್ವದ ಬಗ್ಗೆ ವಿವರಿಸಿದ್ದಾರೆ.

ಹೆಣ್ಣಿನ ವಿವಿಧ ಮುಖಗಳನ್ನು ಕಾಣುತ್ತೇವೆ. ಆಕೆಯು ಹೆಣ್ಣಾಗಿ, ಮಗಳಾಗಿ, ಸೊಸೆಯಾಗಿ ಅತ್ತೆಯಾಗಿ ನಿರ್ವಹಿಸಿದ ಪಾತ್ರ ಮಹತ್ವದ್ದು. ಅಂದಿನ ಸಮಾಜ ಅವಳನ್ನು ಬಂದಿಯಾಗಿಸಿತ್ತು. ಸ್ವತಂತ್ರದಿಂದ ಬಂದಿಯಾಗಿದ್ದಳು. ದುಡಿಯುವುದೊಂದೇ ಕಾಯಕವಾಗಿತ್ತು. ಇಷ್ಟಿದ್ದರೂ ಅಂದಿನ ಸಮಾಜದಲ್ಲಿ ಪ್ರೀತಿ ವಾತ್ಸಲ್ಯಗಳು, ಮಮತೆ, ಸಂಬಂಧಗಳಿಗೆ ಬೆಲೆ ಇತ್ತು. ಇಂದು ಕಾಣದಾಗಿದ್ದಕ್ಕಿಂತ ಅಷ್ಟು ಪ್ರಮಾಣದಲ್ಲಿ ಅಷ್ಟಿಲ್ಲ ಎಂಬುದು ಸತ್ಯಸಂಗತಿ. 'ಅಂದಿನಗರತಿ ತನ್ನ ಮೆಚ್ಚಿಕೊಂಡರೆ ಸಾಲದಾಗಿತ್ತು. ಗೌರವ, ವಿನಯ, ವಿನಂಬ್ರತೆಯಲ್ಲಿಯೂ ಜನಮೆಚ್ಚುವಂತಿರಬೇಕಿತ್ತು. ನೆರೆಹೊರೆಯವರೆಗೆ ಅಳುಕಿ ಸಮಾಜ ಹಾಕಿದ ಪ್ರತಿಯೊಂದು ನೀತಿ ನಿಯಮಗಳನ್ನು ಪಾಲಿಸುತ್ತ ಶಕ್ತಿಮೀರಿ ಹೊರಬರಲು ಪ್ರಯತ್ನಿಸುತ್ತಿದ್ದರೂ ಆಗುತ್ತಿರಲಿಲ್ಲ. 'ಗರತಿಯ ಬಾಳಿನ ವಿವಿಧ ಮುಖಗಳನ್ನು ಗರತಿಯ ಹಾಡು ನಮಗೆ ತಿಳಿಸುತ್ತದೆ. ಈ ದೃಷ್ಟಿಯಿಂದ ಈ ಕೃತಿ ಅಮರವಾಗಿದೆ.

ಗರತಿಯ ಹಾಡು, ನಮ್ಮ ಸ್ತ್ರೀ ಜೀವನದ ಒಳಗನ್ನಡಿ' ಅದು ನಮ್ಮ ಹೆಣ್ಣುಮಕ್ಕಳ ಹೃದಯದ ಪಡಿಗನ್ನಡಿ, ಇವರಲ್ಲಿ ಹೆಣ್ಣಿನ ಪ್ರೀತಿ, ತ್ಯಾಗ, ಸಹನೆ, ಮನೋಧರ್ಮ, ದಾನದಗುಣ, ಅತಿಥಿಸತ್ಕರಭಾವಗಳು, ಮನುಷ್ಯ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುತ್ತದೆ. ಗರತಿಯ ಬಾಳಿನ ಪ್ರತಿಬಿಂಬವಾಗಿ ಗರತಿಯ ಹಾಡು ಅಂದು ಕಾಣಿಸಿಕೊಂಡರೆ ಇಂದು ಗರತಿಯ ಹಾಡಿನ ಪ್ರತಿಭೆಯಲ್ಲಿ ಗರತಿಯ ಬಾಳು ಮೂಡಬೇಕಾಗಿದೆ. ಹೆಣ್ಣಿನ ಶೋಷಣೆಯು ಹಂತಹಂತವಾಗಿ ನಡೆದಿರುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ವಿಮರ್ಶಿಸಿದ್ದಾರೆ. ಹೆಣ್ಣುಹುಟ್ಟಿದ ಮನೆಗೆ ಎರವಲಾಗಿ ಹೋಗಬೇಕು ಅದು ನಿಯಮ ಆಲದಮರಕ್ಕೆ ಹೇಗೆ ಹೂವಿಲ್ಲವೋ ಜಾಲಿಯ ಮರದಿಂದ ನೆರಳಿಲ್ಲವೂ ಸಾಲಕ್ಕೆ ಕೊನೆಯೆಂಬುದಿಲ್ಲವೋ ಹಾಗೆಯೇ ಹೆಣ್ಣಿಗೆ ತಾಯಿಯ ಮನೆ ಎಂಬುದು ಸ್ಥಿರವಲ್ಲ. ಅದನ್ನು ಮೀರುವಂತಿಲ್ಲ. ಅವರೂ ಅವಳು ತವರಿನ ಮನೆಯನ್ನು ಎಂದು ಮರೆಯುವಂತಿಲ್ಲ. ಅವಳು ತವರಿನವರನ್ನೆಲ್ಲವನ್ನು ಪ್ರೀತಿ ವಾತ್ಸಲ್ಯದಿಂದ ನೆನೆಯುತ್ತಾಳೆ ತನ್ನ ಹುಟ್ಟೂರಿನ ಪ್ರತಿಯೊಬ್ಬರು ಅಭಿವೃದ್ಧಿಯಾಗಬೇಕೆಂದು ಹಾರೈಸುತ್ತಾ ಹಾಡಿಹೊಗಳುತ್ತಾಳೆ. ತನ್ನ ಅಣ್ಣ ಅತ್ತಿಗೆ ಸಂಬಂಧಿಕರು ಏನೇ ಬಗೆದರು ಅವರು ಎಂದೆಂದಿಗೂ ಸುಖವಾಗಿರಲೆಂದು ಹಾರೈಸುತ್ತಾಳೆ. ಸ್ಥಿತ್ಯಂತರ ಪ್ರಜ್ಞೆಯಲ್ಲಿ ನಿಂತು ಅವಳು ಮಹಾತಾಯಿಯಾಗುತ್ತಾಳೆ. ಈಕೆ ತಾಯಿಯ ಪ್ರೀತಿಗೆ ಸಮನಾದ ವಸ್ತು ಮತ್ತೊಂದಿಲ್ಲ. ಅಷ್ಟರಮಟ್ಟಿಗೆ ತಾಯಿಯ ಪ್ರೀತಿ, ಮಮತೆ, ವಾತ್ಸಲ್ಯ, ತಾಯಿಯಿಂದ ಪ್ರತಿಕ್ರಿಯಿಸುತ್ತಾಳೆ. 'ಸಾವಿರಕೊಳ್ಳಿಗಳು ಒಲೆಯಲ್ಲಿ ಉರಿದರು ಒಂದು ಸಣ್ಣದೀಪವು ಕೊಡುವ ಬೆಳಕನ್ನು ಕೊಡಲಾಗದು ಎಂದು ತಾಯಿಯ

ಮಹತ್ವದ ಬಗ್ಗೆ. ಹಾಡಿ ಹೊಗಳುತ್ತಾಳೆ. ಅಮ್ಮನ ರೂಪವನ್ನು ಮತ್ತು ಸ್ಥಿತಿಯನ್ನು ಹೊಗಳುವುದು. ಹಾಲಿನ ಮಹತ್ವ ತಾಯಿಯ ಮನೆಯ ಸ್ವತಂತ್ರತೆಯನ್ನು ನೆನೆದು ಮನದಲ್ಲಿ ಹರುಷವನ್ನು ತಾಳುವುದು ತೌರಿನ ಮನೆಯಲ್ಲಿ ಬೇರೆ ಬೇರೆ ದೇವರನ್ನು ಕಾಣುವುವರ ಬದಲು ತೌರಿನ ಮನೆಯ ತಾಯವ್ವನನ್ನ ದೇವರ ರೂಪಾದಿಯಲ್ಲಿ ಕಾಣುವಳು. ತಾಯಿದ್ದರೆ ಮಾತ್ರ ತೌರು ಇಲ್ಲವಾದರೆ ನೀರಿಲ್ಲದ ಕೆರೆಗೆ ಕರುಹೋಗಿ ನಿರಾಶೆಗೊಂಡಂತೆ ನಿರಾಶೆಗೊಳ್ಳಬೇಕಾಗುತ್ತದೆ. ಆದ್ದರಿಂದ ಅವಳು ಹೆಚ್ಚಿನ ಪ್ರಾಶಸ್ತ್ಯವೆಲ್ಲ ಮೊದಲು ತಾಯಿಗೆ ಅನಂತರ ಉಳಿದವರಿಗೆ ಪ್ರಾಶಸ್ತ್ಯ ನೀಡುತ್ತಾಳೆ. ಇಲ್ಲಿ ತಾಯಿ ಮಗಳ ಸಂಬಂಧವನ್ನು ಮುರಿದು ಗಂಡನ ಅಧೀನದಲ್ಲಿರುವಂತೆ ಶೋಷಣೆಗೆ ಹೆಣ್ಣು ಒಳಗಾಗುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ನುಡಿದಿದ್ದಾರೆ.

ಸ್ತುತಿಗೀತೆಗಳು ಮತ್ತು ಲಾಲಿಯ ಪದಗಳು

ಜನಪದ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಗಮನಿಸಿದಾಗ ಪ್ರೊ. ಡಿ.ಕೆ.ರಾಜೇಂದ್ರ ಸಂಪಾದಿಸಿದರು. ಸ್ತುತಿಗೀತೆಗಳು ಮತ್ತು ಲಾಲಿಯ ಪದಗಳು ಎಂಬ ಶೀರ್ಷಿಕೆಯು ಅದರ ಸೌಂದರ್ಯ ಸೊಬಗು ಜೊತೆಗೆ ನಮ್ಮ ಜನಪದರ. ಜೀವನಾಡಿ ಮಿಡಿತ ಯಾವ ಬಗೆಯದೆಂದು ವ್ಯಕ್ತವಾಗುತ್ತದೆ. ಜನಪದರು ತಮ್ಮ ಬದುಕಿನ ಒಂದೊಂದು ಹಂತವನ್ನು ಹತ್ತಿರದಿಂದ ಕಂಡವರು, ಶ್ರದ್ಧೆ ಆಸಕ್ತಿಯಿಂದ ಗೌರವಿಸಿದವರು, ಅವರಿಂದಲೇ ಬದುಕನ್ನು ರೂಪಿಸಿಕೊಂಡವರು, ಕಲ್ಲು, ಮಣ್ಣು, ಪ್ರಕೃತಿಯನ್ನು ದೇವರೆಂದು ಕಾಣುವರು, ದೇವನೊಬ್ಬ ನಾಮಹಲವು ಎಂಬ ತತ್ವವನ್ನು ಮನಗಂಡವರು. ಅವರಿಗೆ ಆ ದೇವರು, ಈ ದೇವರು ಎಂಬ ಬೇಧವಿಲ್ಲ ಎಲ್ಲ ದೇವರು ಬೇಕು. ಸ್ತುತಿಗೀತೆಯನ್ನು ಗಮನಿಸುವಾಗ ಈ ಅಂಶ ಕಂಡುಬರುತ್ತದೆ. ಅಂತೆಯೇ ಲಾಲಿಯ ಪದಗಳು ಅಂತರಂಗದ ಭಾವನೆಯಂತಹದ್ದು ಎಂಬುದನ್ನು ತೋರಿಸಿಕೊಡುತ್ತವೆ, ಮಕ್ಕಳು ದೇವರಸಮಾನ, ಮಕ್ಕಳ ಸರ್ವಸ್ವ ಎಂಬ ಭಾವನೆಯ ಇಲ್ಲಿ ಮನಮುಟ್ಟುವಂತಿದೆ. ಆಕರ್ಷಕವಾಗಿ ಚಿತ್ರಿತವಾಗಿದೆ. ಬಾಳಿನಲ್ಲಿ ಉಂಟಾದ ಸಾವು, ನೋವು, ನಲಿವುಗಳನ್ನು ಕಷ್ಟ ನಷ್ಟವನ್ನು ಮಕ್ಕಳ ಮರೆಯಲ್ಲಿ ಮರೆಯುವ ಅವರ ಮನೋಭಾವ ಉತ್ತಮ ಸಾಹಿತ್ಯ ಸೃಷ್ಟಿಗೆ ಕಾರಣವಾಗಿದೆ.

ಸ್ತುತಿಗೀತೆಗಳೆಂದರೆ: ಭಕ್ತಿ, ಭಾವ ವಿವಿಧ ಸ್ಥಳಗಳಲ್ಲಿ ದೇವರನ್ನು ಭಕ್ತಿಯಿಂದ ಪ್ರಾರ್ಥಿಸುವುದಾಗಿದೆ, ಸ್ತುತಿಗೀತೆಗಳು ಈ ಸಂಕಲನದ ಒಂದು ವಿಶಿಷ್ಟ ಭಾಗವಾಗಿದೆ. ಅದರಲ್ಲಿ ಭಕ್ತಿಯ ಪರಾಕಾಷ್ಠೆಯನ್ನು ಕಾಣುವಂತೆಯೇ. ಆ ಭಕ್ತಿ ಭಾವವನ್ನು ಯಾವ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ ಎಂಬುದು ಇಲ್ಲಿ ವ್ಯಕ್ತವಾಗುತ್ತದೆ. ಅವರು ದೇವರನ್ನು

ಯಾವುದೋ ದೂರದ ಶಕ್ತಿಯೆಂದು ಬಾವಿಸಿಲ್ಲ ಬದಲಿಗೆ ದೇವರು ಜನಪದರ ಹತ್ತಿರದ ಬಂಧು, ಕಷ್ಟಕಾಲದಲ್ಲಿ ಆಗುವ ಆತ್ಮೀಯ ಸ್ನೇಹಿತ, ಅವನನ್ನು ಕಂಡರೆ ಅವರಿಗೆ ಭಯವೇನೂ ಇಲ್ಲ, ಆದರೆ ಭಕ್ತಿ ಇದೆ, ಗೌರವವಿದೆ. ಅವನನ್ನು ನಾನಾ ರೀತಿಯಲ್ಲಿ ಸತ್ಕರಿಸಿ ತಣಿಸುವ ಮಹದಾಸೆ ಅವರದು. ಆದ್ದರಿಂದ ಅವನು ಕರೆದಾಗ ಬರಬೇಕು ನೀಡಿದ್ದನ್ನು ಸ್ವೀಕರಿಸಬೇಕು, ಆ ಮೂಲಕ ಅವರ ಮನಸ್ಸಿಗೆ ಮತ್ತು ಚಿತ್ತ ಕಾಂತಿ ದೊರೆಯುತ್ತದೆ ಎಂಬ ದೇವರ ಬಗ್ಗೆ ಜನಸಾಮಾನ್ಯರಲ್ಲಿರುವ ಪರಿಕಲ್ಪನೆಯನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ತಿಳಿಸಿದ್ದಾರೆ.

ಜನಪದರು ವಿದ್ಯೆಯನ್ನು ಬಲ್ಲವರಲ್ಲ, ಅವರೂ ಹಾಡಿನ ಮೂಲಕ ಭಕ್ತಿಯನ್ನು ಕಟ್ಟಿ ಕಾಡಬಲ್ಲರು ಕಲಿಸಿದವರನ್ನು ದೇವರೆಂದು ಭಾವಿಸುವರು, ಬೆಳಿಗ್ಗೆ ಎದ್ದರೆ ಅವರು ನೆನೆಯುವುದು ಭೂಮಿತಾಯಿಯನ್ನು ಅನನ್ಯ ಭಕ್ತಿಯಿಂದ ಮೊದಲು ಭೂಮಿ ತಾಯಿಯನ್ನು ಸ್ಮರಣೆಮಾಡಿ ನಂತರ ಮುಂದಿನ ಕೆಲಸಕ್ಕೆ ಕೈ ಹಾಕುತ್ತಾರೆ, ಆ ನಿಯತ್ತು ಇಲ್ಲಿ ಗಮನಾರ್ಹ ಅವರು ಎಲ್ಲ ದೇವರನ್ನು ಪ್ರಾರ್ಥಿಸುತ್ತಾರೆ, ಕಷ್ಟ ಬಂದಾಗ ದೇವರ ಮೊರೆ ಹೋಗುವುದು, ಅವರ ಭಕ್ತಿಯ ವಿಶಿಷ್ಟ ಸ್ವರೂಪವಾಗಿದೆ, ಅವರ ಮನೋಧರ್ಮ ಭಕ್ತಿಯ ವಿಷಯದಲ್ಲಿ ಅತ್ಯಂತ ವಿಶಾಲವಾದದ್ದು ಎಂಬುದನ್ನು ಗಮನಿಸಬಹುದು.

"ಏಳು ತಲೆ ಎದ್ದು ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೊಳ ಭೂಮಿತಾಯ
ಎದ್ದೊಂದು ಗಳಿಗೆ ನೆನೆವೇನು
ಏಳುತಲೆ ಎದ್ದು ಯಾರ್‍ಯಾರ ನೆನೆಯಲಿ"[೧೫]

ಎನ್ನುವಲ್ಲಿಯೇ ಅವರ ದೇವರುಳ ಪಟ್ಟಿ ಎಷ್ಟು ದೊಡ್ಡದೆಂದು ವ್ಯಕ್ತವಾಗುತ್ತದೆ. ನಂತರ ಎಳ್ಳು ಹೊಲದಲ್ಲಿರುವ ಚಿನವಣ್ಣನನ್ನು ಸ್ಮರಿಸಿ ಮತಿಕೊಡುವಂತೆ ಪ್ರಾರ್ಥಿಸುತ್ತಾರೆ. ಅಷ್ಟೇ ಅಲ್ಲ ಅವನಿಗೆ ಪ್ರಿಯವಾದ ತಿಂಡಿತೀರ್ಥದ ಆಸೆಯನ್ನು ತೋರಿಸಿ ಮತಿಕೊಡುವಂತೆ ಕೇಳುತ್ತಾರೆ.

ಜನಪದರು ಸರಸ್ವತಿಯನ್ನು ಕಂಡು ಭಾವಿಸಿರುವ ರೀತಿಯಂತೂ ಅಪೂರ್ವವಾದದು. ಅವಳನ್ನು ತಾಯಿಯಾಗಿ ಕಂಡಿದ್ದಾರೆ, ಅಕ್ಕನಾಗಿ ಭಾವಿಸಿದ್ದಾರೆ. ಮನೆಯೊಡತಿಯಂತೆ ಮರ್ಯಾದೆ ತೋರಿದ್ದಾರೆ. ಸರಸ್ವತಿಯನ್ನು ಮನೆಗೆ ಭಕ್ತಿಯಿಂದ ಕರೆದು ಆಹ್ವಾನಿಸಿ ಮತ್ತು ಹಾಡುಗಳನ್ನು ಕಲಿಸುವಂತೆ ಬೇಡಿದ್ದಾರೆ. ಹೀಗೆ ಜನಪದರು ಸ್ತುತಿಗೀತೆಗಳ ಮುಖಾಂತರ

೧೫. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ. ಪುಟ. ೧೧೫

ಭಕ್ತಿಯಿಂದ ದೇವರ ಪಾರಮ್ಯಕ್ಕೆ ಹತ್ತಿರವಾಗಿದ್ದಾರೆ ಎಂಬುದನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಗರತಿಯ ಹಾಡು ಸಂಕಲನದಲ್ಲಿ ಬಾಂಧವ್ಯದ ಮಧುರ ಭಾವವನ್ನು ಕಾಣುವಂತೆಯೇ ಕಾವ್ಯ ಪ್ರತಿಭೆಯ ಉತ್ತುಂಗ ಶಿಖರವನ್ನು ಸ್ಪರ್ಶಿಸುವಂತೆಯೇ ಅವರ ಭಕ್ತಿ ಭಾವವನ್ನು ಹಾಗೂ ಲಾಲಿತ್ಯದ ಲಾಲಿಪದಗಳನ್ನೂ ಕಾಣುತ್ತೇವೆ. ಇಲ್ಲೆಲ್ಲ ಆತ್ಮೀಯ ಭಾವ ಸ್ಥಾಯಿಯಾಗಿ ನಿಂತು ಅವರ ಒಂದೊಂದು ನುಡಿಯು ಅವರ ಪ್ರತೀಕವಾಗಿರುವುದನ್ನು ಗುರುತಿಸಬಹುದಾಗಿದೆ. ನಿರಾತಂಕವಾಗಿ ಅವರ ಸ್ತುತಿಗೀತೆಗಳಲ್ಲಿ ಭಕ್ತಿಯ ಭಾವ ವಿವಿಧ ಸ್ತರಗಳಲ್ಲಿ ನಿರಂತರವಾಗಿ ಹರಿದಿರುವುದನ್ನು ಕಂಡರೆ ಅವರ ಜೋಗುಳದ ಹಾಡುಗಳಲ್ಲಿ ತಾಯ್ತನದ ಮಮತೆಯ ಮಾಧುರ್ಯವನ್ನು ವಾತ್ಸಲ್ಯದ ಹಿಗ್ಗುಹೊಳೆಯನ್ನು ಕಾಣುತ್ತೇವೆ.[೧೬]

ಲಾಲಿಯ ಪದಗಳು: ಜನಪದ ಗೀತೆಗಳಲ್ಲಿ ಕಂಡಬರುವ ಮತ್ತೊಂದು ಗಮನಾರ್ಹ ಹಾಗೂ ಫಲವತ್ತಾದ ಭಾಗವಾಗಿ 'ಲಾಲಿ ಪದಗಳು' ಅಥವಾ ಜೋಗುಳ ಹಾಡುಗಳು ಗೋಚರಿಸುತ್ತದೆ. ಮಾತೆಯ (ತಾಯಿಯ) ಮಮತೆಯ ಮಾಧುರ್ಯದ ನುಡಿಗಳನ್ನು ಇಲ್ಲಿ ಕಾಣುತ್ತೇವೆ. **"ಅವಳು ಹೃದಯ ತುಂಬಿ ಭಾವತುಂಬಿ ಜಗವನ್ನೆ ಮರೆತು ತನ್ನ ಇರುವನ್ನು ಕುರಿತು ಹಾಡಿರುವ"** ಆ ಹಾಡುಗಳು, ಸಾಹಿತ್ಯ ಲೋಕಕ್ಕೆ ಒಂದು ಅಪೂರ್ವ ಕೊಡುಗೆ. ಜೋಗುಳವನ್ನು ಹಾಡದಿರುವ ತಾಯಿ ಯಾರು ಆ ಹಾಡನ್ನು ಕೇಳದೆ ಬೆಳೆದಿರುವ ವ್ಯಕ್ತಿ ಯಾರು?

ಎಷ್ಟೇ ದುಃಖದಲ್ಲಿದ್ದರೂ ಅಳುವಿನಲ್ಲಿದ್ದರೂ ತಾಯಿಯ ಧ್ವನಿ ಕೇಳುತ್ತಿದ್ದಂತೆ ಸುಮ್ಮನಾಗುವ ಮಕ್ಕಳು ಇನ್ನೂ ಆ ಮಾತೃ ವಾತ್ಸಲ್ಯ ಮನತುಂಬಿ ಹಾಡಿ ಕರೆದಾಗ ಮೈಮರೆತು ಮೈಯೆಲ್ಲ ಕಿವಿಯಾಗದವರು ಯಾರು? ಅವರಿಗೆ ತಮ್ಮ ಮಗು ಹೇಗೆ ಇರಲಿ ಅದು ಮುಖ್ಯವಲ್ಲ, ತಮ್ಮ ಸ್ಥಿತಿಗತಿ ಹೇಗೆ ಇರಲಿ ಅದು ಮುಖ್ಯ ಅಲ್ಲ, ಬೇರೆಯವರ ಪಾಲಿಗೆ ತೊಳೆದ ಕೆಂಡದಂತೆ ಕಂಡರೂ ಅವರ ಪಾಲಿಗೆ ಮಾತ್ರ ಅದು ಹೊಳೆಯುವ ಸೂರ್ಯನೆ "ಹೆತ್ತವರಿಗೆ ಹೆಗಣಮುದ್ದು ಎಂಬಂತೆ' ಆ ತೊಳೆದ ಕೆಂಡದಲ್ಲಿಯೂ ತಾಯಿಯ ನಿರ್ಮಲ ಮನಸ್ಸು ಸೌಂದರ್ಯವನ್ನು ಗುರುತಿಸಬಲ್ಲದು. "ಬಾಲಕರಿಲ್ಲದ ಬಾಳನ್ನೇ ಅಳೆಯುವ ಆ ಜನ ಅ ಬಾಲಕರಿಂದಲೇ ಬಾಳನ್ನು ಕಂಡವರು, ಬಾಳಿನ ದುಃಖದ ಮುಖವನ್ನು ಸುಲಭವಾಗಿ ಎದುರಿಸಿದವರು ಪ್ರೀತಿ ಪ್ರಮುಖವಾಗಿ ಆತ್ಮ ಆತ್ಮಕ್ಕೆ ಸಂಬಂಧಿಸಿದ್ದೇ ಹೊರತು ಬೇರೆಯವರನ್ನು ಅಲ್ಲ ಆತ್ಮ ಪರಿಶುದ್ಧವಾಗಿದ್ದಾಗ ಅದು ತಾನೇತಾನಾಗಿ ಬೆಳೆದುಕೊಳ್ಳುತ್ತದೆ. ಬೆರೆತುಕೊಳ್ಳುತ್ತದೆ. ಮಕ್ಕಳು ಮೈದುಂಬುವುದು ಮಾತೆಯ ಮೊಲೆ ಹಾಲಿನಿಂದಷ್ಟೇ ಅಲ್ಲ.

೧೬. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೧೫

ಅವಳ ಮಮತೆಯ ಮೃದು ನುಡಿಗಳಿಂದಲೂ ಎಂಬುದನ್ನು ನಾವು ತಿಳಿಯಲೇ ಬೇಕು ಎಂಬುದಾಗಿ ತಾಯಿ ಮಗುವಿನ ಅವಿನಾಭಾವ ಸಂಬಂಧ ಎಂತಹದ್ದು ಎಂಬುದನ್ನು ಇಂದಿನ ಪ್ರಪಂಚಕ್ಕೆ ಪ್ರೊ. ಡಿ.ಕೆ. ರಾಜೇಂದ್ರ ಅವರು ವಿವರಿಸಿದ್ದಾರೆ.

ಲಾಲಿಯ ಹಾಡಿದರ ಲಾಲಿಸಿ ಕೇಳ್ಯಾನ
ತಾಯಿ ಹಂಬಲ ಮರೆತಾನ। ಕಂದಯ್ಯ।
ತೋಳ ಬೇಡ್ಯಾನ ತಲೆಗಿಂಬ।[೧೭]

ಹಾಲ ಹಂಬಲವನ್ನು ತಾಯ ಹಂಬಲವನ್ನೂ ಮರೆತು ಲಾಲಿಯ ಕೇಳುತ್ತಾ ತೋಳನ್ನು ದಿಂಬಾಗಿಸಿಕೊಂಡು ಮಲಗುವಾಸೆ, ಆ ಕಂದನ ಹಸಿವನ್ನು, ಅಳುವನ್ನು ಮರೆತು ಜೋಗುಳಕ್ಕೆ ಕಿವಿಗೊಟ್ಟು ಆಲಿಸುವ ರಸಿಕತೆ ಆ ಕಂದಮ್ಮನದಾಗಿರುತ್ತದೆ. ತಾಯಿಯ ಮೃದು ಧ್ವನಿಗೆ ಏನು ಅರಿಯದ ಕಂದಮ್ಮನು ನಿದ್ರೆ ಹೋಗುತ್ತಾನೆಂದು ಹೇಳುತ್ತಾ ತಾಯಿಯ ಹಾಡಿನ ಮಹತ್ವವನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಪರಿಚಯಿಸಿದ್ದಾರೆ.

ಜೋಗುಳ ಹಾಡಿದರ ಆಗಳೇ ಕೇಳ್ಯಾನ
ಹಾಲ ಹಂಬಲವ ಮರೆತಾನ। ಕಂದೈಗೆ
ಜೋಗೊಳದಾಗ ಅತಿ ಮುದ್ದು।[೧೮]

ಜೋಗುಳ ಬರಿಯ ಹಾಡಲ್ಲ ಅದು ಮಾತೆಯ ಪ್ರೀತಿ ವಾತ್ಸಲ್ಯವನ್ನು ಗರ್ಭೀಕರಿಸಿಕೊಂಡ ಅಮೃತವಾಗಿ ಅದನ್ನು ಸವಿದವರಿಗೆ ಹಸಿವಿಲ್ಲ ಬೇರೆಯವರ ಯೋಚನೆಯಲ್ಲಿ ಮಾತೃ ವಾತ್ಸಲ್ಯವೇ ಮತಾಗಿ ಮೂಡಿ ಬಂದಿದೆ.

ಜೋಗುಳದ ಹಾಡುಗಳಲ್ಲ ಅವಳು ತನ್ನ ಮಗುವನ್ನು ಕಾಣುವ ಬಣ್ಣಿಸುವ ಬಗೆ, ಆಟಪಾಠಗಳನ್ನು ನೋಟ ನಲಿವುಗಳನ್ನು ಕಂಡು ವ್ಯಕ್ತಪಡಿಸುವ ಭಾವ ಎಂತಹವರನ್ನು ಮೈ ಮರೆಸುವಂತಹದು.

"ತೊಟ್ಟಿಲದಾಗೊಂದು ತೊಳೆದ ಮುತ್ತಿನ ಕೆಂಡ
ಹೊಟ್ಟಿ ಮ್ಯಾಲ್ಯಾಗಿ ಮಲಗ್ಯಾನ ಕಂದೈಗ
ಮುತ್ತಿನ ದೃಷ್ಟಿ ತೆಗೆದೇನ
ಅತ್ತರೆ ಅಳಲವ್ವ ಈ ಕೂಸು ನನಗಿರಲಿ
ಕೆಟ್ಟರ ಕೆಡಲಿ ಮನಿಗೆಲಸ। ಕಂದನಂಥ
ಮಕ್ಕಳಿರಲವ್ವ ಮನೆತುಂಬ

೧೭. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೨೩
೧೮. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೨೩

ಆಡಿ ಬಾ ನನಾ ಕಂದಾ ಅಂಗಾಲ ತೊಳೆದೇನಾ
ತೆಂಗಿನ ಕಾಯ ಎಳನೀರ ತಕ್ಕೊಂಡು
ಬಂಗಾರದ ಮೊರೆ ತೊಳೆದೇನು"[೧೯]

ತಾಯಿಯ ಮನಸ್ಸು ಎಂಥದೆಂಬುದನ್ನು ಈ ತ್ರಿಪದಿಗಳು ಪರಿಪೂರ್ಣವಾಗಿ ತಿಳಿಸುತ್ತವೆ, ತಾಯಿ ಮತ್ತು ಮಗುವಿನ ಸಂಬಂಧವನ್ನು ಬಲಗೊಳಿಸುವುದು ಕೂಡಿಸುವುದು ಅಂದ ಚೆಂದವಲ್ಲ ಹೆತ್ತ ತಾಯಿಗೆ ತನ್ನ ಮಗು ಬೇರೆಯವರ ಮಗುವಿಗಿಂತ ಯಾವುದೇ ರೀತಿಯಲ್ಲಿ ಕೀಳೆಂದು ಯಾವುದೇ ಸಂದರ್ಭದಲ್ಲಿ ಅನ್ನಿಸಲಾರದು, ಹೆತ್ತವಳಿಗೆ ಹೆಗ್ಗಣ ಮುದ್ದು ಎಂಬಂತೆ ಅದೇ ಅವಳಿಗೆ ಸರ್ವಸ್ವ ಸೌಂದರ್ಯದ ನಿಧಿ ತನ್ನ ಮಗು ತೊಳೆದ ಮುತ್ತಿನ ಕೆಂಡದಂತಿದ್ದರೂ ತನ್ನ ಕಣ್ಣು ತಾಕಿಯಾದರೂ ಅದಕ್ಕೆ ದೃಷ್ಟಿಯಾದಿತೆಂದು ಮುತ್ತಿನ ದೃಷ್ಟಿಯನ್ನು ತೆಗೆಯಬಯಸುತ್ತಾಳೆ. 'ತಾಯಿಕಣ್ಣೊ ನಾಯಿಕಣ್ಣೊ' ಎಂಬ ಗಾದೆ ಆಕೆಗೆ ತಿಳಿಯದೇ ಇಲ್ಲ ಅಷ್ಟೇ ಅಲ್ಲ ಅದು ಎಷ್ಟೇ ರಗಳೇ ಮಾಡಿದರು ಅದರಿಂದ ಮನೆಯ ಕೆಲಸ ನಿಂತುಹೋದರು ಅಂತಹ ಮಕ್ಕಳೇ ಇರಲಿ ಎಂದು ಆಕೆ ಬಯಸುತ್ತಾಳೆಯೇ ಹೊರತು ಅದರಿಂದ ಬೇಸರಗೊಳ್ಳುವುದಿಲ್ಲ. ಅದು ಚೇಷ್ಟೆ ಮಾಡಿದಷ್ಟು ತುಂಟಾ ಮಾಡಿದಷ್ಟು ಅವಳಿಗೆ ಸಂತೋಷ ಅದನ್ನು ಕಂಡು ಹಿಗ್ಗುತ್ತಾಳೆ. ತಾಯಿ ಮಗುವಿನ ತುಂಟಾ ಮುಗ್ಧತೆಯಿಂದ ತಾಯಿ ತನ್ನ ನೋವನ್ನು ಮರೆಯುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ಗುರುತಿಸಿದ್ದಾರೆ.

ಬದುಕನ್ನು ಹಗುರವಾಗಿಸಿಕೊಳ್ಳುತ್ತಾಳೆ ಸ್ವಲ್ಪವು ಬೇಸರವಿಲ್ಲದೆ ಅವನ ಸೇವೆಮಾಡುತ್ತಾಳೆ, ಅವನಿಗಾಗಿ ಬಳಸುವ ಪ್ರತಿಯೊಂದು ವಸ್ತುವು ಶ್ರೇಷ್ಠವಾಗಿರಬೇಕೆಂದು ಆ ಮಾತೆಯ ಮಹದಾಸೆ ಅದನ್ನು ಬೇರೆಯಾರು ಬಳಸಿರಬಾರದು, ಎಲ್ಲಾ ಸಾಮಾನ್ಯವಾಗಿರಬೇಕು, ಅಪ್ರತಿಮವಾದುದಾಗಿರಬೇಕು, ಆಡಿ ಧೂಳು ಮಾಡಿಕೊಂಡು ಬಂದ ಮಗುವಿನ ಕೈ ಕಾಲುಗಳನ್ನು ತೊಳೆಯುವಲ್ಲಿಯೇ ಅವಳಿಗೇನೋ ಒಂದು ಪರಮ ಸಂತೋಷ, ಅದಕ್ಕೆ ಅವಳು ಬಳಸುವ ನೀರಾದರೂ ಎಂತದ್ದು ತೆಂಗಿನ ಕಾಯಿ ತಿಳಿನೀರು ಅದರಿಂದ ಏನಾಗುತ್ತದೆ ಎಂಬ ಅರಿವು ಅವಳಿಗಿಲ್ಲ, ಅದು ಯಾರು ಮುಟ್ಟದ ಪರಿಶುದ್ಧವಾದ ನೀರಾಗಿರಬೇಕೆಂಬುದಷ್ಟೇ. ತಾಯಿ ಮನಸ್ಸಿನ ಭಾವನೆ, ಮುಖವಾದರೂ ಎಂಥದ್ದು ಬಂಗಾರದ ಮೋರೆ. ತಾಯಿಯ ವಾತ್ಸಲ್ಯದ ಪ್ರೀತಿಯ ಮಮತೆಯೇ ಇಲ್ಲಿ ಹಾಡಾಗಿದೆ. ಅವು ಕೇವಲ ಪದಗಳ ಜೋಡಣೆಯಲ್ಲಿ ಒಂದೊಂದು ನುಡಿಯೂ ಮಾತೃ ವಾತಸಲ್ಯ ತುಂಬಿ ತುಳುಕಿದೆ. ತನ್ನ ಮಗುವನ್ನು ಬಾಲ ಚಕ್ರವರ್ತಿ ಎಂದು ಆಕೆ ಸಂಬೋಧಿಸಿದ್ದಾಳೆ. ಅವಳ

೧೯. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೨೩

ಪಾಲಿಗೆ ಅವನು ಚಕ್ರವರ್ತಿಯೇ ಅವಳ ಹೃದಯ ಸಾಮ್ರಾಜ್ಯದ ಆನಂದಲೋಕದ ಸಾಮ್ರಾಜ್ಯಾಧಿಪತಿ ಆತ ಶ್ರೀಮಂತನಾಗಿ ಚಕ್ರವರ್ತಿಯೆನಿಸಿಕೊಂಡಿರುವುದಷ್ಟೇ ಅಲ್ಲ, ವಿದ್ಯಾಧಿ ದೇವತೆಯಾದ ಸರಸ್ವತಿಯನ್ನೇ ನಾಲಗೆಯುಳ್ಳಂತಹವನು ಅಂತವನನ್ನು ತಾಯಿ ಹಾಲು ಕುಡಿಯಲು ಕರೆಯುತ್ತಾಳೆ. ಹೀಗೆ ತಾಯಿಯು ತನ್ನ ಮಗನ ತುಂಟಾಟ ಮತ್ತು ನೆಗೆದಾಟವನ್ನೆಲ್ಲ ಕಂಡು ಕಲ್ಪನೆಯನ್ನೇ ಮೀರಿ ಕಲ್ಪನಾ ಲೋಕದಲ್ಲಿ ಮುಳುಗುತ್ತಾಳೆ. ಈ ಎಲ್ಲಾ ಹಂತದಲ್ಲೂ ಮಗುವಿನ ಸುಖದ ಬದುಕು ಮತ್ತು ಮಗುವಿನಿಂದ ಸುಖದ ಬಾಳನ್ನು ಸಾಗಿಸುತ್ತಾಳೆ. ತನ್ನ ಬದುಕನ್ನು ಹಸನಾಗಿಸಿಕೊಳ್ಳಲು ಪ್ರಯತ್ನಿಸುತ್ತಾಳೆ ಎಂದು ಒಂದು ಹೆಣ್ಣಿನ ಜೀವನವು ಮಗುವಿನಿಂದಲೇ ಹಸನಾಗುತ್ತದೆ ಎಂಬುದನ್ನು ಲೇಖಕರು ಸೂಚಿಸಿದ್ದಾರೆ.

ಶಿಶುಪ್ರಾಸಗಳು

ಡಿ.ಕೆ.ರಾಜೇಂದ್ರ ಅವರು ಸಂಪಾದಿಸಿರುವ ಶಿಶುಪ್ರಾಸಗಳಲ್ಲಿ ಜನಪದ ಸಾಹಿತ್ಯ ಭಂಡಾರ ಬೃಹತ್ತು ಮಹತ್ವಗಳಿಂದ ಗಮನಾರ್ಹವಾದುದು ಅದರ ಆಳ ವಿಸ್ತಾರವಾದುದು. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಥೆ, ಗೀತೆ, ಲಾವಣಿ, ಒಗಟು, ಗಾದೆಗಳಂತೆಯೇ 'ಶಿಶುಪ್ರಾಸಗಳು ಅವರ ಒಂದು ಪ್ರಮುಖ ಪ್ರಕಾರ. ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಶಿಶುಪ್ರಾಸಗಳಿಗೂ ಒಂದು ವಿಶಿಷ್ಟ ಸ್ಥಾನವಿದೆ. ಶಿಷ್ಟ ಸಾಹಿತ್ಯದಂತೆಯೇ ಜನಪದ ಸಾಹಿತ್ಯದಲ್ಲಿಯೂ ಈ ಪ್ರಕಾರವನ್ನು ಕಾಣುತ್ತೇವೆಯಾದರೂ ಇಲ್ಲಿಯ ರೀತಿಯೇ ಬೇರೆ.

"ಶಿಶುಪ್ರಾಸ ಎಂದಾಕ್ಷಣ ಅವು ಮಕ್ಕಳಿಂದಲೇ ರಚಿತವಾಗಿರಬೇಕು ಎಂದೇನಿಲ್ಲ ಮಕ್ಕಳಿಂದ ರಚಿತವಾದ ಸಾಹಿತ್ಯದ ಜೊತೆಗೆ ದೊಡ್ಡವರು ಮಕ್ಕಳಿಗಾಗಿ ರಚಿಸುವುದನ್ನು ಶಿಶುಪ್ರಾಸ ಎನ್ನುವರು"[೨೦] ಶಿಶುಪ್ರಾಸವನ್ನು ರಚಿಸುವಾಗ ಸಾಕಷ್ಟು ತಾಳ್ಮೆ ಮತ್ತು ಸ್ವಲ್ಪ ಮಟ್ಟಿನ ಕಸರತ್ತು ಮಾಡಬೇಕಾಗುತ್ತದೆ. ಶಿಶುಸಾಹಿತ್ಯದ ಸಾಲಿನಲ್ಲಿ ಒಗಟು ಮತ್ತು ಲಾಲಿಯ ಪದಗಳನ್ನು ಕೆಲವರು ಸೇರಿಸುವುದುಂಟು. ಆದರೆ ಅದು ತಪ್ಪಾಗುತ್ತದೆ. ಒಗಟು ಮಕ್ಕಳಿಗೂ ಪ್ರಿಯಕರವಾದ ಪ್ರಕಾರವೇ ಆದರೂ ಮಕ್ಕಳ ಬೌದ್ಧಿಕ ಶಕ್ತಿಗೆ ಮೀರಿದ್ದು, ಹಾಗೆಯೇ ಲಾಲಿಯ ಪದಗಳು ಮಕ್ಕಳನ್ನು ಕುರಿತ ಗೀತೆಗಳೇ ಹೊರತು ಶಿಶುಪ್ರಾಸಗಳಾಗಲು ಸಾಧ್ಯವಿಲ್ಲ, ಶಿಶುಪ್ರಾಸದ ಭಾವ, ಅರ್ಥ ಮಕ್ಕಳ ವಿಚಾರಶಕ್ತಿಗೆ ನಿಲುಕದ್ದು, ಹಾಗಾಗಿ ಶಿಶುಪ್ರಾಸಗಳು ಮಕ್ಕಳು ತಮ್ಮ ಪ್ರಪಂಚದಲ್ಲಿಯೇ ನಿಂತು ತಮಗಾಗಿ ರಚಿಸಿಕೊಂಡ ವಿಶಿಷ್ಟ ಬಗೆಯ ಸಾಹಿತ್ಯ ಅಲ್ಲಿ ಹಿರಿಯರಿಂದ ರಚಿತವಾದ ವೈವಿಧ್ಯತೆ ಕಂಡುಬಂದಿದ್ದರೂ ಅದರದ್ದೆ ಆದ ಒಂದು ಸೊಗಸು ಅದಕ್ಕಿರುವುದು ಗಮನಾರ್ಹ ಶಿಶುಪ್ರಾಸಗಳಲ್ಲಿ ಮಕ್ಕಳು ತಾವು ಆಟದ

೨೦. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೩೦

ಸಂದರ್ಭದಲ್ಲಿ ರಚಿಸಿಕೊಂಡ ಸಾಹಿತ್ಯವೇ ಅಲ್ಲದೆ ಸ್ವಾತಂತ್ರ್ಯವಾಗಿ ಹಾಡಿಕೊಳ್ಳುವ ಹಾಡುಗಳು ಉಂಟು, ಶಿಶುಪ್ರಾಸಗಳಲ್ಲಿ ಪ್ರಶ್ನೋತ್ತರ ರೂಪದ ಹಾಡುಗಳೇ ಹೇರಳವಾಗಿ ಕಂಡುಬರುತ್ತವೆಯಾದರು ಮಿಕ್ಕ ಬಗೆಗಳು ಗಮನಸೆಳೆಯುತ್ತವೆ. ಮಕ್ಕಳು ಏನೇ ಹಾಡಿದರು ಅಂದರೆ ಪ್ರಾಸರೀತಿಯಲ್ಲಿ ಒಂದಕ್ಕೊಂದು ಪದಕ್ಕೆ ಪದ ಜೋಡಣೆಯಾಗುವಂತೆ ಮತ್ತು ಸರಳ ರೀತಿಯಲ್ಲಿ ಅರ್ಥಸಿಗುವಂತೆ ಕಂಡರೆ ಅದೂ ಕೂಡ ಮಕ್ಕಳ ಪ್ರಾಸವಾಗುತ್ತದೆ, ಮಕ್ಕಳ ಪ್ರಾಸದಲ್ಲಿ ಸಾಮಾನ್ಯವಾಗಿ ಮಕ್ಕಳ ತುಂಟತನದ ಹಾಡುಗಳಿರುತ್ತವೆ, ಮಕ್ಕಳ ಮುಗ್ಧತೆಯ ಹಾಡುಗಳಿರುತ್ತವೆ, ಮಕ್ಕಳ ಮದುವೆ ಹಾಡು, ಜರಿಯಹಾಡು, ಮಗ್ಗಿಯಹಾಡು, ಪ್ರಶ್ನೋತ್ತರ ಹಾಡುಗಳು, ಕಥನ ಗೀತೆಯ ದಾಟಿದ ಹಾಡುಗಳು, ಅರ್ಥವಿಲ್ಲದ ಹಾಡುಗಳೆಂದಲ್ಲ ಗುರುತಿಸಬಹುದು. ಬದುಕು ಒಂದು ರೀತಿ ಅನುಕರಣ ಮೂಲವಾದದ್ದು ಮಕ್ಕಳು ಅದನ್ನು ಆಟದ ರೀತಿಯಲ್ಲಿಯೇ ಅನುಕರಿಸಲು ಆರಂಭಿಸುತ್ತಾರೆ. ಆ ಅನುಕರಣೆಯಲ್ಲಿ ದೊಡ್ಡವರ ಬದುಕಿನ ಕಹಿ ಸಿಹಿಗಳ ಭಾವವನ್ನು ತುಂಬಲು ಪ್ರಯತ್ನಿಸುತ್ತಾರೆ. ಆದರೆ ಅದು ಅವರಿಗೆ ಆಟ, ನಮಗೆ ಹಾಸ್ಯ ನೋಟ, ಹೀಗೆ ಶಿಶುಪ್ರಾಸ ಪದ್ಯಗಳನ್ನು ಮನಗಾಣಬಹುದು. ಮಕ್ಕಳ ಸಾಹಿತ್ಯವು ಸಹ ಜನಪದ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದೆ ಎಂಬುದನ್ನು ಕೃತಿಕಾರರು ಚರ್ಚಿಸಿದ್ದಾರೆ.

"ಶಾಂತಮ್ಮ ಶಾಂತಮ್ಮ
ಚನ್ನಾಗಿದ್ದೀಯ
ಮಂಚದ ಮೇಲ್ಗಡೆ
ಮಗಲಗಿದ್ದೀಯಾ?"[೨೧]

ಇಂತಹ ಶಿಶುಪ್ರಾಸಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಶಿಶುಪ್ರಾಸ ಎಂಬುದು ಒಂದು ನಿರ್ದಿಷ್ಟವಾಗಿ ಮಕ್ಕಳ ಸ್ಥಿತಿ–ಗತಿ ಪರಿಸ್ಥಿತಿಯನ್ನು ಅಂದರೇ ತಾಯಿಯೊಂದಿಗಿನ ಪ್ರೀತಿವಾತ್ಸಲ್ಯ, ತುಂಟಾಟ ಹಠಮಾರಿತನ, ಮಾತಿನ ಶೈಲಿ, ನಗಿಸುವ ಮಾತು, ಅವುಗಳ ಆಹಾರ ಸೇವಿಸುವ ಪದ್ಧತಿ, ಮುದವೆಯ ಹಾಡುಗಳು, ತಾವು ಕೂಡ ತಾಯಿಯಂತೆ ಕೆಲಸಮಾಡಲು ಪ್ರಯತ್ನಿಸುವಂತಹ ಸಂದರ್ಭಗಳು, ಮಾತಿನ ಮೋಡಿಯಿಂದ ತಮಗೆ ದಕ್ಕಬೇಕಾದುದನ್ನು ದಕ್ಕಿಸಿಕೊಳ್ಳಲು ಪ್ರಯತ್ನಿಸುವುದು, ಈ ಎಲ್ಲಾ ಅಂಶಗಳನ್ನು ಮಕ್ಕಳ ನೆನಪಿನಶಕ್ತಿ , ಜಾಣ್ಮೆ, ಬುದ್ಧಿವಂತಿಕೆಯ ಕ್ರಿಯಾಶೀಲತೆ ಮುಂತಾದವುಗಳಲ್ಲಿ ಶಿಶುಪ್ರಾಸಗಳಲ್ಲಿ ಕಂಡುಬರುತ್ತದೆ. ಶಿಶುಪ್ರಾಸ ಎಂದರೆ

---

೨೧. ಪ್ರೊ, ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೩೨

ಸರಳ ರೀತಿಯಲ್ಲಿ ಮಕ್ಕಳಿಗೆ ಅರ್ಥೈಸುವಂತೆ ಸಾಹಿತ್ಯದ ಪ್ರಕಾರ ಬಳಸಿ ಕೇಳಿದರೆ ಮಕ್ಕಳು ಖುಷಿಪಡುವಂತಹ ಹಾಡೇ ಶಿಶುಪ್ರಾಸವಾಗಿದೆ ಎಂದು ಹೇಳಬಹುದು. ಇಡೀ ಮಕ್ಕಳ ಬದುಕಿನ ಚಿತ್ರಣವನ್ನು ಲೇಖಕರು ನೀಡಿದ್ದಾರೆ.

ಮಾನೌಮಿ ಪದಗಳು: ಮಹಾನವಮಿಯ ಸಂದರ್ಭದಲ್ಲಿ ಹಾಡುವ ಪದಗಳನ್ನು ಮಾನೌಮಿ ಪದಗಳು ಎಂದು ಕರೆಯುತ್ತಾರೆ. ಮಾರ್ನಮಿ ಹಾಗೂ ಮನಾಮಿ ಜೌಪದ ಎಂಬ ಹೆಸರುಗಳೇ ಅಲ್ಲದೆ ಹರಕೆಯ ಪದಗಳು ಎಂಬ ಹೆಸರು ಇದಕ್ಕಿದೆ. "ಮಹಾನವಮಿ ಬರುವುದು" "ಆಶ್ವೀಜಶುದ್ಧದಲ್ಲಿ" ನವರಾತ್ರಿ ಅಥವಾ ದಸರಾ ಎಂದು ಕರೆಯುವುದು ಇದನ್ನೇ. ಉತ್ತರಕರ್ನಾಟಕದಲ್ಲಿ ಇದನ್ನು "ಬನ್ನಿ ಹಬ್ಬ ಎಂದು ಕರೆಯುತ್ತಾರೆ" ಇದು ಕನ್ನಡಿಗರ ಬಹುದೊಡ್ಡ ಹಬ್ಬವಾಗಿರುತ್ತದೆ. ನಲಿವು ಗೆಲುವಿನಂತೆ ಅವರ ಆಚರಣೆಗಳು ವಿಜೃಂಭಿಸುತ್ತಿರುತ್ತವೆ.

ಈ ಹಬ್ಬದ ವೈಖರಿ ವೈಶಿಷ್ಟ್ಯ ಬಲು ಮೋಜಿನದು ಅಂದರೆ ಈ ಹಬ್ಬವು ಬೇಸಿಗೆಯ ವೇಳೆಯಲ್ಲಿ ನಡೆಯುತ್ತದೆ. ಅಂದರೆ ರೈತ ತನ್ನ ದುಡಿಮೆಯ ಫಲದ ಒಂದು ಭಾಗವನ್ನು ಮನೆ ತುಂಬಿಕೊಂಡಿರುತ್ತಾನೆ. ನೆಮ್ಮದಿಯ ಬಾಳು ಉತ್ಸಾಹದಲ್ಲಿ ಸಂಭ್ರಮದಲ್ಲಿ ರಂಜಕವಾಗಿ ಈ ಹಬ್ಬವನ್ನು ಆಚರಿಸುತ್ತಾರೆ, ಈ ನವರಾತ್ರಿಯ ದಿನಗಳಲ್ಲಿ ಮಾನವೀಯ ಮೇಳ ಸಿದ್ಧವಾಗುತ್ತದೆ. ಮಾನಮಿ ಪದಗಳನ್ನು ಪ್ರತಿ ಮನೆಯ ಮುಂದೆಯೂ ಹೋಗಿ ಈ ಬಾಲಕರ ತಂಡ ಮಾನವಮಿ ಪದಗಳನ್ನು ಹಾಡಿ ಅವರನ್ನು ಹರಸುತ್ತದೆ. ಈ ಹಬ್ಬದ ಮೂಲದ ಪದ್ಯ ಒಂದು ಇಲ್ಲಿದೆ. ಹಬ್ಬದ ಸಂದರ್ಭ ಮೂಲ ವೈಖರಿಯನ್ನು, ಹಬ್ಬದ ಮಹತ್ವವನ್ನು ಲೇಖಕರು ತಿಳಿಸಿದ್ದಾರೆ.

> "ಅಶ್ವಯುಜ ಶುದ್ಧ ಮಾನವಮಿ ಬರಲೆಂದು
> ಐಶ್ವರ್ಯ ಸಕಲ ಸಂಪದ ಹೆಚ್ಚಲೆಂದು
> ಈಶ್ವರನ ಕೃಪೆ, ನಿಮಗೆ ಸುಖಿಯಾಗಲೆಂದು
> ಶಾಶ್ವತದಿ ಹರಸಿದೆವು ಬಾಲಕರು ಬಂದು"[೨೨]

ನಿಮ್ಮ ಮನೆ ಬೆಳಗಲಿ, ನಿಮಗೆ ಶುಭವಾಗಲಿ, ಸಮೃದ್ಧಿಯಾಗಲಿ, ಹರ್ಷತುಂಬಲಿ, ದೈವಕೃಪೆ ನಿಮಗಿರಲಿ, ಎಂದು ಹಾಡಿ ಹರಸಿ ಅವರು ಸಂತೋಷದಿಂದ ಕೈತುಂಬ ನೀಡುತ್ತಿದ್ದ ಉಡುಗೊರೆಗಳನ್ನು ಸ್ವೀಕರಿಸುತ್ತಿದ್ದರು. ಇಲ್ಲಿ ನಾವೆಲ್ಲ ಒಂದೇ ಎಂಬ ಭಾವನೆ ಬರುತ್ತಿತ್ತು. ಜಾತಿ, ನೀತಗಳ ಬೇಧಗಳು ಇರಲಿಲ್ಲ. ಅವನು ಪಟ್ಟಶ್ರಮಕ್ಕೆ ಪ್ರತಿಫಲವಾಗಿ ಫಸಲು

೨೨. ಪ್ರೊ. ಡಿ.ಕೆ. ರಾಜೇಂದ್ರ ಅವರ ಜಾನಪದ ಸಂಪದ, ಪುಟ. ೧೩೭

ಮನೆಯಲ್ಲಿ ತುಂಬಿತ್ತು, ಆ ಸಂದರ್ಭದಲ್ಲಿ ಉಡುಗೊರೆಯನ್ನು ನೀಡುತ್ತಿದ್ದರು ಹಾಗೂ ಪ್ರಮುಖವಾಗಿ ಈ ಹಬ್ಬದಲ್ಲಿ ಕಂಡುಬರುವ ಅಂಶವೆಂದರೆ "ಮಾನವಮಿಯ ಮೇಳ" ನೋಡಲು ಆಕರ್ಷಕವಾಗಿರುತ್ತಿತ್ತು. ಇಲ್ಲಿ ಓಜಯ್ಯನ ಪಾತ್ರ ಪ್ರಮುಖವಾಗಿರುತ್ತಿತ್ತು. ಓಜಯ್ಯನನ್ನು ಹಳ್ಳಿಯ ರೈತರು ತಮ್ಮ ಮಕ್ಕಳಿಗೆ ಪಾಠಹೇಳಿಕೊಡಲು ನೇಮಿಸಿಕೊಳ್ಳುತ್ತಿದ್ದರು. ಆತನ ಬದುಕು ಸರ್ಕಾರಿ ಸಂಬಳದಿಂದಲ್ಲ, ಹಳ್ಳಿಯ ರೈತರು ಸೇರಿಕೊಡುತ್ತಿದ್ದ ದವಸ ಧಾನ್ಯಗಳಿಂದ, ಜೀವನ ನಡೆಯುತ್ತಿತ್ತು. ಈತನನ್ನು ಹಳ್ಳಿಯ ಜನರು ತುಂಬ ಗೌರವಿಸುತ್ತಿದ್ದರು. ಈತ ಹುಡುಗರಿಗೆ ಪಾಠ ಹೇಳಿಕೊಡುವ ಕೆಲಸವನ್ನಷ್ಟೇ ಮಾಡದೆ ರಾತ್ರಿ ವೇಳೆಯಲ್ಲಿ ಪುರಾಣ, ಪುಣ್ಯಕಥೆಗಳನ್ನು ಅಲ್ಲಿ ಜನಕ್ಕೆ ಓದಿ ಹೇಳುತ್ತಿದ್ದನು.

ನವರಾತ್ರಿ ಹಬ್ಬ ಇನ್ನೆರಡು ತಿಂಗಳಿದೆ ಎನ್ನುವಾಗಲೇ ಈ ಓಜಯ್ಯ "ಮಾನವಮಿಯ ಮೇಳ"ದ ಸಿದ್ಧತೆಯ ಕಾರ್ಯದಲ್ಲಿ ತೊಡಗುತ್ತಿದ್ದ. ಈ ತಂಡದಲ್ಲಿ ತಮ್ಮ ಶಿಷ್ಯರೆ ಇರುತ್ತಿದ್ದರು. ಇವರಿಗೆ ಮಾನವಮಿಯ ಪದಗಳನ್ನು ಪ್ರತಿದಿನ ಹೇಳಿಕೊಡಲಾಗುತ್ತಿತ್ತು. ಹೀಗೆರ "ಮಾನವಮಿಯ ಪದಗಳನ್ನು ಕಲಿತ ಮಕ್ಕಳ ಒಂದು ಮೇಳ ಸಿದ್ಧವಾಗುತ್ತಿತ್ತು. ಇದೇ ಮಾನವಮಿಯ ಮೇಳ ಎನ್ನುತ್ತಿದ್ದರು." ಇದೊಂದು ಮಾನವಮಿಯ ಹಬ್ಬದ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಕೊಡುತ್ತಿದ್ದ ಮನರಂಜನೆಯಾಗಿರುತ್ತಿತ್ತು. ಈ ಮೇಳದಲ್ಲಿ ಭಾಗವಹಿಸುವವರು ತಲೆಗೆ ಮಕಮಲ್ ಇರುತ್ತಿತ್ತು. ಬಿಳಿಟೋಪಿ, ಬಿಳಿಅಂಗಿ, ಕೋಟು ಅದರ ಮೇಲೆ ಶಲ್ಯ ಇರುತ್ತಿತ್ತು. ಅಂದರೆ ಹಳ್ಳಿಯಲ್ಲಿ ಮನರಂಜನೆ ವೇಳೆಯಲ್ಲಿ ದೇಶಿಯತೆಯ ಉಳಿವಿಕೆಗಾಗಿಯೇ ಮತ್ತು ಸಂಸ್ಕೃತಿಯ ಬೆಳವಣಿಗೆಗಾಗಿಯು ಎಚ್ಚರವಿರುತ್ತಿತ್ತು ಎಂದು ಪ್ರಮುಖವಾಗಿ ಕಂಡುಬರುತ್ತದೆ. ಈ ಮೇಳದ ನಾಯಕತ್ವ ಓಜಯ್ಯನದೇ. ಗುರುವನ್ನೇ ಅನುಸರಿಸಿದ ಬಾಲಕರ ತಂಡ ಮನೆಯ ಬಾಗಿಲ ಮುಂದೆ ನಿಂತು ಬಗೆಬಗೆಯ ಹಾಡುಗಳನ್ನು ಜಾತಿಮತ ಬೇಧವಿಲ್ಲದೆ, ಆಯಾ ಜಾತಿಯವರ ಮನೆಮುಂದೆ ಆಯಾ ಜಾತಿಯವರಿಗೆ ಪ್ರಿಯವಾದ ದೇವರನ್ನು ಕುರಿತು ಹಾಡುತ್ತಿದ್ದರು. ಇಲ್ಲಿ 'ಹರಕೆಯ ಹಾಡುಗಳು' ಒಂದು ವರ್ಗವಾಗಿ ನಿಂತರೆ, ಆಯಾ ಮತದವರ ವೃತ್ತಿಯನ್ನು ಕುರಿತ ಪದಗಳು ಮತ್ತೊಂದು ವರ್ಗವಾಗಿ ನಿಲ್ಲುತ್ತವೆ. ಹೀಗಾಗಿ ಇವುಗಳನ್ನು ಹಲಗೆ ತೊಳೆಯುವ ಪದಗಳು, ಗೌಡರ ಪದ, ಬನ್ನಿ ಮಹಾಂಕಾಳಿಪದ, ಬ್ರಾಹ್ಮಣರಪದ, ಗೊಲ್ಲರಪದಗಳು, ಕುಂಬಾರರ ಪದ, ಗಂಗಾದೇವಿಪದ, ಬಸವಣ್ಣನವರ ಪದ ಮುಂತಾಗಿ ವರ್ಗೀಕರಿಸಿ ಹೇಳುತ್ತಿದ್ದರು. ವಗೀಕರಿಸಿ ಎಂದರೆ ಆಯಾ ವರ್ಗದ ಜನರಿಗೆ ತಕ್ಕಂತೆ ಅವರ ಕುಲದೇವರನ್ನು ಹೊಗಳಿ ಹಾಡುತ್ತಿದ್ದರು. ಜನರಿಗೆ ಹರಕೆಯಲ್ಲಿ ಗಾಢವಾದ ನಂಬಿಕೆ ಇತ್ತು. ಆದಕ್ಕಾಗಿಯೇ ಬಾಲಕರು, ತಾವು ಹರಕೆ

ಹೊತ್ತ ದೇವರನ್ನು ಕುರಿತು ಹಾಡುತ್ತಿದ್ದರೆ ತುಂಬ ಭಕ್ತಿಯಿಂದ ಆಲಿಸಿ ಕೇಳುತ್ತಿದ್ದರು. ಹಲಗೆ ತೊಳೆಯುವ ಪದಗಳು, 'ಹಲಗೆ ಎಂದರೆ ಸ್ಲೇಟು' ಅದನ್ನು ತೊಳೆದಿಟ್ಟು ಭಕ್ತಿಯಿಂದ ಪೂಜಿಸಿ, ಶಾರದದೇವಿಯನ್ನು ವಿದ್ಯೆ ಕರುಣಿಸುವಂತೆ ಬೇಡುತ್ತಾರೆ" ಎಲ್ಲ ಸಂತಸದ ಸಂಭ್ರಮಗಳಿಗೆ ಕಾರಣಳಾದ ದೇಶದ ನಲಿವಿಗೆ ಗೆಲುವಿಗತೆ ಪ್ರೇರಕಳಾದ ಗಂಗಾದೇವಿಯನ್ನು ಭಕ್ತಿಯಿಂದ ಸ್ಮರಿಸುತ್ತಾರೆ, ಮಳೆ ಬೆಳೆಗೆ ಕಾರಣಳಾಗಿ ಸಮೃದ್ಧಿಯನ್ನು ತಂದು ಸೌಭಾಗ್ಯವನ್ನುಂಟು ಮಾಡುವ ಗಂಗಾದೇವಿ ಅವರ ಹತ್ತಿರದ ದೇವತೆಗೆ ರೈತ ಬಂದು ಪೂಜಿಸುತ್ತಾನೆ. ಇವೆಲ್ಲ ಮುಗಿದ ಮೇಲೆ ಅವರ ಮುಂದಿನ ದೃಷ್ಟಿ ಊರಿನ ಗೌಡರ ಮನೆ, ಪ್ರಭುಕುಲೋತ್ತಮ ಎಂದೆ ಅವನನ್ನು ಕರೆಯುತ್ತಾರೆ. ನವರಾತ್ರಿಯ ಸಂದರ್ಭದಲ್ಲಿ ಎಲ್ಲಾ ಸಮುದಾಯಗಳು ಒಂದಾಗಿ ಲಿಂಗಭೇದ ತಾರತಮ್ಯವಿಲ್ಲದೆ ಹಬ್ಬ ಆಚರಣೆಯನ್ನು ತಿಳಿಸುತ್ತದೆ ಮತ್ತು ಇವೆರಡು ಪೂರಕ ಸಂಬಂಧವನ್ನು ಹೊಂದಿರುವುದನ್ನು ಪ್ರೊ. ಡಿ.ಕೆ.ರಾಜೇಂದ್ರ ಅವರು ಮನದಟ್ಟು ಮಾಡಿದ್ದಾರೆ.

ಊರಿನ ಯಜಮಾನನಾದ ಅವನು ರೈತರ ಜೀವನದಲ್ಲಿ ವಹಿಸುವ ಪಾತ್ರವೆಂಥದ್ದು, ಊರಿನ ಜನರನ್ನೂ ಸಂಘಟಿಸುವ ರೀತಿಯನ್ನು ಕುರಿತು ಹಾಡುತ್ತಾನೆ ಇದರಂತೆಯೇ ಹಲವು, ಹಲವು ಮತಗಳನ್ನು ಕುರಿತು ಈ ಬಗೆಬಗೆಯ ವ್ಯಕ್ತಿಯನ್ನು ಕುರಿತು ಹಾಡುವ ಹಾಡು ವೈಶಿಷ್ಟ್ಯವಾಗಿದೆ. ಗೊಲ್ಲರಪದ ಮತ್ತು ಕುಂಬಾರರ ಪದ, ಅವರ ವೃತ್ತಿ ವೈಶಿಷ್ಟ್ಯವನ್ನು ಸಾರುವಂತಹದ್ದು, ಅವುಗಳು ಸುಲಭ ರಚನೆಗಳಾದರೂ ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿವೆ. ಒಂದೊಂದು ವೃತ್ತಿ ಹಿರಿಮೆಯನ್ನು ಒತ್ತಿ ಹೇಳುವ ಮಹತ್ವದ ರಚನೆಗಳಾಗಿವೆ. ಅಲ್ಲದೆ ಊರಿನ ಎಲ್ಲ ಜನರನ್ನು ಮೆಚ್ಚಿಸುವ ಸಂತೋಷಗೊಳಿಸಿ ಉಡುಗೊರೆಯನ್ನು ಸ್ವೀಕರಿಸುವ ಸಾಧನವೂ ಅವರಿಗಿದೆ. ಚೌಪದಿಯಲ್ಲಿ ದಳವಾಯಿ ಮೊದಲ್ಗೊಂಡು ಗೌಡನವರೆಗೆ ಬರುವ ಪ್ರತಿಯೊಂದು ವೃತ್ತಿಯಲ್ಲಿಯೂ ಒಂದೊಂದು ವೈಶಿಷ್ಟ್ಯವಿದೆ. ವೀರ ರಾಜಯ್ಯನ ಶೌರ್ಯ ದೇವರಾಜಯ್ಯನ ಕಾರ್ಯದಕ್ಷತೆ, ಕರಣಿಕನ ಲೆಕ್ಕಪತ್ರಗಳನ್ನು ಬರೆಯುವ ಕೈಚಳಕ ಮಣಿಯಗಾರನಿಗೆ ಸುಂಕವನ್ನು ವಸೂಲ್ಮಾಡುವ, ಚಿನುಮಯ್ಯನ ಅದ್ಭುತನಾಣ್ಯ, ಶಾಸ್ತ್ರದ ಅರಿವು, ಶೆಟ್ಟಿಯ ಧರ್ಮನಿಷ್ಠೆ, ಅಕ್ಕಸಾಲಿಗನ ಕೌಶಲ, ಗೌಡನಿಗೆ ವ್ಯವಸಾಯದಲ್ಲಿರುವ ಆಸಕ್ತಿ, ಈ ಹಬ್ಬದ ಹಾಡುಗಳು, ಒಂದೊಂದು ಮತಧರ್ಮದ, ಒಗ್ಗೂಡುವಿಕೆ, ಜಾತಿಬೇಧವಿಲ್ಲದ ಮುಗ್ಧತೆ ವೇಷಭೂಷಣಗಳು ಎಲ್ಲ ಬಗೆಯ ಮಿಲನಗಳು ಮತ್ತು ಸಂಸ್ಕೃತಿ ಮತ್ತು ದೇಶಿಯ ಆಚರಣೆ ಪದ್ಧತಿಗಳು ಆ ಹಳ್ಳಿಯ ಆಚರಣೆ ಮತ್ತು ಸಂಪ್ರದಾಯದ ಉಳಿವಿಗೆ ಪೂರಕವಾಗಿ

ಕಂಡುಬರುತ್ತದೆ. ನಾವೆಲ್ಲರೂ ಒಂದೇ ಎಂಬ ಸಮಾನ ಮನೋಭಾವನೆಯನ್ನು ಲೇಖಕರು ಹುಟ್ಟುಹಾಕಿದ್ದಾರೆ.

೧.೪. ಚಿಂತನ ಚಿತ್ತಾರ:

ಆದರ್ಶ ಸ್ವಾಮಿ ವಿವೇಕಾನಂದರ ಬದ್ಧತೆ: ಪ್ರೊ.ಡಿ.ಕೆ.ರಾಜೇಂದ್ರರವರು ಸಂಪಾದಿಸಿರುವ ಚಿಂತನ ಚಿತ್ತಾರ. ಆದರ್ಶದ ಬಗೆಗೆ ವಿವೇಕರ ಮಾತುಗಳನ್ನು ಪ್ರೊ.ಡಿ.ಕೆ.ರಾಜೇಂದ್ರರವರು ಜೀವನದಲ್ಲಿ ಉನ್ನತ ಆದರ್ಶವನ್ನು ಸ್ವೀಕರಿಸಿ ಅದಕ್ಕಾಗಿ ಇಡೀ ಜೀವನವನ್ನೇ ಬಲಿಕೊಡುವುದು "ಪರಮ ಶ್ರೇಷ್ಠ ಅಂದರೆ ಆದರ್ಶಕ್ಕೋಸ್ಕರ ಜೀವ ಬಲಿಯಾದರೂ ಅದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಂದು ಜೀವಿಗೂ ತನ್ನದೇ ಆದ ಆದರ್ಶಗುಣಗಳಿರುತ್ತವೆ. ಅದರಲ್ಲಿ ಮನುಷ್ಯನು ತನ್ನ ಬದುಕನ್ನು ಸಾರ್ಥಕಪಡಿಸಿಕೊಳ್ಳಲು ಆದರ್ಶದ ಮಾರ್ಗವಾಗಿಯೇ ನಡೆಯಬೇಕಾಗುತ್ತದೆ.."[೨೨] ಅದಕ್ಕಾಗಿ ತ್ಯಾಗ, ನಿಷ್ಠೆ, ಶ್ರದ್ಧೆ, ಸಂಕಲ್ಪ ಆತ್ಮವಿಶ್ವಾಸ, ಸ್ವಚಾರಿತ್ರ್ಯ ಎಲ್ಲವೂ ಬೇಕಾಗುತ್ತವೆ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಆದರ್ಶವೆಂಬ ದಾರಿಯನ್ನು ಬಿಟ್ಟು ಬದುಕಲಾರದ ವಸ್ತುಸ್ಥಿತಿ. ಸ್ಥಿತಿ ಆಧಾರದ ಮೇಲೆ ಪ್ರತಿಯೊಂದು ವೃತತಿ ಧರ್ಮದ ಆಧಾರದ ಮೇಲೆ ಬದ್ಧತೆ ಅನಿವಾರ್ಯವಾಗುತ್ತದೆ. ಇಂತಹ ಆದರ್ಶಗುಣಗಳು ಮನುಷ್ಯನನ್ನು ಉನ್ನತ ಸ್ಥಿತಿಗೆ ಕರೆದುಕೊಂಡು ಹೋಗುತ್ತದೆ ಎಂಬುದಾಗಿ ಪ್ರೊ. ಡಿ.ಕೆ.ರಾಜೇಂದ್ರರವರು ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ವಿಶ್ಲೇಷಿಸಿದ್ದಾರೆ.

ವಿವೇಕಾನಂದರು ಹೇಳಿರುವ ಹಾಗೆ ನಿಶ್ಚಿತ ಗುರಿ ತಲುಪಬೇಕಾದರೆ ಹಲವು ಅಡೆ-ತಡೆಗಳು ಬರುವುದು ಸಹಜ. ಅಡೆತಡೆಗಳನ್ನು ಮೀರಿ ಮುಂದಿನ ದಾರಿಯನ್ನು ಕಂಡುಕೊಳ್ಳಬೇಕಾಗುತ್ತದೆ. ಕೆಲವು ವ್ಯಕ್ತಿಗಳು ತಾವೊಬ್ಬರೆ ಗುರಿಮುಟ್ಟಲು ಪ್ರಯತ್ನಿಸುವುದಿಲ್ಲ. ಪರರನ್ನು ಸಹ ಈ ಮಾರ್ಗದಲ್ಲಿ ಕೊಂಡೊಯ್ಯುತ್ತಾರೆ ಅಂತಹ ವ್ಯಕ್ತಿ ತನ್ನ ಗುಣಗಳಿಂದಲೇ ಬೇರೆಯವರಿಗೆ ಒಳಿತನ್ನು ಮಾಡುತ್ತಾನೆ. ಹಾಗಾಗಿ ಇಲ್ಲಿ ಮುಖ್ಯವಾಗಿ ಮಾರ್ಗದರ್ಶನ ನೀಡುವ ವ್ಯಕ್ತಿ ಮಾರ್ಗದರ್ಶನ ಪಡೆದುಕೊಳ್ಳುವ ವ್ಯಕ್ತಿ ಇಬ್ಬರು ಆದರ್ಶಗುಣಕ್ಕೆ ಬದ್ಧರಾಗಿರುತ್ತಾರೆ. ಇಂತಹ ವಿಚಾರಗಳೇ ಸ್ವಾಮಿವಿವೇಕಾನಂದರ ಆದರ್ಶದ ಪ್ರತೀಕ "ಏಳಿ ಎದ್ದೇಳಿ ಈ ದಿವ್ಯ ಮಂತ್ರವೇ" ಮನುಷ್ಯನ ಏಳಿಗೆಗೆ ನಾಂದಿಯಾಗುತ್ತದೆ. ಈ ಜೀವನದ ಹಾದಿಯಲ್ಲಿ ತಪ್ಪುಗಳನ್ನು ಮಾಡದ ವ್ಯಕ್ತಿಗಳೇ ಇಲ್ಲ ಅದು ದೇವರಿಗೂ ಸಲ್ಲುತ್ತದೆ. ಯಾವುದೇ ಒಬ್ಬ ವ್ಯಕ್ತಿ ಬೇಕಂತಲೇ ತಪ್ಪನ್ನು ಎಸಗುವುದಿಲ್ಲ.

---

೨೨. ಪ್ರೊ. ಡಿ.ಕೆ. ರಾಜೇಂದ್ರ ಅವರ ಚಿಂತನ ಚಿತ್ತಾರ, ಪುಟ. ೧೬೭-೧೭೦

ಇಂದಿನ ತಪ್ಪು ದಾರಿಯೇ ಮುಂದಿನ ರಹದಾರಿಯೇ ಆಗಬಹುದು. ಹಾಗಾಗಿ ಆದರ್ಶವಿಲ್ಲದ ಜೀವನವನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ವಿವೇಕಾನಂದರು ಜೀವನವನ್ನೇ ರಣರಂಗಕ್ಕೆ ಹೋಲಿಕೆ ಮಾಡಿ ಈ ರಣರಂಗದಲ್ಲಿ ಕೋಮಲ ಮನದವರು ದೂರಸರಿಯಲಿ ಎಂದು ತಾಕೀತು ಮಾಡಿದ್ದಾರೆ. ಅದಕ್ಕಾಗಿ ಪುರುಷ ಸಿಂಹರನ್ನು (ಯುವಕರು) ಸೃಷ್ಟಿ ಮಾಡುವಂತ ಕಾರ್ಯ ಈ ಆದರ್ಶ ಪಾಲನೆಗೆ ಇದೆ ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕೆ ಇಡಬಾರದೆಂಬುದು ವಿವೇಕಾನಂದರ ಆದರ್ಶಗಳನ್ನು ಈ ಲೇಖನದಲ್ಲಿ ಪ್ರೊ. ಡಿ.ಕೆ. ರಾಜೇಂದ್ರರವರು ಪ್ರತಿಪಾದಿಸಿದ್ದಾರೆ.

ವಿದ್ಯಾರ್ಥಿ ಜೀವನದ ದೆಸೆಯಿಂದ ಏಕಾಗ್ರತೆ, ಆತ್ಮವಿಶ್ವಾಸ, ಚಾರಿತ್ರ್ಯ ಈ ಮೂರನ್ನು ಅಳವಡಿಸಿಕೊಳ್ಳದ ವಿದ್ಯಾರ್ಥಿ ಜೀವನ ಸಫಲತೆಯನ್ನು ಕಾಣುವುದಿಲ್ಲ. ಶಿಕ್ಷಣ ಎಂಬುದು ವಿದ್ಯಾರ್ಥಿಗಳಿಗೆ ಭಯಪಡಿಸುವ ವಿಧಾನವಲ್ಲ, ಬದಲಾಗಿ ಆತನ ಜೀವನ ನಿರ್ವಹಣೆಗೆ ಮಾರ್ಗದಾಯಕವಾಗಿರಬೇಕು. ಶಿಕ್ಷಣ ಮತ್ತು ಜೀವನ ನಿರ್ವಹಣೆಗೆ ಏಕಾಗ್ರತೆ ಪ್ರಮುಖವಾದದ್ದು. ಸ್ವಾಮಿವಿವೇಕಾನಂದರ ಜೀವನದಲ್ಲಿ ನಡೆದ ಘಟನೆಯೇ ಇಲ್ಲಿ ನೆನಪಿಸಿಕೊಳ್ಳಬೇಕಾಗುತ್ತವೆ. 'ಥಾಯ್ಸನ್' ಎನ್ನುವವರ ಮನೆಯಲ್ಲಿ ಏಕಾಗ್ರತೆಯಿಂದ ಪುಸ್ತಕವನ್ನು ಓದುತ್ತಿದ್ದ ವಿವೇಕಾನಂದರೇ ಥಾಯ್ಸನ್‌ಗೇ ಹೇಳುವ ಮಾತು. ನಾನು ಓದುವಾಗ ಕೆಂಡವನ್ನು ನನ್ನ ಮೇಲೆ ಇಟ್ಟು ಗೊತ್ತಾಗುವುದಿಲ್ಲ ಎಂಬ ವಿಚಾರಗಳನ್ನು ಪ್ರತಿಪಾದಿಸುತ್ತಾ ಪ್ರೊ.ಡಿ.ಕೆ.ರಾಜೇಂದ್ರ ಅವರ ಬದುಕಿನಲ್ಲಿ ಏಕಾಗ್ರತೆಯ ಮಹತ್ವವನ್ನು ಎತ್ತಿಹಿಡಿದಿದ್ದಾರೆ.[೨೪]

ಮನುಷ್ಯನ ಪ್ರತಿಯೊಂದು ಕಾರ್ಯಗಳಿಗೆ ಏಕಾಗ್ರತೆ ಎಷ್ಟು ಮುಖ್ಯವೋ ಶ್ರದ್ಧೆಯು ಸಹ ಅಷ್ಟೇ ಮುಖ್ಯವಾಗಿರುತ್ತದೆ. ಶ್ರದ್ಧೆ ಇಲ್ಲದೆ ಯಾವ ಕಾರ್ಯವೂ ಅಸಾಧ್ಯ. ಗುರುವಿನ ಮೇಲೆ ಶ್ರದ್ಧೆ ಇಲ್ಲದೆ ಹೋದರೆ ಯಾವ ಶಿಕ್ಷಣವನ್ನು ಪಡೆಯಲು ಸಾಧ್ಯವಿಲ್ಲ ಎಂಬುದಾಗಿ ಪ್ರೊ. ಡಿ.ಕೆ.ರಾಜೇಂದ್ರ ಹೇಳಿದ್ದಾರೆ. ವಿವೇಕಾನಂದರ ಮತ್ತೊಂದು ಗುಣ ಸಚ್ಚಾರಿತ್ರ್ಯ ಪ್ರೀತಿ, ಪ್ರೇಮ ನಿಸ್ವಾರ್ಥ ಗುಣ ಒಳಿತನ್ನು ಮಾಡುವ ಬಗ್ಗೆ ಅಂತಹ ಕಾರ್ಯವೂ ನಿಸ್ವಾರ್ಥವಾಗಿರಬೇಕು ಅದು ಸ್ವಾರ್ಥವೆಂದರೇ ಮನುಷ್ಯ ಪ್ರಕಾರಗಳಿಗೆ ಸಮಾನನಾಗುತ್ತಾನೆ. ಅದಕ್ಕಾಗಿಯೇ ಸಚ್ಚಾರಿತ್ರ್ಯ ಮನುಷ್ಯನ ಆದರ್ಶ ಗುಣಗಳಿಗೆ ಮುಖ್ಯವಾದುದ್ದಾಗಿದೆ. ಆದರ್ಶಗುಣ ಕೇವಲ ವೈಯಕ್ತಿಕ ವಿಚಾರದಲ್ಲಿ ಅದು ದೇಶ, ಭಾಷೆ, ನಾಡು, ನುಡಿ ಇವುಗಳಿಗೂ ಅನ್ವಯವಾಗುತ್ತದೆ. ನಮ್ಮ ತ್ಯಾಗ ಬಲಿದಾನದ ದೇಶಕ್ಕಾಗಿ ಆದರ್ಶಗುಣಗಳು

೨೪. ಪ್ರೊ. ಡಿ.ಕೆ. ರಾಜೇಂದ್ರ ಅವರ ಚಿಂತನ ಚಿತ್ತಾರ, ಪುಟ. ೨೧೫

ನಮ್ಮ ನಮ್ಮ ಜೀವನದ ಸಾರ್ಥಕತೆಯನ್ನು ಹೆಚ್ಚಿಸುತ್ತವೆ. ಆದರ್ಶವಿಲ್ಲದ ಗುಣವನ್ನು ಸ್ವಾಮಿವಿವೇಕಾನಂದರು ರಾಷ್ಟ್ರೀಯ ಪಾಪ ಎಂದಿದ್ದಾರೆ.

ಇಂದಿನ ಆದರ್ಶ ಸಮಾಜದಲ್ಲಿ ದೀನದಲಿತರ ಬಡವರ ಹಾಗೂ ನೊಂದ ಜನರ ಕಷ್ಟಗಳೇ ಕಂಡುಬರುತ್ತದೆ. ಇಂದಿನ ರಾಜಕಾರಣಿಗಳು ಸೇವಾ ಮನೋಭವದ ಕೊರತೆಯೇ ಎದ್ದು ಕಾಣುತ್ತದೆ. ಅಲ್ಲದೇ ವಿವೇಕಾನಂದರು ಅಧ್ಯಾತ್ಮದ ಪುನರುದ್ದಾರವನ್ನೇ ಸಾರಿದ್ದಾರೆ. "ಅಧ್ಯಾತ್ಮಿಕರಾಗದೇ ಭಾರತದ ಪುನರುದ್ಧಾರ ಅಸಾಧ್ಯ ಎಂಬುದು ಸ್ವಾಮೀಜಿಯವರ ಆದರ್ಶವಾಣಿ. ವಿಧವೆಯ ಕಣ್ಣೀರನ್ನು ನಿವಾರಿಸಲು ಅಥವಾ ಅನಾಥನ ಬಾಯಿಗೆ ಒಂದು ತುತ್ತು ಅನ್ನವನ್ನು ನೀಡಲು ಸಮರ್ಥವಾಗದ ಧರ್ಮದಲ್ಲಾಗಲಿ ದೈವದಲ್ಲಾಗಲಿ ನನಗೆ ನಂಬಿಕೆ ಇಲ್ಲ"[೨೫] ಈ ಮಾತನ್ನು ಒಪ್ಪಲೇಬೇಕು ದರ್ಮ ಜನರಿಗೆ ಒಳಿತನ್ನು ಮಾಡಬೇಕು ಧರ್ಮ ಇರುವುದೇ ಜನರ ಉದ್ಧಾರಕ್ಕಾಗಿ ಅದು ಜನರ ನಾಶಕ್ಕಾಗಿ ಅಲ್ಲ. ಪ್ರತಿಯೊಬ್ಬರು ಸಹ ಧರ್ಮದ ನೆರಳಿನಲ್ಲೆ ಸಾಗುತ್ತಾರೆ. ಆದರೆ ಇಂದಿನ ವಾಸ್ತವ ಸ್ಥಿತಿಯೇ ಬೇರೆ. ಕಷ್ಟದಲ್ಲಿದ್ದವರಿಗೆ ಸಹಾಯ ಮಾಡುವುದು ಧರ್ಮದ ಗುಣ ಮನುಷ್ಯ ಅನಾಗರಿಕತೆಯಿಂದ ನಾಗರಿಕತೆಗೆ ಬಂದರೂ ಅನಾಗರಿಕ ಜೀವನವನ್ನೇ ನಡೆಸುತ್ತಿದ್ದಾನೆ. ಧರ್ಮದ ನೆರಳಿನಲ್ಲಿ ಪರರಿಗೆ ವಂಚನೆಯನ್ನೇ ಮಾಡುತ್ತ ತನ್ನ ಒಳಿತಿಗಾಗಿಯೇ ಕೆಡುಕನ್ನು ಸಾಧಿಸಲು ಹೊರಟಿದ್ದಾನೆ. ಈ ರೀತಿಯ ಧರ್ಮದ ಜಾಡಿನಲ್ಲಿ ಸಿಲುಕಿದವರನ್ನು ಎಚ್ಚರಿಸುವ ಕ್ರಿಯೆ ವಿವೇಕಾನಂದರದು. ಒಟ್ಟಾರೆ ಆದರ್ಶವಿಲ್ಲದ ಗುರು, ತಂದೆ, ತಾಯಿ, ರಾಜಕಾರಣಿ, ಸನ್ಯಾಸಿಯಾಗದ ಹೊರತು ಉದ್ದಾರ ಅಸಾಧ್ಯ ಗಮನಿಸಬೇಕಾದ ಅಂಶವೇನೆಂದರೆ ಯಾವ ಕ್ಷೇತ್ರದಲ್ಲಿಯೂ ಶ್ರೇಷ್ಠರು ಎಂಬುವ ಪ್ರಶ್ನೆ ಒಂದು ಸಣ್ಣ ಕೆಲಸವಾದರೂ ಶ್ರದ್ಧೆಯಿಂದ ಮಾಡಿದರೆ ಪ್ರತಿಫಲ ದೊರಕುತ್ತವೆ. ಅದಕ್ಕೆ ಆಯಾ ಸ್ಥಾನದ ವ್ಯಕ್ತಿಗಳು ಅವರ ಆದರ್ಶದ ಗುಣಗಳು ಮುಖ್ಯವಾಗಿದೆ. ಆದರ್ಶದ ಕೊರತೆಯೇ ಎಲ್ಲಾ ಜೀವಿಗಳ ನರಳಾಟಕ್ಕೆ ಕಾರಣ. ಇದು ಸ್ವಾಮೀಜಿಯವರ ಆದರ್ಶವಾಣಿ ತಮ್ಮ ಜೀವಿತದ ದಾರಿಯಲ್ಲಿ ತಮ್ಮಿಂದ ಪರರಿಗೆ ಎಷ್ಟು ಉಪಕಾರ ಮಾಡಲು ಸಾಧ್ಯವೋ ಅಷ್ಟನ್ನು ತಮ್ಮ ಜೀವಿತದ ಅವಧಿಯಲ್ಲಿಯೇ ಸಾಧಿಸಿದ್ದಾರೆ. ಅವರ ಚಿಂತನೆಗಳು ಆದರ್ಶಗುಣ ಅವರನ್ನು ಇಂದಿಗೂ ಚಿರಸ್ಥಾಯಿಯಾಗಿ ಉಳಿದಿದೆ ಎಂಬುದಾಗಿ ಪ್ರೊ. ಡಿ.ಕೆ ರಾಜೇಂದ್ರರು ಸೂಚಿಸಿದ್ದಾರೆ.

---

೨೫. ಪ್ರೊ. ಡಿ.ಕೆ. ರಾಜೇಂದ್ರ ಅವರ ಚಿಂತನ ಚಿತ್ತಾರ, ಪುಟ. ೨೧೨

ನಾವು ಮತ್ತು ಕಲಾತ್ಮಕ ಅಭಿರುಚಿ

ಜೀವನವೇ ಒಂದು ಕಲೆ. ಪ್ರತಿಯೊಬ್ಬ ಹುಟ್ಟಿನಿಂದಲೂ ಸಾವಿನತನಕ ತನ್ನ ಕಲಾತ್ಮಕ ಜೀವನವನ್ನು ಸಾಗಿಸಿಕೊಂಡು ಹೋಗುತ್ತಲೆ ಇರುತ್ತಾನೆ. ಇದು ಪ್ರಾಚೀನ ಕಾಲದಿಂದಲೂ ಕಲೆಯ ಸಂಬಂಧ ಮನುಷ್ಯನಿಗೆ ಪರಿಚಿತ. ಅದು ಪ್ರಕೃತಿದತ್ತವಾಗಿ ಬಂದಿರುವಂತಹದ್ದು. ಮನುಷ್ಯ ತನ್ನ ಆಂಗಿಕ ಚಲನೆಗಳಿಂದ ತನ್ನ ಭಾಷೆಯಿಂದ ತನ್ನ ಮತ್ತು ಪರರ ನಡುವಿನ ಸಂಬಂಧಗಳನ್ನು, ಆನಂದವನ್ನು, ಸಂಭ್ರಮವನ್ನು ತನ್ನ ಅನುಕರಣೆಯ ಮೂಲಕವಾಗಿಯೇ ಮತ್ತೊಬ್ಬರಿಗೆ ಹೇಳುತ್ತಿದ್ದನು. ಇದು ಕಲೆಯ ಒಂದು ಅಭಿವ್ಯಕ್ತಿ ಮಾಧ್ಯಮ ಕಲೆ ಹೃದಯಕ್ಕೆ ಸಂಬಂಧಪಟ್ಟಿದ್ದು ಜೀವದ ಪ್ರತಿಯೊಂದು ಹಂತದಲ್ಲಿಯೂ ತನ್ನ ಕಲಾತ್ಮಕ ಅಭಿರುಚಿಗಳನ್ನು ಕಾಣುತ್ತೇವೆ. ಈ ಕಲಾತ್ಮಕ ಅಭಿರುಚಿಯನ್ನು ಕಲಿಕೆಯ ಮೂಲಕ ಕಂಡುಕೊಳ್ಳವುದು.

ಹೃದಯ ಸ್ಪಂದಿಸಿದ ಹಾಗೆ ಮನುಷ್ಯ ತನ್ನ ಅಭಿರುಚಿಗಳನ್ನು ವ್ಯಕ್ತಪಡಿಸುತ್ತಾನೆ. ಈ ಅಭಿರುಚಿಗಳು ಕಲೆಗೆ ಸಂಬಂಧಪಟ್ಟದ್ದು, ದುಃಖವಾದಾಗ ಸಂತೋಷವಾದಾಗ, ಭಯಗೊಂಡಾಗ ತನ್ನ ವರ್ತನೆಗಳು ವಿಭಿನ್ನವಾಗಿರುತ್ತದೆ. ಇದಕ್ಕೆ ಭಿನ್ನವಾಗಿ ಹಾಡುವುದು, ಕುಣಿಯುವುದು ತನ್ನ ಮುಖಭಾವವನ್ನು ಪ್ರದರ್ಶಿಸುವುದು ಇವು ಮನುಷ್ಯ ತನಗೆ ತಾನೇ ಕಂಡುಕೊಂಡ ಕಲಾ ಮಾಧ್ಯಮ. ಒಂದು ಸುಂದರವಾದ ವಸ್ತುವನ್ನು ನೋಡಿದಾಗ ಹಕ್ಕಿ ಹಾರುವುದು ಕಾಮನಬಿಲ್ಲಿನ ಬಣ್ಣ, ಮಳೆಯ ಸೊಬಗು, ಇಂತಹ ವಿಚಾರಗಳನ್ನು ನೋಡಿದ ವ್ಯಕ್ತಿ ತನಗೆ ಅರಿವಿಲ್ಲದಂತೆಯೇ ಹೃದಯ ಸ್ಪಂದಿಸಿದಂತೆಯೇ ವರ್ಣಿಸಲು ತೊಡಗುತ್ತಾನೆ. ಅದು ಹಾಡಿನ ಮೂಲಕ ಇರಬಹುದು. ಅಥವಾ ಕುಣಿತದ ಮೂಲಕ ಇರಬಹುದು ಅಥವಾ ಮಾತಿನ ಮೂಲಕವಾದರೂ ಅಭಿವ್ಯಕ್ತಿಸುತ್ತಾನೆ. ಇದನ್ನು ನಾವು ಕಲಾ ಅಭಿರುಚಿ ಎಂದು ಪರಿಗಣಿಸುತ್ತಾನೆ.

ಕಲೆ ಇಲ್ಲದ ಬಾಳು ಅಲೆ ಇಲ್ಲದ ಕಡಲಿನಂತೆ ಕಡಲಿನಲ್ಲಿ ಅಲೆಗಳಿಲ್ಲದಿದ್ದರೆ ನಿಂತ ಕೆರೆಯಂತಾಗುತ್ತದೆ. ಹೆಣ್ಣಿಗೆ ಸೌಂದರ್ಯ ಎಷ್ಟು ಮುಖ್ಯವೋ. ಸಮುದ್ರಕ್ಕೆ ಅಲೆಗಳು ಅಷ್ಟೇ ಮುಖ್ಯ ಕಲೆಯನ್ನು ನಾವು ಸಾಮಾನ್ಯವಾಗಿ ನೃತ್ಯದ ಮೂಲ ಹಾಡಿನ ಮೂಲಕ ಮುಖಭಾವದ ಮೂಲಕ ನಮ್ಮ ವಿಶಿಷ್ಟ ಕ್ರಿಯೆಗಳ ಮೂಲಕ ಕಲೆಯನ್ನು ಅಭಿವ್ಯಕ್ತಿಸುತ್ತೇವೆ. ಇದು ಒಬ್ಬರಿಂದ ಒಬ್ಬರಿಗೆ ಬಂದಂತಹದ್ದು ಈ ಕಲಾ ಅಭಿರುಚಿಯನ್ನು ನಾವು ಜಾನಪದ ಶೈಲಿಯಲ್ಲಿಯೇ ಕಾಣುತ್ತೇವೆ.

ಜೀವನದ ಹೋರಾಟದಲ್ಲಿ ಕಲೆ ಮಹತ್ವ ಪಾತ್ರವಾದುದು ಬದುಕನ್ನು ಬಿಟ್ಟು ಕಲೆಯಲ್ಲಿ ಬದುಕಿ ಕಲೆಯು ಪ್ರೇರಕ ಶಕ್ತಿ ಬದುಕನ್ನು ಸಾಗಿಸಲು ಕಲೆ ಪ್ರತಿಯೊಂದು ಹಂತದಲ್ಲಿಯೂ

ಮುಖ್ಯವಾಗುತ್ತವೆ. ಓದುವ ಅಭಿರುಚಿ, ಮಾಡುವ ಅಡಿಗೆ, ಮನೆಯನ್ನು ಶುಚಿಯಾಗಿಡುವುದು ಸಹ ಒಂದು ಕಲೆ. ನಮ್ಮ ಜೀವನ ಸಾಂಸ್ಕೃತಿಕ ಹಂತದಲ್ಲೂ ಕಲೆ ಹಾಸುಹೊಕ್ಕಾಗಿರುವುದೇ ಮನುಷ್ಯನ ಸಂಬಂಧವನ್ನು ಬೇಸೆಯುವುದಕ್ಕೆ ಹಬ್ಬ ಹರಿದಿನಗಳು, ಮದುವೆ ಸಮಾರಂಭಗಳು ಇವೆಲ್ಲವೂ ಕಲೆಯ ಭಾಗವಾಗಿಯೇ ಉಳಿದಿದೆ. ಕಲೆ ಇಲ್ಲದೆ ಮನುಷ್ಯನ ಬದುಕು ಸಾರ್ಥಕವಾಗುವುದಿಲ್ಲ. ಆ ನಿಟ್ಟಿನಲ್ಲಿ ಓದು, ಬರಹ ಇವು ಸಹ ಕಲಾತ್ಮ ಮಾದ್ಯಮಗಳೇ 'ರಾಬರ್ಟ್ ಪಾಸ್ಟರ್ ಹೇಳುವ ಹಾಗೆ 'ಕಾವ್ಯ ಆನಂದದಲ್ಲಿ ಮೊದಲಾಗಿ ವಿವೇಕದಲ್ಲಿ ಕೊನೆಗೊಳ್ಳುತ್ತವೆ. ಈ ಮಾತು ಒಬ್ಬ ವ್ಯಕ್ತಿ ಕಾವ್ಯದಿಂದ ಆನಂದವನ್ನು ಪಡೆಯುತ್ತಾನೆ. ದುಃಖವನ್ನು ಅನುಭವಿಸುತ್ತಾನೆ. ಅದು ಕಾವ್ಯ ಕಲೆಯ ಗುಣ, ನಾಟಕ ಒಂದು ಜನಪದ ಕಲೆ ನಾಟಕದ ಪಾತ್ರಗಳು ಅತ್ತಾಗ, ಸುಖಿಸಿದಾಗ ಹಾಗೂ ಭಾವನಾತ್ಮಕ ಸನ್ನಿವೇಶಗಳಲ್ಲಿ ನೋಡುಗನು ಅದೇ ಅನುಭವವನ್ನು ಪಡೆದುಕೊಳ್ಳುತ್ತಾನೆ. ಇದು ಒಬ್ಬ ವ್ಯಕ್ತಿಯನ್ನು ಕಲೆಯು ಹಿಡಿದಿಟ್ಟುಕೊಳ್ಳುವ ಬಗೆ, ಜೀವನವು ಒಂದು ಕಲೆ ಎಂಬುದು ಹಳೆಯ ಮಾತು ಕಲೆಯೊಳಗೆ ಜೀವನ ಸಾಗಿಸುವ ಕ್ರಿಯೆ ಇಂದಿಗೆ ಒಳಪಟ್ಟಿರುವಂತಹದ್ದು.

ಈ ಕಲೆಯೊಳಗೆ ಮನುಷ್ಯ ಅಭಿರುಚಿ, ಆತನ ಉಡುಪು, ಮತ್ತು ಹವ್ಯಾಸಗಳು ಸೇರಿಕೊಂಡಿವೆ. ಅಭಿರುಚಿಗಳಿಲ್ಲದೆ ಮನುಷ್ಯನ ಬಾಳು ವ್ಯರ್ಥ ಏಕೆಂದರೆ ಒಂದೇ ಆಹಾರ ವ್ಯವಸ್ಥೆ ಮನುಷ್ಯನಿಗೆ ಒಗ್ಗುವುದಿಲ್ಲ ಅಭಿರುಚಿಗಳನ್ನು ಮನುಷ್ಯ ಬಯಸುತ್ತಾನೆ. ಹಾಗಾಗಿ ಅಭಿರುಚಿಗಳು ವಿರುದ್ಧವಾದರೂ ಮನುಷ್ಯನಿಗೆ ಈ ಅಭಿರುಚಿಗಳಿಂದಲೇ ಮನುಷ್ಯನ ಮನಸ್ಸು ತಣಿಯುವುದು ಆ ನಿಟ್ಟಿನಲ್ಲಿ ಕಲಾಭಿರುಚಿ ಮನುಷ್ಯನಿಗೆ ಹಾಸುಹೊಕ್ಕಾಗಿದೆ.

ಒಟ್ಟಾರೆ ಕಲೆ ಮನುಷ್ಯನ ಪ್ರತಿಯೊಂದು ಹಂತದಲ್ಲಿಯೂ ಸಹ ಬೆಸೆದುಕೊಂಡಿದೆ. ಕಲೆ ಇಲ್ಲವೆ ಮನುಷ್ಯನಿಲ್ಲ, ಮನುಷ್ಯನಿಲ್ಲದೆ ಕಲೆ ಇಲ್ಲ ಎಂಬುದು ಸೃಷ್ಟಿಯಾಗಿದೆ. ಆದಿಯಿಂದಲೂ ಮನುಷ್ಯ ತನ್ನ ಅಂಗಿಕ ಚಲನೆಯಲ್ಲಿಯೇ ಚಿತ್ರಗಳ ರೂಪದಲ್ಲಿ ತನ್ನ ಸಂತೋಷ ಅಥವಾ ಘಟನೆಗಳನ್ನು ಚಿತ್ರಿಸಿ ಕಲೆಗೆ ಪ್ರಾಶಸ್ತ್ಯ ನೀಡಿದ್ದಾನೆ. ಕಲೆ ಜೀವನದ ಅವಿಭಾಜ್ಯ ಅಂಗ ಎಂಬುದು ಸತ್ಯ ಸಂಗತಿಯಾಗಿ ಗೋಚರಿಸುತ್ತದೆ.

ಜಾನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು

ಪ್ರೊ. ಡಿ.ಕೆ.ರಾಜೇಂದ್ರ ಅವರು ಸಂಪಾದಿಸಿರುವ ಜಾನಪದ ಸಾಹಿತ್ಯದಲ್ಲಿ ಶೈಕ್ಷಣಿಕ ವಿಚಾರಗಳು ಎಂಬ ಶೀರ್ಷಿಕೆಯಲ್ಲಿ ಜನಪದದಲ್ಲಿ ಅಡಗಿರುವ ಹತ್ತು ಹಲವು ಶೈಕ್ಷಣಿಕ ವಿಚಾರಗಳನ್ನು ಸೂಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಜನಪದಕ್ಕೂ ಶೈಕ್ಷಣಿಕ ವಿಚಾರಕ್ಕೂ ಅಜಗಜಾಂತರ ವ್ಯತ್ಯಾಸವನ್ನು ನಾವು ಕಾಣುತ್ತೇವೆ. ಎರಡು ಭಿನ್ನ ಕ್ಷೇತ್ರವಾದರೂ

ಸಾಹಿತ್ಯ ವಿಷಯದಲ್ಲಿ ಜನಪದ ಇತ್ತೀಚೆಗೆ ಸಾಹಿತ್ಯಕ್ಷೇತ್ರಕ್ಕೆ ಕಾಲಿಟ್ಟಿತು. ಆದರೆ ಮನುಷ್ಯ ಪ್ರಾರಂಭದ ದಿನಗಳಲ್ಲಿ ತನ್ನ ಆಚಾರ ವಿಚಾರಗಳು ಸಂಪ್ರದಾಯ ವ್ಯವಸ್ಥೆ ತನ್ನ ಗ್ರಾಮೀಣ ಜೀವನವನ್ನು ಅಂದಿನ ಕಾಲಕ್ಕೆ ಶ್ರೇಷ್ಠ ಮಟ್ಟದಲ್ಲಿ ರೂಪುಗೊಂಡಿತು. ಇವೆಲ್ಲವೂ ಸಹ ಆತನ ಬದುಕಿಗೆ ಪೂರಕವಾಗಿತ್ತು. ಇಂತಹ ಜಾನಪದ ವಿಚಾರಗಳಲ್ಲಿ ಕಲಿತುಕೊಂಡು ಬಂದ ಅಥವಾ ರೂಢಿಸಿಕೊಂಡ ಹಿರಿಯರಿಂದ ಬಳುವಳಿಯಾಗಿ ಬಂದ ಈ ವಿಚಾರಗಳೆಲ್ಲವೂ ಕಲಿಕೆಯಿಂದಲೇ ಕಂಡುಕೊಂಡಿದ್ದು, ಆ ನಿಟ್ಟಿನಲ್ಲಿ ಈ ಕಲಿಕೆಯೇ ಎಂದು ತಿಳಿಯಬಹುದು.

ಜನಪದ ಅಕ್ಷರದಿಂದ ಬಂದಿದ್ದಲ್ಲ ಅಕ್ಕರೆಯಿಂದ ಬಂದದ್ದು, ಶಿಕ್ಷಣ ಕಲಿತವರಿಗೆ ಮಾತ್ರ ದೊರಕುವಂತಹದ್ದು. ಆದರೆ ಕಲಿಯದೆಯೇ ಪಡೆದುಕೊಂಡ ಶಿಕ್ಷಣ ಜನಪದ. ಮೊದಲು ಮಣ್ಣು ನಂತರ ಮಡಿಕೆ ಇದ್ದಂತೆ ಶಿಕ್ಷಣ ನಂತರದ್ದೆ ಅಕ್ಷರಜ್ಞಾನ ಬಂದದ್ದು. ಶಿಕ್ಷಣವನ್ನು ನಾವು ಓದಿನಿಂದಲೇ ಮಾತ್ರ ಪಡೆದುಕೊಳ್ಳುವಂತಹದ್ದರಲ್ಲಿ ಹಲವು ರೂಪಗಳಲ್ಲಿ ಪಡೆದುಕೊಂಡಿದ್ದೇವೆ. ಅದು ಅನುಭವದಿಂದ ಕೆಲ ವಿಚಾರವನ್ನು ಮಾತನಾಡುತ್ತಾ ನಿವೇದಿಸಿಕೊಂಡಿದ್ದೇವೆ. ಜನಪದರಿಗೆ ಪ್ರಕೃತಿಯೇ ಗುರುವಾಗಿ ಅದೇ ಅವರ ಪಾಠಶಾಲೆಯಾಗಿತ್ತು. ಓದುಬರಹ ಇಲ್ಲದೆ ಶಿಕ್ಷಣಕ್ಕಿಂತ ಹೆಚ್ಚಿನ ವಿಚಾರವನ್ನೇ ಕಲಿತಿದ್ದರು. ಸಾಮಾನ್ಯವಾಗಿ ಹೇಳುವುದಾದರೆ ಇಂದಿನ ಆರೋಗ್ಯಕ್ಕೆ ಸಂಬಂಧಿಸಿದ ವಸ್ತುಗಳು ಅಂದಿನ ಕಾಲಕ್ಕೆ ಗಿಡಮೂಲಿಕೆ ಇದನ್ನೆ ಕಲಿತುಕೊಂಡಿದ್ದರು. ಇಂದಿನ ಗುರುಗಳಿಂದ ಶಿಷ್ಯರು ಪಡೆದುಕೊಳ್ಳುವ ಶಿಕ್ಷಣ ಅಂದು ತಂದೆಯಿಂದ ಮಗನಿಗೆ , ತಾಯಿಯಿಂದ ಮಗಳಿಗೆ ಹೀಗೆ ನಿರಂತರವಾಗಿ ಕಲಿಕೆಯ ಕ್ರಿಯೆಯನ್ನು ಕಾಣಬಹುದು.

ಜನಪದ ಶಿಕ್ಷಣ ಪ್ರಕೃತಿಯಿಂದ ದೊರೆಯುವಂತಹದ್ದು ಅದನ್ನು ನಾಲ್ಕು ಗೋಡೆಗಳ ಮಧ್ಯೆ ಕಲಿಯುವಂತಹದಲ್ಲ. ಅದಕ್ಕೆ ಬದುಕಿನ ವಿಸ್ತಾರವಾದ ಬಯಲೇ ಆಗಬೇಕು ಅವರದ್ದೆ ಪಾಠಶಾಲೆ ಅದರದ್ದೆ. ಪುಸ್ತಕ ಅದರದ್ದೆ ದೃಷ್ಟಿಕೋನ. ಈ ಮೂಲಕ ಜನಪದ ವ್ಯಕ್ತಿಗೆ ಅನುಭವ ಜನ್ಯವಾದದ್ದು. ಹಾಡ್ತ ಹಾಡ್ತ ರಾಗ ನರಳತ ನರಳತ ರೋಗ ಎಂಬ ಗಾದೆಯ ಮಾತಿನಂತೆ ನಾವು ಕಂಡುಕೊಂಡ ವಿಚಾರಗಳೆಲ್ಲವೂ ವಾಸ್ತವಕ್ಕೆ ಹತ್ತಿರವಾದರೂ ಅವರ ಓನ್ನಲೆ ಬಹಳ ದೂರ ಜನಪದವನ್ನು ಕಲಿಕೆಯಾಗಿ ಹಾಡಿನ ಮೂಲಕ ಗಾದೆಗಳ ಮೂಲಕ ಕಥೆಗಳ ಮೂಲಕ ನಮ್ಮ ಹಿರಿಯರು ಕಟ್ಟಿ ಬೆಳೆಸಿದ್ದಾರೆ. ಉದಾಹರಣೆಗೆ ರಾಗಿಬೀಸುವ ಹಾಡು ಕಳೆಕೀಳುವ ಹಾಡು, ನಾಟಿ ಮಾಡುವ ಹಾಡು ಜೊತೆಗೆ ಕೋಲಾಟ, ಪಗಡೆಯಾಟದ ಹಾಡು ಇವು ಯಾರು ಬರದುಕೊಟ್ಟದ್ದಲ್ಲ. ಇಂತಹ ರಾಗ, ಆಟ, ತಾಳ ಜನಪದದಿಂದ ಮೈಗೂಡಿ ಬಂದಿರುವುದನ್ನು ಡಿ.ಕೆ. ರಾಜೇಂದ್ರರವರು ಗುರುತಿಸಿದ್ದಾರೆ.

ಜಾನಪದ ಶೈಕ್ಷಣಿಕ ವಿಚಾರವಾಗಿ ಒಂದೇ ಕ್ಷೇತ್ರಕ್ಕೆ ಮೀಸಲುಗೊಂಡಿಲ್ಲ. ಅದು ಕಲಿಕೆಯ ಮೂಲಕ ಪಡೆದುಕೊಂಡಿದ್ದೇವೆ. ಮನೆಕಟ್ಟುವುದು, ಮಡಿಕೆಮಾಡುವುದು, ಕೃಷಿ ಚಟುವಟಿಕೆ ಇಂತಹ ಪಾರಂಪಾರಿಕ ಕಲಿಕೆ ಜಾನಪದ ಕ್ಷೇತ್ರದ್ದೂ ಅಂದಿನ ವ್ಯವಸ್ಥೆ ಇಂದಿಗೂ, ಕಾಣುವುದು ಹಾಗೂ ಜಾರಿಯಲ್ಲಿಯೂ ಇವೆ. ಇಂದಿನ ನ್ಯಾಯಾಂಗ ವ್ಯವಸ್ಥೆ ಅರಳಿಕಟ್ಟೆಯ ಮುಖಾಂತರ ನ್ಯಾಯ ತೀರ್ಮಾನಗಳಾಗಿದ್ದವು. ಇಂದಿನ ಮದುವೆ ಆಚರಣೆಗಳು ಅಂದಿನ ಸಂಸ್ಕೃತಿಯ ಒಂದು ಭಾಗ. ಅಂದರೆ ಅಲಿಖಿತ ಕಾನೂನು ರೀತಿಯಲ್ಲಿ ಪ್ರತಿಒಬ್ಬರು ಪಾಲಿಸಬೇಕಾಗಿತ್ತು. ನಾವು ಶಿಕ್ಷಣ ವ್ಯವಸ್ಥೆಯನ್ನು ಬಿಟ್ಟು ಮನುಷ್ಯ ಇಂದಿಗೂ ಸ್ವಾತಂತ್ರ್ಯವಾಗಿ ಬದುಕಲುಬಹುದು. ಅದು ನಾವು ಕಂಡುಕೊಂಡ ಜನಪದ ಕ್ಷೇತ್ರ ಬಾಲ್ಯದಿಂದಲೇ ಕಲಿಯುವ ಮಕ್ಕಳಿಗೆ ನಮ್ಮ ಆಚಾರ-ವಿಚಾರ ಸಂಪ್ರದಾಯಗಳು ಮಹಿಳೆಯರ ಉಡುಗೆ-ತೊಡುಗೆ ಈ ಎಲ್ಲವೂ ಸಹ ಶಿಕ್ಷಣದಿಂದ ಬಂದಿದ್ದಲ್ಲ. ಇದು ಸಹ ಜಾನಪದ ಸಂಸ್ಕೃತಿಯ ಒಂದು ಭಾಗ. ಇಂದು ನಾವು ಬಳಸುವ ಗಾದೆ ಕಥೆಗಳು. ಸಾಹಿತ್ಯರೂಪದ ಚಟುವಟಿಕಾ ಕ್ರಮ. ಇವೆಲ್ಲ ಜಾನಪದದಿಂದ ರೂಪುಗೊಂಡಿದ್ದು ನಾಟಕ, ಯಕ್ಷಗಾನ, ನೃತ್ಯ ಪ್ರಕಾರಗಳೆಲ್ಲವೂ ಜನಪದದಿಂದಲೇ ಬಂದಿರುವಂತಹದ್ದು. ಇವುಗಳೆಲ್ಲ ಗಾದೆ, ಒಗಟು, ಕಥೆಗಳು, ಗೀತೆಗಳು ಇಂದಿಗೂ ಸಹ ನಾವು ಹೆಚ್ಚಾಗಿ ಮಾತಿನಭರದಲ್ಲಿ ಬಳಸಿಕೊಂಡಿದ್ದೇವೆ, ಮಾತುಬಲ್ಲವನಿಗೆ ಜಗಳವಿಲ್ಲ, ಊಟಬಲ್ಲವನಿಗೆ ರೋಗವಿಲ್ಲ, ಅಟ್ಟು ಮೇಲೆ ಒಲೆ ಉರಿತು. ಕೆಟ್ಟ ಮೇಲೆ ಬುದ್ದಿಬಂತು. ಕನ್ನಡಿಯೊಳಗಿನ ಘಂಟೆಕ್ಕಿಂತ ಕೈಯೊಳಗಿನ ದಂಟೆ ಲೇಸು. ಕೋಣೆ ಕೂಸು ಕೊಳೆಯಿತು. ಓಣಿ ಕೂಸು ಬೆಳೆಯಿತು. ಇಂತಹ ಗಾದೆಗಳು ನಮ್ಮ ಜನಪದದ ಸಂಸ್ಕೃತಿಯ ಕಲೆ ಇದು ಬೂದಿ ಮುಚ್ಚಿದ ಕೆಂಡದಂತೆ. ಶಿಕ್ಷಣ ಅಂದಿನ ಜನಪದದ ಮೂಲರೂಪವಾಗಿತ್ತೆಂಬುದು ಗಮನಾರ್ಹ.

ಜನಪದರಿಗೆ ಯಾರು ಗುರು ಎಂದು ಹೇಳಲು ಅಸಾಧ್ಯ ಯಾವುದೆ ಒಂದು ಕಾರ್ಯದಲ್ಲೂ ಜನಸಾಮಾನ್ಯರು ಜನಪದ ಗೀತೆಗಳನ್ನು ಬಳಸುತ್ತಾರೆ. ಅದು ಅವರ ಕಾರ್ಯಕ್ಕೆ ಉತ್ತೇಜನಕಾರಿಯಾಗಿರುತ್ತದೆ. ಶ್ರಮ ಕಡಿಮೆಯಾಗಿ ಕಾರ್ಯ ನೆರವೇರುತ್ತದೆ. ಅದು ಕೃಷಿಕ್ಷೇತ್ರಕ್ಕೂ ಅನ್ವಯಿಸಬಹುದು. ಮಹಿಳೆಯರ ಕಾರ್ಯಕ್ಕೂ ಅನ್ವಯಿಸಬಹುದು. ಈ ನಿಟ್ಟಿನಲ್ಲಿ ಜನಪದರೇ ಶಿಕ್ಷಣ ಕ್ಷೇತ್ರಕ್ಕೆ ಮೂಲವಾಗಿದ್ದಾರೆ. 'ಸುಗ್ಗೆಯನ್ನಾ ಮುರಿದು ಬೆಳಸಬೇಕು, ಮಕ್ಕಳನ್ನು ಹೊಡೆದು ಬೆಳಸಬೇಕು' ಇಂತಹ ಅನುಭವದ ಮಾತು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ್ದು. ಆದರೆ ಇಂದಿನ ವ್ಯವಸ್ಥೆಯೇ ಬದಲಾವಣೆಯಾಗಿರುವುದನ್ನು ಕಾಣುತ್ತೇವೆ. ಇಂದು ಮಕ್ಕಳನ್ನು ಹೊಡೆಯುವುದಿರಲಿ ಬಯ್ಯಲು ಸಹ ಸಾಧ್ಯವಿಲ್ಲ. ಆ

ನಿಟ್ಟಿನಲ್ಲಿ ಮಕ್ಕಳ ಶಿಕ್ಷಣ ಮನೆಯಿಂದಲೇ ಪ್ರಾರಂಭವಾಗುತ್ತದೆ. ಅಕ್ಷರ ಇಲ್ಲದ ಎಷ್ಟೋ ಕುಟುಂಬದ ಮಕ್ಕಳು ಜೀವನ ನಿರ್ವಹಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ಇಂತಹ ನೂರಾರು ವ್ಯವಸ್ಥೆ. ಜಾನಪದ ಕ್ಷೇತ್ರ, ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟ ಕಾಣಿಕೆ. ಜನಪದವು ಇಂತಹ ವ್ಯವಸ್ಥೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟ ಕಾಣಿಕೆಯಾಗಿದೆ. ಪ್ರಸಕ್ತ ಸಮಾಜ ಅದೋಗತಿಯ ಹಾದಿಗೆ ಇಳಿಯುತ್ತಿರುವುದನ್ನು ಕಾಣುತ್ತೇವೆ. ಇದು ಅಂದಿನ ಕಾಲಮಾನಕ್ಕೂ ಅನ್ವಯವಾಗಿರುವುದನ್ನು ಮನಗಾಣಬಹುದು.

ಒಂದು ಸುರಕ್ಷಿತ ಸಮಾಜ ನಿರ್ಮಾಣಕ್ಕೆ ಜನರೇ ಮೂಲಕಾರಣ, ಅವರ ಸ್ವಾತಂತ್ರ್ಯ ಮತ್ತು ಸಲಿಗೆ ದುರ್ಬಳಕೆ ಮಾಡಿಕೊಂಡಂತಹ ಸಮಾಜವನ್ನು ಅಂದಿನಿಂದಲೇ ಇಂದಿನವರೆಗೂ ಕಾಣುತ್ತೇವೆ. ಮಗ ಮಲಗೋಕೆ ಹೋಗಿ ಕೆಟ್ಟನು, ಸೊಸೆ ಬೀಸುವುದಕ್ಕೋಗಿ ಕೆಟ್ಟಳು. ಇಂತಹ ಗಾದೆಗಳು ವ್ಯಕ್ತಿ ಬೆಳವಣಿಗೆಯ ಪ್ರತಿ ಹಂತದಲ್ಲಿಯೂ ಕಾಣಬಹುದು. ಬದುಕೆ ಹೀಗೆ ಇಂತಹ ಸಮಾಜ ನಿರ್ಮಾಣ ನಮ್ಮ ಜನಪದರಿಂದಲೇ ರೂಪಪಡೆದಿರುವಂತಹದ್ದು, ಸಮಾಜ ಶಾಸ್ತ್ರ, ನ್ಯಾಯಾಂಗ ವ್ಯವಸ್ಥೆ, ರಾಜಕಿಯ ಶಾಸ್ತ್ರ, ಇವು ಯಾವುದನ್ನು ಸಹ ನಮ್ಮ ಜನಪದರು ಓದಿದವರಲ್ಲಿ, ಆದರೆ ಬದುಕೆ ಅವೆಲ್ಲವನ್ನು ಕಲಿಸಿಕೊಟ್ಟಿತು. ಒಂದು ಒಳ್ಳೆಯ ಸಂಸ್ಕೃತಿ ನಿರ್ಮಾಣಕ್ಕೆ ಸಮಾಜದ ಕಟ್ಟು ನಿಟ್ಟಿನ ವ್ಯವಸ್ಥೆಯೇ ಮೂಲ ಕಾರಣ. ಈ ಎಲ್ಲಾ ವಿಚಾರಗಳು ಅತ್ಯಂತ ಸೂಕ್ಷ್ಮವಾಗಿ ಸರಳವಾಗಿ ಜನಪದದಲ್ಲೆ ಅಡಗಿಕೊಂಡಿದೆ. ಜನಪದ ಹಲವು ರೀತಿಯಾಗಿ ಶೈಕ್ಷಣಿಕ ಕ್ಷೇತ್ರಕ್ಕೆ ಒಳಪಟ್ಟಿರುವುದನ್ನು ನಾವು ಗಮನಿಸಬಹುದು. ಗರತಿಯಹಾಡು, ಜಾನಪದ ಸ್ವರೂಪ, ಜನಪದಗೀತೆಗಳು, ಜಾನಪದ ಗಾದೆಗಳು ಈ ನಿಟ್ಟಿನ ಶೈಕ್ಷಣಿಕ ವಿಚಾರಗಳಲ್ಲಿ ಕಾಣಬಹುದು. ಅಂದಿನ ಜಾನಪದದ ಎಲ್ಲಾ ವಸ್ತುಗಳು ಇಂದು ನಮಗೆ ಗ್ರಂಥಸ್ಥವಾಗಿ ದೊರಕುತ್ತಿದೆ. ನಂಬಿಕೆ, ಅಪನಂಬಿಕೆ, ದೇವರು, ಅಗೋಚರಶಕ್ತಿ ಇಂತಹ ಮೂಲನೆಲೆ ಜನಪದ ಕ್ಷೇತ್ರದ ಹಾದಿ ಆ ನಿಟ್ಟಿನಲ್ಲಿ ಜನಪದ ಮತ್ತು ಶೈಕ್ಷಣಿಕ ವಿಚಾರಗಳು ಸಾಹಿತ್ಯದ ಮೂಲ ನೆಲೆಯಾಗಿರುವುದನ್ನು ನಾವು ಕಾಣುತ್ತಿದ್ದೇವೆ ಎಂಬುದನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಮನವರಿಕೆ ಮಾಡಿದ್ದಾರೆ.

ವಿಜಯದಶಮಿ

ಪ್ರೊ. ಡಿ.ಕೆ.ರಾಜೇಂದ್ರ ಅವರು ವಿಜಯದಶಮಿ ಎಂಬ ಈ ಶೀರ್ಷಿಕೆಯಲ್ಲಿ ಅಂದಿನ ರಾಜವೈಭವದ ಪರಂಪರೆ ಮತ್ತು ವಿಜಯದಶಮಿ ಹಬ್ಬದ ಆಚರಣೆ ಮತ್ತು ವೈಸಿಷ್ಟ್ಯವನ್ನು ಗುರುತಿಸಿದ್ದಾರೆ. ನಾಡಹಬ್ಬ ಎಂದರೆ ಆಚರಣೆ ಮಾಡುವ ಪ್ರಮುಖ ಹಬ್ಬಗಳಲ್ಲಿ ವಿಜಯದಶಮಿಯು ಒಂದು. ಇದನ್ನು ದಸರ ಎಂದೇ ಕರೆಯಲಾಗುತ್ತದೆ. ಕರ್ನಾಟಕ

ಹಾಗೂ ಭಾರತದ ಮೈಸೂರಿನಲ್ಲಿ ನಡೆಯುವ ದಸರ ಎಲ್ಲರಿಗೂ ಚಿರಪರಿಚಿತ ತನ್ನದೆಯಾದ ಪರಂಪರೆಯನ್ನು ಹೊಂದಿರುವ ವಿಜಯದಶಮಿ. ಹಲವು ವೈಶಿಷ್ಟ್ಯದಿಂದ ಕೂಡಿದೆ. ಇದರ ಆಚರಣೆ ಇಡೀ ಕರ್ನಾಟಕಕ್ಕೆ ಹಬ್ಬದ ವಾತವರಣವನ್ನು ತಂದುಕೊಟ್ಟಿದೆ. ನಾಲ್ಕು ನೂರು ವರ್ಷಗಳ ಇತಿಹಾಸನ್ನು ಹೊಂದಿರುವ ಮೈಸೂರು ಅರಸರು ನವರಾತ್ರಿ ಉತ್ಸವವನ್ನು ಜಾರಿಗೆ ತಂದರು. 80 ದಿನಗಳು ನಡೆಯುವ ಉತ್ಸವ ನವರಾತ್ರಿಯೆಂದೆ ಕರೆಯುತ್ತಾರೆ. ಹತ್ತನೆಯ ದಿನವನ್ನು ವಿಜಯದಶಮಿ. ಅಂದರೇ ವಿಜಯವನ್ನು ಸಾಧಿಸಿದ ದಿನ. ನವರಾತ್ರಿಯ ಪ್ರತಿದಿನವೂ ಒಂದಲ್ಲ ಒಂದು ರೀತಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ಕಲಾವೈಭವ ಕಣ್ಣಿಗೆ ರಾಡುವಂತಹದ್ದು. ಅರಮನೆಯಲ್ಲಿ ಸಿಂಗಾರಗೊಂಡು ಕಣ್ಣಿಗೆ ರಸದೌತಣವನ್ನು ನೀಡುತ್ತವೆ ಇಂತಹ ಆಚರಣೆಗಳು ನಮ್ಮ ಸಾಂಸ್ಕೃತಿಕ ಕಲೆ ಗಾಯನ, ನೃತ್ಯ, ಸಂಗೀತ ಹೀಗೆ ಹಲವು ವಿಧದಲ್ಲಿ ಕಾರ್ಯಕ್ರಮಗಳು ಜರುಗುತ್ತವೆ.

ವಿಜಯದಶಮಿಯ ಆಚರಣೆ ತನ್ನದೇ ಆದ ವಿಶೇಷತೆಯನ್ನು ಒಳಗೊಂಡಿದೆ. ಸತ್ವ, ರಜ, ತಮೋ ಗುಣ ಇದರ ಪ್ರತೀಕವೆನಿಸಿದ ಸರಸ್ವತಿ, ಲಕ್ಷ್ಮಿ, ಕಾಳಿ ಇವರ ಉಪಾಸನೆಯನ್ನು ಮಾಡಲಾಗುತ್ತದೆ. ಪುರಾಣಗಳ ಪ್ರಕಾರ ಈ ಮೂವರು ಎಜುರ್‌ವೇದ, ಸಾಮವೇದ, ಋಗ್ವೇದಗಳ ಸ್ವರೂಪ ಎಂದು ಹೇಳಲಾಗುತ್ತದೆ. ಈ ದೇವರ ಉಪಾಸನೆಗಳಿಂದ ಸಂಪತ್ತು ಜ್ಞಾನ ಶಕ್ತಿ ದೊರಕುತ್ತದೆ ಎಂಬ ವಿಷಯವನ್ನು ಪ್ರೊ. ಡಿ.ಕೆ. ರಾಜೇಂದ್ರ ಅವರು ಅಭಿಪ್ರಾಯಪಟ್ಟಿದ್ದಾರೆ.

ವಿಜಯದಶಮಿ ಅಶ್ವಯುಜ ಪೂರ್ಣಿಮೆ ಎಂದು ಪ್ರಾರಂಭವಾಗಿ ಶುದ್ಧ ದಶಮಿಗೆ ಅಂತ್ಯಗೊಳ್ಳುತ್ತದೆ. ಈ ಒಂಭತ್ತು ದಿನಗಳು ಶಕ್ತಿ ದೇವತೆಯರ ಆರಾಧನೆಯನ್ನು ಮಾಡಲಾಗುತ್ತದೆ. ಅದನ್ನು ಒಂಭತ್ತು ಅವತಾರಗಳೆಂದೇ ಭಕ್ತರು ಆಚರಿಸುತ್ತಾರೆ. ಈ ಒಂಭತ್ತು ಅವತಾರದಲ್ಲಿ ಲಕ್ಷ್ಮಿ, ಕಾಳಿ, ಸರಸ್ವತಿಯರು ಕಾಣಿಸಿಕೊಂಡು, ಶತ್ರುಗಳಿಗೆ ಭಯವನ್ನು ಹುಟ್ಟಿಸಿ, ಕೆಲವು ಸಾಧನಗಳಿಂದ ಸರ್ವನಾಶ ಮಾಡುವಲ್ಲಿ ಯಶಸ್ವಿಯಾಗುತ್ತವೆ ಎಂಬುದು ಡಿ.ಕೆ.ರಾಜೇಂದ್ರರ ನಿಲುವಾಗಿದೆ. ಒಂಭತ್ತು ಭಾರತೀಯ ಸಂಸ್ಕೃತಿಯಲ್ಲಿಯೇ ಮಹತ್ವವಾದ ಸಂಖ್ಯೆಯಾಗಿದೆ. ಕರ್ನಾಟಕದಲ್ಲಿ ನವಗ್ರಹಗಳ ಪೂಜೆಯನ್ನು ಸಂಪ್ರದಾಯಬದ್ಧವಾಗಿ ವಿಜಯದಶಮಿಯಲ್ಲಿ ಆಚರಿಸುತ್ತಾರೆ. ಕೆಲವು ಮನೆಗಳಲ್ಲಿ ಗೊಂಬೆಗಳ ಪೂಜೆ, ದುರ್ಗಿಯ ಪೂಜೆ ಹಾಗೂ ನವ ದೇವತಾರಾಧನೆಯು ನಡೆಯುತ್ತದೆ, ಮತ್ತಿತರ ಮನೆಗಳಲ್ಲಿ ಇವುಗಳೊಂದಿಗೆ ನವಗ್ರಹಗಳ ಪೂಜೆಯು ನೆರವೇರುತ್ತದೆ. ಈ ನಿಟ್ಟಿನಲ್ಲಿ ಒಂಬತ್ತು ಭಾರತೀಯ ಸಂಸ್ಕೃತಿಯಲ್ಲಿಯೇ ಮಹತ್ವವಾದ ಸಂಖ್ಯೆಯಾಗಿ ಕಂಡುಬರುತ್ತದೆ.

ಮೊದಲ ಮೂರುದಿನ ಪಾರ್ವತಿಯ ರೂಪದಲ್ಲಿ ಮತ್ತೆ ಮೂರುದಿನ ಲಕ್ಷ್ಮಿಯ ರೂಪದಲ್ಲಿ ಆನಂತರ ಮೂರು ದಿನ ಸರಸ್ವತಿಯ ರೂಪದಲ್ಲಿ ಪೂಜಿಸಲಾಗುತ್ತದೆ. ಆಯುಧ ಪೂಜೆ, ಸರಸ್ವತಿಪೂಜೆ, ದುರ್ಗಾಷ್ಟಮಿ, ಮಹಾದಶಮಿ, ಒಂದಕ್ಕೊಂದು ಮಹತ್ವವಾದ ಅರ್ಥವನ್ನು ಪಡೆದುಕೊಂಡಿದ್ದು, ಈ ಒಂದೊಂದು ಪೂಜೆಗಳು ಅಥವಾ ಆಚರಣೆಗಳೋಉ ವಿಸ್ತಾರವಾದ ಪರಂಪರೆಯನ್ನು ಹೊಂದಿವೆ ಎಂಬುದು ಗೋಚರವಾದ ವಿಷಯವಾಗಿದೆ. ಕೆಲವು ಹಿನ್ನೆಲೆಗಳ ಪ್ರಕಾರ ವಿಜಯದಶಮಿಗೆ ಪುರಾಣಸಂಬಂಧವನ್ನು ಕಲ್ಪಿಸಲಾಗಿದೆ. ಅದು ಎಷ್ಟು ಸತ್ಯವೋ ಅಥವಾ ಅಸತ್ಯವೋ. ಪಾಂಡವರು ಅಜ್ಞಾತ ವಾಸವನ್ನು ಮುಗಿಸಿ ಕಟ್ಟಿಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ವಿಜಯದಶಮಿಯೆಂದು ಹೊರತೆಗೆದು ವಿಜಯೋತ್ಸವವನ್ನು ಆಚರಿಸಿದರು ಎಂಬುದು ಪ್ರತೀತಿ. ಹಾಗಾಗಿ ವಿಜಯದಶಮಿಗೆ ಪೌರಾಣಿಕ ಜೊತೆಗೆ ಸಾಂಸ್ಕೃತಿಕ ಹಿನ್ನಲೆಯೂ ಇದೆ. ಅರಮನೆಯ ಮಹಾರಾಜರು ಆಯುಧಗಳಿಗೆ ಪೂಜೆ ಮಾಡುತ್ತಾರೆ ಇಷ್ಟಾರ್ಥ ದೇವತೆಗಳಿಗೆ ಪೂಜೆಸಲ್ಲಿಸುತ್ತಾ ಬಂದಿರುವುದು ಅಂದಿನ ದಿನಗಳಿಂದ ಇಂದಿನ ದಿನಗಳವರೆಗೂ ತಿಳಿದುಬಂದಿರುವ ವಿಚಾರವಾಗಿದೆ. ಸಿಂಹಾಸನಕ್ಕೆ ಪೂಜೆಸಲ್ಲಿಸುವುದು ಹಾಗೂ ದುರ್ಗಿಗೆ ಪೂಜೆ ಸಲ್ಲಿಸುವುದು, ಅಂಬಾರಿ ಮೆರವಣಿಗೆ ಇದು. ಸಾಂಸ್ಕೃತಿಕ ನಗರಿಯಾದ ಮೈಸೂರಿಗೆ ವೈಭವದ ಆಚರಣೆಯಾಗಿದ್ದರು ಸಹ ವಿದೇಶಿಯರಲ್ಲಿಯೂ ಈ ಹಬ್ಬ ಆಚರಣೆ ಅವರ ಆಸಕ್ತಿ ಸೆಳೆಯುವಲ್ಲಿ ಪ್ರಮುಖವಾಗಿದೆ.

ಅಂಬಾರಿ ಹೊರುವಂತಹ ಆನೆಗಳು ಹಾಗೂ ಕುದುರೆಗಳ ಸಾಲು ಸಾಲು ಮೆರವಣಿಗೆ ನೋಡಲು ಜನರು ಹುಮ್ಮಸ್ಸಿನಿಂದಲೇ ಬಂದು ಕಾಯುತ್ತಾರೆ. ಅಂದು ಮೈಸೂರು ನವವಧುವಿನಂತೆ ಶೃಂಗಾರಗೊಂಡಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ನಾಡಹಬ್ಬ ತನ್ನ ಗತವೈಭವವನ್ನು ಕಳೆದುಕೊಳ್ಳುತ್ತಿದೆ ಕಾರಣ ಬರಗಾಲದ ಪರಿಸ್ಥಿತಿ ಹಾಗಿದ್ದರು ನಮ್ಮ ಜನ ಸಂಸ್ಕೃತಿಗೆ, ಆಚಾರ, ವಿಚಾರಕ್ಕೆಂದು ಆಸಕ್ತಿಯನ್ನು ಕಡಿಮೆ ಆಗಿಲ್ಲ. ಈ ನಿಟ್ಟಿನಲ್ಲಿ ವಿಜಯದಶಮಿ ನಾಡಿನ ಮಹತ್ವದ ಹಬ್ಬವಾಗಿದೆ. ಈ ವಿಜಯದಶಮಿ ವೀಕ್ಷಿಸಲು ಪರದೇಶದಿಂದಲೂ ಜನ ಭಾಗವಹಿಸುತ್ತಾರೆ. ಒಂದು ನಾಡಿಗೆ ಗತವೈಭವ ತರುವಂತಹ ಇಂತಹ ಹಬ್ಬಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ ಎಂಬುದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಒಟ್ಟಾರೆಯಾಗಿ ವಿಜಯದಶಮಿ ಸಾಂಸ್ಕೃತಿಕ ಆಚರಣೆಗಳ ಒಂದು ಭಾಗವಾಗಿದೆ ಎಂದು ಪ್ರೊ.ಡಿ.ಕೆ.ರಾಜೇಂದ್ರ ಅವರು ವ್ಯಕ್ತಪಡಿಸಿದ್ದಾರೆ.

ನಸುನಗೆಯ ಅಲೆಗಳು

ಪ್ರೊ. ಡಿ.ಕೆ. ರಾಜೇಂದ್ರ ಅವರ ನಸುನಗೆಯ ಅಲೆಗಳು ಎಂಬ ಕೃತಿಯು ರಾಜೇಂದ್ರರವರ ಸಂಪೂರ್ಣ ಪ್ರಬಂಧಸಂಕಲನಗಳ ಕೃತಿಯದ್ದಾಗಿರುತ್ತದೆ. ಇವರ ಹೆಚ್ಚಿನ ಪ್ರಬಂಧಗಳು ನಸುನಗೆಯ ಪ್ರಬಂಧಗಳೇ ಆಗಿವೆ. ಓದಿನ ಒತ್ತಾಯದ ಮೂಲಕ ಎಳೆಸಿಕೊಂಡು ಹೋಗುವಂತಹದ್ದು ಪ್ರಬಂಧದಲ್ಲಿ ಅಡಗಿರುವ ವಾಸ್ತವದ ಅಂಶ ಮತ್ತು ಗಟ್ಟಿತನವನ್ನು ಪ್ರದರ್ಶಿಸುತ್ತದೆ. ಹಾಗೆಯೇ ಪ್ರಬಂಧ ಬರೆವವರಲ್ಲಿ ಪೂರ್ವನಿರ್ಧಾರಿತವಾದ ಒಂದು ಅಮೂರ್ತ ವಸ್ತು ಇದ್ದೇ ಇರುತ್ತದೆ. ಆದರೆ ಅದಕ್ಕೆ ಆಕಾರ ಇರುವುದಿಲ್ಲ. ಪೂರ್ವ ನಿರ್ಧಾರಿತವಾದ ಆಕಾರ ಇದ್ದುದಾದರೆ ಅದು ಓದುಗನಿಗೆ ಎಳೆದುಕೊಂಡು ಹೋಗುವುದೇ ಅಧಿಕ ಪ್ರಬಂಧದ ವಸ್ತು ಪ್ರಬಂಧಕಾರನ ಕೈಹಿಡಿದು ನಡೆದಾಗ ಸೋಲುತ್ತದೆ. ಅಂದರೆ ಪ್ರಬಂಧಕಾರನ ಕೈಬಿಟ್ಟು ಸ್ವಚ್ಛಂದವಾಗಿ ನಡೆದಾಗ ಓದುಗನನ್ನೇ ಸೆಳೆದುಕೊಂಡು ಹೋಗುವ ಸಾಮರ್ಥ್ಯ ಪ್ರಬಂಧ ಪಡೆದುಕೊಳ್ಳುತ್ತದೆ. ಲೇಖಕರು ಇಲ್ಲಿ ತಮ್ಮ ಪ್ರಬಂಧಗಳ ಸಾರಾಂಶವನ್ನೇ ಪ್ರಬಂಧಗಳ ಬಗೆಗೆ ವಿವರಿಸಿದ್ದಾರೆ.

ಪ್ರಬಂಧಕಾರರೇ ಒಂದೆಡೆ ಸೂಚಿಸುವ ಗಾದೆ ಎಂದರೆ ನಸುನಗೆಯಿಲ್ಲದವನ ಮೋರೆ ಬುಸುಬುಸು ಎಂಬುದು ಅಂತೆ ನಸುನಗೆ ಎಂಬುದು ಗೌರವಯುತವಾದ ನಗೆ. ಮುಖ ಸಡಿಲಿಸದವರ ಸಡಿಲಿಸುವ ನಗೆ ಅದು. ಹೀಗಾಗಿ ಗಂಭೀರ ಲಲಿತ ಪ್ರಬಂಧದಂತೆ ಗಂಭೀರ ನಗೆಯೂ ಹೌದು ಅದರಂತೆಯೇ ತಮ್ಮ ಎಲ್ಲಾ ಪ್ರಬಂಧದ ಶೀರ್ಷಿಕೆಗಳನ್ನು ನಗೆಯ ಅಲೆಗೆ ಹೋಲಿಸಿದ್ದಾರೆ. ಅಂದರೆ ಅಲೆಗಳು ಹೇಗೆ ಒಂದು ಬಾರಿ ಉಕ್ಕಿ ಬಂದಾಗ ಹೊಸ ಹೊಸ ನೀರನ್ನು ಹೊರಕ್ಕೆ ತರುತ್ತದೆ. ಹಾಗೆಯೇ ಪ್ರೊ. ಡಿ.ಕೆ.ರಾಜೇಂದ್ರರವರ ಈ ಪ್ರಬಂಧಗಳು ಸಹಾ "ಹಬ್ಬಗಳು ಅರಳಿಕಟ್ಟೆ ಆಚಾರ್ಯರು ಮಾತಿನಮಲ್ಲರು ಪ್ರಕೃತಿ ತಲೆಗಳು ಪ್ರವಾಸ ದ್ವೇಷ ಸಂಬಂಧಗಳು ವರದಕ್ಷಿಣೆಯ ಬೇತಾಳ ಮಿಸಾಯಣ ದೇವಗಂಗೆ ಅಳು ತಾವು ಹವ್ಯಾಸಗಳು, ಚಮಚಗಳು ಘಟನೆಗಳು" ಎಂಬೆಲ್ಲ ವಿಚಾರಗಳ ಬಗ್ಗೆ ಸಂಪೂರ್ಣವಾಗಿ ಹೊಸ ಹೊಸ ವಿಚಾರಗಳನ್ನು ಹಾಗೂ ಅವುಗಳ ಒಲವು ನಿಲುವುಗಳನ್ನು ಈ ಪ್ರಬಂಧದ ರೂಪದಲ್ಲಿ ಅಲೆಗಳ ರೂಪದಲ್ಲಿ ನಸುನಗೆಯ ಅಲೆಗಳು ಎಂಬ ಪದನಾಮವನ್ನು ನೀಡಿ ಈ ಪ್ರಬಂಧಸಂಕಲನಗಳನ್ನು ಪ್ರಕಟಿಸಿದ್ದಾರೆ ಎಂಬುದು ಗಮನಾರ್ಹ ವಿಷಯವಾಗಿ ಕಂಡುಬರುತ್ತದೆ. ಈ ಪ್ರಬಂಧಗಳಲ್ಲಿ ಮೊದಲನೆಯ ಹಂತವಾಗಿ ಹಬ್ಬಗಳು' ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಚರ್ಚಿಸುತ್ತಾ ಹೋದರೆ ಹಬ್ಬಗಳ ವೈಶಿಷ್ಟ್ಯತೆ ಎಷ್ಟು ರೀತಿ? ಆ ಹಬ್ಬಗಳ ವಿಶೇಷತೆ ಏನು? ಎಂಬುದಾಗಿ ವಿವರಿಸಲಾಗಿದೆ. ಹಬ್ಬಗಳು ಸಂಸ್ಕೃತಿಯ ಪ್ರತೀಕ

ನಮ್ಮ ಸಮಾಜದ ಹಲವು ಆಚರಣೆಗಳು ಉಳಿದುಬಂದಿವೆ ಈ ಹಬ್ಬಗಳ ಮೂಲಕ. ಒಂದೊಂದು ಹಬ್ಬಕ್ಕೂ ಒಂದೊಂದು ಹಿನ್ನೆಲೆ ಇರುವುದನ್ನು ಗುರುತಿಸಬಹುದು. ಇಂದು ಅವು ಕೇವಲ ಸಂಪ್ರದಾಯಿಕವಾದ ಆಚರಣೆಗಳಂತೆ ಕಂಡುಬಂದರೂ ಇಡೀ ಮಾನವನ ಬದುಕನ್ನು ಆವರಿಸಿ ಹೊಸ ಉತ್ಸಾಹವನ್ನು ತುಂಬುವ ಚೈತನ್ಯ ಶಕ್ತಿಗಳಾಗಿಯೂ ಮೆರೆಯುತ್ತಿವೆ ಎಂಬುದನ್ನು ಮರೆಯುವಂತಿಲ್ಲ. ಒಂದೊಂದು ಹಬ್ಬವೂ ನಮ್ಮನ್ನು ಒಂದೊಂದು ರೀತಿಯಲ್ಲಿ ಎಚ್ಚರಿಸುವ ಮಾಂತ್ರಿಕ ಶಕ್ತಿಗಳಾಗಿವೆ. ರಾಷ್ಟ್ರೀಯ ಹಬ್ಬಗಳಾಗಲಿ ನಾಡಹಬ್ಬಗಳಾಗಲಿ ಅಥವಾ ಗ್ರಾಮದೇವತೆಯ ಹಬ್ಬಗಳಾಗಲಿ ಈ ಒಂದೊಂದು ನಮ್ಮನ್ನು ಎಚ್ಚರಿಸುವ ಕಾರ್ಯೋನ್ಮುಖರನ್ನಾಗಿಸುವ ಸದುದ್ದೇಶದಿಂದ ಹುಟ್ಟಿಕೊಂಡವುಗಳು ನಮ್ಮ ಸಮಾಜ ಮತ್ತು ಸಂಸ್ಕೃತಿ ರೂಪುಗೊಳ್ಳುವವ ಸಂದರ್ಭದಲ್ಲಿ ಹುಟ್ಟಿಕೊಂಡವುಗಳು.

ಇಂತಹ ಹಲವು ಆಚರಣೆಗಳೇ ಹಬ್ಬಗಳು ಅವುಗಳಲ್ಲಿ ಕೆಲವೂ ಸಾಮೂಹಿಕ ಆಚರಣೆಯ ವ್ಯಾಪ್ತಿಯನ್ನು ಪಡೆದಿದ್ದರೆ, ಇನ್ನೂ ಕೆಲವು ಸಂಪ್ರದಾಯದವರಿಗೆ ಮಾತ್ರ ಸೀಮಿತವಾದುದೆನಿಸುತ್ತವೆ. ಮತ್ತೆ ಕೆಲವು ಅನುಕರಣೆಯಿಂದ ಸ್ಥಾನ ಪಡೆದಿರಲೂ ಸಾಕು. ಇವು ಎಲ್ಲಾ ಜಾತಿಯವರಲ್ಲಿಯೂ ಮತದವರಲ್ಲಿಯೂ ಕಂಡುಬರುತ್ತವೆ. ಯಾವುದೇ ಜಾತಿಮತಗಳ ಹಬ್ಬವಾಗಲಿ ಅವುಗಳು ಒಂದೊಂದು ನಿರ್ದಿಷ್ಟ ಕಾರಣಕ್ಕಾಗಿ ಹುಟ್ಟಿಕೊಂಡವುಗಳು. ಆಯಾ ಮತಧರ್ಮದ ಹಿನ್ನೆಲೆಯಲ್ಲಿ ಒಂದೊಂದು ಹಬ್ಬಕ್ಕೂ ಒಂದೊಂದು ವೈಶಿಷ್ಟ್ಯತೆ ಇರುತ್ತದೆ. ಅವುಗಳಿಗೆ ಯಾವುದೇ ರೀತಿಯ ಅಡಚಣೆಗಳು ಕಂಡುಬರುವುದಿಲ್ಲ, ವ್ಯಕ್ತಿಯ ಹಿನ್ನೆಲೆಯಲ್ಲಿ, ಬಂದಂತಹ ಹಬ್ಬಗಳು ಮತ್ತು ದೇಶದ ಹಿನ್ನೆಲೆಯಲ್ಲಿ ಕಂಡುಬಂದಂತಹ ಹಬ್ಬಗಳನ್ನೂ ಸಹ ನಾವು ಮನಗಾಣಬಹುದಾಗಿದೆ, ವ್ಯಕ್ತಿ ಹಿನ್ನೆಲೆಯಲ್ಲಿ ಕಂಡುಬಂದಂತಹ ಹಬ್ಬಗಳಾದ ಗಾಂಧಿ ಜಯಂತಿ ಅಂಬೇಡ್ಕರ್ ಜಯಂತಿ ಬುದ್ದಜಯಂತಿ ಮುಂತಾದಂತಹ ಹಬ್ಬಗಳನ್ನು ಕಾಣಬಹುದಾಗಿದೆ. ದೇಶೀಯ ಮತ್ತು ರಾಷ್ಟ್ರೀಯ ಹಿನ್ನೆಲೆಯಲ್ಲಿ ಕಂಡುಬರುವಂತಹ ಹಬ್ಬಗಳೆಂದರೆ ಸ್ವಾತಂತ್ರ್ಯ ದಿನಾಚರಣೆ ಗಣರಾಜ್ಯೋತ್ಸವ, ಕನ್ನಡ ರಾಜ್ಯೋತ್ಸವ ಹಾಗೂ ಸಾಮೂಹಿಕವಾಗಿ ಆಚರಿಸುವ ಹಬ್ಬಗಳಿಗೂ ಗ್ರಾಮದೇವತೆಯ ಹಬ್ಬಗಳಿಗೂ ನಿರ್ದಿಷ್ಟ ಹಿನ್ನೆಲೆ ಕಾರಣಗಳಿರುತ್ತವೆ. ಒಂದೊಂದು ಋತುವಿನಲ್ಲಿ ಒಂದೊಂದು ಹಬ್ಬಗಳು ತನ್ನ ವೈಶಿಷ್ಟ್ಯವನ್ನು ಸಾಧಿಸಿಕೊಂಡಿರುತ್ತವೆ.

ಹಬ್ಬಗಳು ಮನುಷ್ಯನ ಪ್ರಗತಿಯ ಸಾಧನೆ-ವೈಭವಗಳ ಸಂಕೇತ ಅವು ಅವನನ್ನು ಸಂತೋಷದಲ್ಲಿ ಮುಳುಗಿಸುವ ಸಾಹಸದಲ್ಲಿ ತೊಡಗಿಸುವ ಸಂಭ್ರಮದಲ್ಲಿ ತೇಲಿಸುವ ಸಡಗರದ ಸಂದರ್ಭಗಳು ಬಹುತೇಕ ಎಲ್ಲ ಹಬ್ಬಗಳೂ ಧಾರ್ಮಿಕ ಶ್ರದ್ಧೆಯಿಂದ ಕೂಡಿರುತ್ತವೆ.

ಭಯಭಕ್ತಿಯಿಂದ ಸಮ್ಮಿಶ್ರವಾಗಿರುತ್ತವೆ. ನಂಬಿಕೆಯ ಪ್ರೇರಿತವಾಗಿ, ಸಂಸ್ಕೃತಿಯಲ್ಲಿ ಬೇರುಬಿಟ್ಟು ಬದುಕಿನ ಶ್ರದ್ಧೆಯನ್ನು ಹೆಚ್ಚಿಸಲು ಕಾರಣವಾಗಿರುತ್ತವೆ. ಪಿತೃಪಕ್ಷ ಅಥವಾ 'ಮಾರ್ನೌಮಿ' ಹಬ್ಬ ಇಂದಿಗೂ ತನ್ನ ಪ್ರಾಬಲ್ಯವನ್ನು ಹಿಂದಿನಷ್ಟೆ ಪ್ರಬಲವಾಗಿ ಉಳಿಸಿಕೊಂಡು ಬಂದಿರುವ ಹಬ್ಬ "ಮಗನನ್ನು ಮಾರಿ ಮಾರ್ನಾಮಿ ಮಾಡು' ಎಂಬ ಗಾದೆಯನ್ನು ಕೇಳಿದಾಗ ಆ ಹಬ್ಬದ ವೈಶಿಷ್ಟ್ಯತೆ ಮತ್ತು ಪ್ರಾಮುಖ್ಯತೆ ಎಷ್ಟು ಎಂಬುದನ್ನು ತಿಳಿಸಲಾಗುತ್ತದೆ.

ಹಿಂದೂಗಳಲ್ಲಿ ಅನೇಕರಿಗೆ ಇದು ಬಹುದೊಡ್ಡ ಹಬ್ಬವಾಗಿ ಕಂಡುಬರುತ್ತದೆ. ಈ ಹಬ್ಬಕ್ಕಾಗಿ ತುಂಬ ದಿನಗಳಿಂದಲೂ ಹಬ್ಬದ ತಯಾರಿಯು ನಡೆದಿರುತ್ತವೆ. ಈ ಹಬ್ಬದ ಮುಖ್ಯ ಉದ್ದೇಶ ಸತ್ತು ಸ್ವರ್ಗವೋ ಅಥವಾ ನರಕವೊ ಸೇರಿರುವ ಹಿರಿಯ ಕಿರಿಯರಿಗೆ ಭಕ್ತಿ ಗೌರವಪೂರಕವಾಗಿ ಬದುಕಿರುವವರು ಅರ್ಪಿಸುವ ಸೇವೆಯೇ ಈ ಹಬ್ಬ ಕಡುಬಡವರಿಗೂ ಪವಿತ್ರವಾದ ಹಬ್ಬವಾಗಿ ಕಂಡುಬರುತ್ತದೆ. ಹಾಗೆಯೇ ವಸಂತಋತುವಿನ ಹಬ್ಬಗಳಲ್ಲಿ 'ಯುಗಾದಿ' ಅಷ್ಟೇ ಸಂಭ್ರಮ ಸಡಗರಗಳಿಂದ ಕೂಡಿದ ಹಬ್ಬ 'ಯುಗಾದಿ ಮುಂದೆ ತಗಾದಿ' ಎಂಬಂತೆ ಇದಕ್ಕೂ ಅಷ್ಟೇ ಪೂರ್ವ ಸಿದ್ದತೆ ನಡೆದಿರುತ್ತದೆ. ಹಬ್ಬ ಬಂದು ಬಾಗ್ಲಲ್ಲಿ ಕುಳಿತಿದೆ ಎಂದು ಎಲ್ಲಾ ಕೆಲಸವನ್ನು ಬದಿಗೊತ್ತಿ ಈ ಹಬ್ಬದ ಕೆಲಸಗಳನ್ನು ಮಾಡಲು ಪ್ರಾರಂಭಿಸುತ್ತಾರೆ. ಬೇವು ಬೆಲ್ಲ ಇವರ ವಿಶೇಷ, ಎಣ್ಣೆಸ್ನಾನದ ನಂತರ ಹೊಸಬಟ್ಟೆ ಧರಿಸಿ ದೇವರಿಗೆ ಹಿರಿಯರಿಗೆ ಪೂಜೆಸಲ್ಲಿಸಿ ಸಾಯಂಕಾಲ ಶ್ರವಣ ಮಾಡುವುದು ಈ ಹಬ್ಬದ ಹೆಚ್ಚುಗಾರಿಕೆ ಯುಗಾದಿ ಫಲವನ್ನು ಕೇಳಿ ರೈತರು ಮುಂದಿನ ಬೆಳೆಯ ಸ್ಥಿತಿಗತಿಯನ್ನು ತಿಳಿಯುತ್ತಾರೆ ಎಂಬ ವಿಷಯ ಪ್ರಮುಖವಾಗಿದ್ದಾಗಿ ತಿಳಿಯಪಡಿಸುತ್ತದೆ. ಹಬ್ಬದ ವೈಶಿಷ್ಟ್ಯತೆಯನ್ನು ಪ್ರೊ, ಡಿ.ಕೆ.ರಾಜೇಂದ್ರ ಅವರು ತಿಳಿಸಿದ್ದಾರೆ. ಇನ್ನೂ ಗ್ರಾಮದೇವತೆಗಳ ಹಬ್ಬಗಳಲ್ಲಿ ಆಯಾ ಪ್ರದೇಶಕ್ಕೆ ಹಾಗೂ ಆಯಾ ಜನಾಂಗದ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಹಬ್ಬಗಳು ಕಂಡುಬರುತ್ತವೆ.

ಗ್ರಾಮದೇವತೆ ನೇರವಾಗಿ ಆ ಗ್ರಾಮಕ್ಕೆ ಸಂಬಂಧಿಸಿದುದಾದ್ದರಿಂದ ಅವರ ಕೋಪ ತಾಪವೇನಿದ್ದರೂ ನೇರವಾಗಿ ಊರಿಗೆ ತಟ್ಟುವಂತಹದು ಎಂಬ ಭಯ ಈಗಲೂ ಗ್ರಾಮೀಣ ಪ್ರದೇಶದಲ್ಲಿ ದಟ್ಟವಾಗಿದೆ. ಆ ಊರಿನ ಎಲ್ಲದರ ಎಲ್ಲರ ಹಿತರಕ್ಷಣೆ ಹೊಣೆ ಆ ದೇವತೆಗೆ ಸಂಬಂಧಿಸಿದ್ದು, ಹಸು, ಕರು ಯಾವುದೇ ಪ್ರಾಣಿಗೆ ರೋಗಬಂದರೂ ಮೊದಲು ಆ ದೇವತೆಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಮನುಷ್ಯನಿಗೆ ಅತ್ಯಂತ ಭೀಕರ ರೋಗ ಬಂದಾಗಲೂ ಆ ದೇವತೆಯ ಗುಡಿಯಲ್ಲಿ ಒಂದು ರಾತ್ರಿ ತಂಗಿದ್ದು ಹರಕೆ ಕಟ್ಟಿಕೊಂಡು ಹೂವನ್ನು ಕೇಳಿ ಆನಂತರ ದೊಡ್ಡ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ಹಬ್ಬ ಆಚರಣೆಗಳ ಮಹತ್ವ ಮತ್ತು

ದೇವರ ಭಕ್ತಿಗೆ ಜನ ಮಾರುಹೋಗಿ ಭಯಭೀತಿಯಿಂದ ಅನಿರ್ದಿಷ್ಟವಾಗಿ ಹಲವು ಆಚರಣೆಗಳನ್ನು ಪ್ರಾರಂಭಿಸಿದರು. ಹೀಗೆ ಡಾ. ಡಿ.ಕೆ.ರಾಜೇಂದ್ರರವರು ಹಬ್ಬದ ಮಹತ್ವ, ಆಚರಣೆ, ಭಕ್ತಿ ಬಗ್ಗೆ ವ್ಯಕ್ತಪಡಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳು ಸಂಪೂರ್ಣವಾಗಿ ನಿವಾರಣೆಯಾದ ನಂತರ ಎಲ್ಲಾ ಸಮುದಾಯದ ಜನಸಾಮಾನ್ಯರು ಸೇರಿಕೊಂಡು ಆಯಾ ಪ್ರದೇಶದ ಗ್ರಾಮದೇವತೆಗಳಾದ ದೊಡ್ಡಮ ತಾಯಿ ಹಬ್ಬ, ಚಿಕ್ಕಮ್ಮ ತಾಯಿ ಹಬ್ಬ. ಮಾರಮ್ಮ ತಾಯಿ ಹಬ್ಬ, ಚೌಡೇಶ್ವರಿ ತಾಯಿ ಹಬ್ಬ ಎಂಬೆಲ್ಲ ಹೆಸರನ್ನಿಟ್ಟುಕೊಂಡ ವಿಧಿ–ವಿಧಾನಗಳ ಮೂಲಕ ಒಂದು ಕ್ರಮಬದ್ಧ ರೀತಿಯಲ್ಲಿ ಹಬ್ಬ ಆಚರಣೆಗಳನ್ನು ಆಚರಿಸುತ್ತಾರೆ.

ಹೀಗೆ ಹಬ್ಬಗಳು ಆಯಾ ಪ್ರದೇಶದ ಅಥವಾ ಆಯಾ ಜನಾಂಗದ ಬಗ್ಗೆಯೂ ಜನಜೀವನ ಪದ್ಧತಿ, ಸಂಪ್ರದಾಯ ಆಚರಣೆ–ವಿಚಾರಣೆ ನಂಬಿಕೆ ಮುಂತಾದ ಹತ್ತು ಹಲವು ವಿಷಯಗಳ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿ ಗಮನಕ್ಕೆ ಬರುತ್ತವೆ. ಗ್ರಾಮದೇವತೆಯ ಹಬ್ಬಗಳಿಂದ ಎಲ್ಲೊ ಒಂದೆಡೆ ಮೂಢನಂಬಿಕೆ ಕಂದಾಚಾರಕ್ಕೆ ಮತ್ತು ಪ್ರಾಣಹಾನಿಗೆ ಒಳಗಾದರೂ ಮತ್ತೊಂದೆಡೆ ಸಂಸ್ಕೃತಿ ಮತ್ತು ಪರಂಪರೆಯ ಉಳಿವಿಗಾಗಿ ನಡೆಸುತ್ತಿರುವ ಹರಸಾಹಸವಾಗಿ ತಿಳಿದುಬರುತ್ತದೆ. ಈ ಹಬ್ಬಗಳಿಂದ ಸಾಮಾನ್ಯ ಜನಸಾಮಾನ್ಯರು ಕೂಡ ಈ ಹಬ್ಬದಲ್ಲಿ ಪಾಲ್ಗೊಂಡು ಯಾವುದೇ ಮತ ಭೇದವಿಲ್ಲದೆ ತಾವೆಲ್ಲರೂ ಒಂದೇ ಎಂಬ ಮನೋಭಾವನೆಗೆ ದಾರಿಯಾಗುತ್ತದೆ. ಹಬ್ಬಗಳ ಮೂಲಕವೇ ಒಂದೆಡೆ ಪರಂಪರೆ ರಕ್ಷಣೆಯಾದರೆ ಜನಸಾಮಾನ್ಯರಿಗೆ ಮನರಂಜನೆಯ ಪ್ರಮುಖ ಕೇಂದ್ರವಾಗಿದೆ. ಹಲವಾರು ಪೂಜಾವಿಧಾನಗಳಿಂದ ಆಯಾ ಸಮುದಾಯದವರು ಆಯಾ ಸಮುದಾಯದ ಸಂಸ್ಕೃತಿಗೆ ತಕ್ಕಂತೆ ತಮ್ಮನ್ನು ತೊಡಗಿಸಿಕೊಳ್ಳಬಹುದಾಗಿದೆ. ಈ ಹಬ್ಬಗಳಿಂದ ಒಂದೆಡೆ ಲಾಭದಾಯಕವೂ ಮತ್ತೊಂದೆಡೆ ನಷ್ಟ ಉಂಟಾದರೂ ಒಂದೆಡೆ ಎಲ್ಲ ಸಮುದಾಯಗಳು ಸೇರಿ ಆಚರಿಸುವುದನ್ನು ಸಹೃದಯರ ಮೇಲೆ ಪರಿಣಾಮಕಾರಿಯಾಗಿ ತಿಳಿಯಬಯಸುತ್ತವೆ. ಹೀಗೆ ಹಬ್ಬಗಳು ಎಂಬ ಶೀರ್ಷಿಕೆ ಅಡಿಯಲ್ಲಿ ಒಂದು ಪ್ರಬಂಧವನ್ನು ರಚಿಸಿ ಹಬ್ಬದ ಎಲ್ಲಾ ರೀತಿಯ ಸಂದರ್ಭನುಚಿತ ಆಚರಣೆಗಳು ಸಂಪ್ರದಾಯಗಳ ನಂಬಿಕೆಗಳ ಬಗ್ಗೆ ಅರಿವು ಮೂಡಿಸಿದವರು. ಡಾ. ಡಿ.ಕೆ.ರಾಜೇಂದ್ರರವರು ಎಂಬುದನ್ನು ಮರೆಯುವಂತಿಲ್ಲ.

ಸಂಬಂಧಗಳು

ಇಂದು ಸಂಬಂಧಗಳ ಬಗ್ಗೆ ಆಲೋಚಿಸುವವರೆ ಕಡಿಮೆ ಇತ್ತೀಚಿನ ದಿನಗಳಲ್ಲಂತೂ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಿದೆ. ಸಂಬಂಧಗಳು ಒಂದು ಬಗೆಯವೇ ಎರಡು ಬಗೆಯವೆ ಇವುಗಳ ಬಗ್ಗೆ ಯೋಚಿಸ ಹೊರಟರೇ ಸಮಸ್ಯೆಗಳೆ ಹೆಚ್ಚು. ಅದರಲ್ಲಿ ಕೆಲವು

ಸಂಬಂಧಗಳು ಇಷ್ಟ ಇರಲಿ ಇಲ್ಲದೇ ಇರಲಿ ಸಂಬಂಧಗಳು ಬೆಳೆದುಬಿಡುತ್ತವೆ. ಬಿಇಸಿ ತುಪ್ಪದಂತೆ ನುಂಗಲು ಆಗದೇ ಉಗಿಯಲು ಆಗದೇ ಅದನ್ನು ಹಾಗೆಯೇ ಉಳಿಸಿಕೊಂಡು ಹೋಗಬಹುದಾಗುತ್ತದೆ.

ಇಂದು ಅನೇಕ ಸಂಬಂಧಗಳು ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಇಂಥದ್ದೇ ಸ್ಥಿತಿಯಲ್ಲಿ ಹಲವು ಸಂಬಂಧಗಳು 'ಸಂಸಾರದ ಗುಟ್ಟು ವ್ಯಾದಿರಟ್ಟು' ಎಂಬ ಕಾರಣಕ್ಕಾಗಿ ಹೇಗೇ ಉಳಿದು ಸ್ಫೋಟಿಸಿದಾಗ ಗುಟ್ಟುರಟ್ಟಾಗುವುದು ಉಂಟು ಎಂಬ ಕಾರಣಕ್ಕಾಗಿ ಹೇಗೋ ಉಳಿದು ಸ್ಫೋಟಿಸಿದಾಗ ಗುಟ್ಟು ರಟ್ಟಾಗುವುದು ಉಂಟು ಎಂಬ ಕಾರಣಕ್ಕಾಗಿ ಹೇಗೋ ಉಳಿದು ಸ್ಫೋಟಿಸಿದಾಗ ಗುಟ್ಟು ರಟ್ಟಾಗುವುದುಂಟು. ಆಗ ವಾಸ್ತವಿಕತೆ ಹೊರಬಿದ್ದು ಯಾವುದಾದರೂ ಒಂದು ದಾರಿಯನ್ನು ಹಿಡಿಯುವತ್ತ ಸಂಬಂಧ ಸಾಗುತ್ತದೆ. ಎಷ್ಟೋ ಸಂಬಂಧಗಳು ಮುರಿದುಹೋಗಬಹುದು. ಎಷ್ಟೋ ಸಂಬಂಧಗಳು ಕೈಗೂಡಬಹುದು. ಸಂಬಂಧಗಳ ವಿಚಾರಬಂದಾಗ ಅಳಿಯ ಮನೆತೊಳಿಯ' ಎಂಬ ನಾಣ್ಣುಡಿಯಂಎ ಅಳಿಯ ಶನಿಗ್ರಹನಾಗಿ ಕಾಡಬಹುದು. ಇನ್ನೂ ಹೆಂಡತಿಯ ವಿಚಾರವಾಗಿ ಬಂದರೇ ಒಳ್ಳೆಯ ಹೆಂಡತಿ ಸಿಕ್ಕರೆ ಒಳ್ಳೆಯದಾಯಿತು. ಇಲ್ಲದೆ ಹೋದರೆ ಸಂಪೂರ್ಣ ವಂಶವೇ ನಾಶವಾಗುವುದು. ಅತ್ತೆಯವರ ಸಂಬಂಧದ ವಿಚಾರಬಂದರೆ ಒಬ್ಬಳು ಅತ್ತೆಗೆ ಉತ್ತಮ ಸೋಸೆ ದೊರೆತರೆ ಅದೇ ಭಾಗ್ಯ ಇಲ್ಲದಿದ್ದರೆ ಅದೇ ದುರಾದೃಷ್ಟ. ಅದರಂತೆಯೆ ಮುಂದೆ ಸಾಗುತ್ತ ಗಾದೆಗಳು ಇದಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗುತ್ತದೆ. ಒಂದು ವೇಳೆ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಗಾದೆ ಮಾತು ಇದೆ. ಇದರಂತೆಯೇ ಗಾದೆಗಳು ಅಂದರೆ ಪ್ರಾಚೀನ ಕಾಲಕ್ಕೆ ಸಂಬಂಧಪಟ್ಟುದಾಗಿದ್ದು. ಗಾದೆ ಮಾತಿನಲ್ಲಿ ಹೇಳುವುದಾದರೆ ಅವು ಇಡಿ ಮನುಷ್ಯನ ಜೀವನದ ಅನುಭವದ ರಹಸ್ಯವನ್ನೆಲ್ಲ ಬಿಚ್ಚಿಡುತ್ತವೆ.

ಉದಾ: 'ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟ ದೇವರಿದ್ದಾಂಗ' ಗಂಡನು ಕೊಡುವ ಸಕಲ ಹಿಂಸೆಯನ್ನೆಲ್ಲಾ ಸಹಿಸಿ ಗಂಡನ ಸಕಲ ಆಸೆ ಆಮಿಷಗಳನ್ನು ಈಡೇರಿಸುವಂತಹ ಸಹನಾಮೂರ್ತಿಯಾದ ಹೆಣ್ಣನ್ನು ಹೆತ್ತುಹೊತ್ತು ಬೆಳೆಸಿ ಗಂಡುಗಳಿಗೆ ವಿವಾಹದ ಮೂಲಕ ಧಾರೆಯೆರೆದಿರುತ್ತಾನೆ. ಇದಕ್ಕೆ ಮಾವನು ಇಲ್ಲಿ ಕಣ್ಣುಕೊಟ್ಟ ದೇವರಾಗುತ್ತಾನೆ. ಈ ಕಾರಣಕ್ಕಾಗಿ ಈ ಅಳಿಯ ಮಾವಂದಿರ ಸಂಬಂಧಗಳು ಸಹ ಮೇರುಗ್ಯೆಯಾಗಿವೆ. ಈ ಮಾತಿನ ಇತಿಮಿತಿಯಲ್ಲಿಯೇ ಸಂಬಂಧಗಳು ನಿಲ್ಲುತ್ತವೆ. ಸಂಬಂಧಗಳು ಬಹಳ ಸೂಕ್ಷ್ಮವಾದವುಗಳು ಅವುಗಳು ಹುಟ್ಟುವುದು. ಬೆಳೆದುಕೊಳ್ಳುವುದು ಮತ್ತು ಬಿಟ್ಟುಬಿಡುವುದು. ಕೆಲವು ಅಂಶಗಳಿಂದ ಮಾತ್ರ ಅವಲಿಸಿಕೊಂಡಿರುತ್ತದೆ. ಗಂಡಹೆಂಡತಿಯಾಗಲಿ ಮಾವ

ಅಳಿಯಂದಿರಾಗಲಿ ಅತ್ತೆ-ಸೊಸೆಯಾಗಲಿ ಮಾವ-ಅಳಿಯನಾಗಲಿ ಅಣ್ಣ-ತಮ್ಮನಾಗಲಿ ಅಥವಾ ಯಾರೇ ಆಗಲಿ ಸಂಬಂಧ ಉಳಿಯುವುದು ಹಲವುಅಂಶಗಳನ್ನು ಆಧರಿಸಿಯೇ ಇಲ್ಲಿ ಗಾದೆಗಳಿಗೂ ಮತ್ತು ಮನುಷ್ಯ ಸಂಬಂಧಕ್ಕೂ ತುಂಬಾ ನಂಟಾಗಿದ್ದು ಮನುಷ್ಯನ ಇಡೀ ಅನುಭವನ್ನಾಧರಿತ ಜೀವನವನ್ನು ಬಿಚ್ಚಿಡುವಲ್ಲಿ ಗಾದೆ ಮಾತುಗಳು ಕಾರ್ಯವನ್ನು ನಿರ್ವಹಿಸುತ್ತವೆ. ಅದರಂತೆಯೇ ಇಲ್ಲಿ ಸಂಬಂಧಗಳು ಗಾದೆ ಮತ್ತು ಮಾತು ಮೂರು ಕೂಡ ಒಂದೆಡೆ ನೆಲೆ ನಿಂತು ಪ್ರಮುಖ ಕಾರ್ಯನಿರ್ವಹಿಸುತ್ತವೆ. ನುಷ್ಯನ ಜೀವನ ಹೇಗೆ ರೂಪುಗೊಂಡಿದೆಯೋ ಮತ್ತು ಮನುಷ್ಯನ ಸ್ಥಿತಿಗತಿ ಸಂದರ್ಭಕ್ಕಾನುಗುಣವಾಗಿ ಗಾದೆಗಳು ನಿರ್ಮಾಣಗೊಂಡಿರುವುದನ್ನು ಗಮನಿಸಬಹುದು. ಸಂಬಂಧಗಳಿಗೆ ಹೆಚ್ಚು ಬೆಲೆಯನ್ನು ಮನುಷ್ಯ ಕೊಡಬೇಕಾಗುತ್ತದೆ. ಸಂಬಂಧಗಳ ಬಗ್ಗೆ ವ್ಯಕ್ತಪಡಿಸುತ್ತಲೇ "ದೇವನೂರಾ ಮಹಾದೇವರವರು ಮಾನವ ಸಂಬಂಧ ಅನ್ನೋದು ದೊಡ್ಡದು ಕಣಾ' ಎಂದಿದ್ದಾರೆ. ಇಂದಿನ ಪ್ರಪಂಚದಲ್ಲಿ ಸಂಬಂಧಗಳಿಗೆ ತುಂಬಾನೆ ಬೆಲೆಯಿದೆ. ಇದರ ಪ್ರಮುಖ ಮೂಲವೇ ಸಂಬಂಧ ಮತ್ತು ಸಂಸ್ಕೃತಿ ಮತ್ತು ಗಾದೆಗಳು ಹೇಗೆ ಒಂದಕ್ಕೊಂದು ಸಂಬಂಧದಿಂದ ಬೆರೆತುಕೊಂಡು ಮನುಷ್ಯನನ್ನೆ ಪ್ರಮುಖ ಕೇಂದ್ರವಾಗಿಟ್ಟುಕೊಂಡು ಸಂದರ್ಭಕ್ಕೆ ತಕ್ಕಾಗಿ ಬಳಕೆಗೆ ಬರುತ್ತವೆ ಎಂಬುದಾಗಿದೆ. ಆನಸಾಮಾನ್ಯರ ಮೇಲೆ ಹೆಚ್ಚು ಪರಿಣಾಮ ಬೀರುವುದುಂಟು. ಇವರಲ್ಲಿಯೂ ಸಂಬಂಧಗಳ ಗಟ್ಟಿತನವನ್ನು ತೆರೆದಿಡುವ ಕಾರ್ಯ ಈ ಗಾದೆಗಳಿಗಾಗಿದೆ. ಸಂಬಂಧಗಳು ಎಂದರೇ ಒಬ್ಬರಲ್ಲಿಯೂ ಮತ್ತೊಬ್ಬರಲ್ಲಿಯೂ ಪ್ರೀತಿಯನ್ನುಂಟುಮಾಡುತ್ತದೆ. ಅದರಂತೆಯೇ ಸಹಾ ಈ ಪ್ರೀತಿ ಸಂಬಂಧ ಮಮತೆಗಳು ಒಂದೊಂದು ಹಂತದಲ್ಲಿ ಸೇರಿಕೊಂಡು ಕಾರ್ಯನಿರ್ವಹಿಸುವುದೇ ಒಂದು ರಈತಿಯ ಸಂಬಂಧಗಳ ಬಗ್ಗೆ ತಿಳಿಸುವ ಪ್ರಮುಖ ಕಾರ್ಯವಾಗಿದೆ ಎನ್ನಬಹುದು.

*****

ಅಧ್ಯಾಯ – ೪

ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ

ಪ್ರೊ. ಡಿ.ಕೆ. ರಾಜೇಂದ್ರ ಅವರು ಸಂಶೋಧಿಸಿರುವ ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ ಎಂಬ ಮಹಾಪ್ರಬಂಧದಲ್ಲಿನ ಸೂತ್ರದ ಗೊಂಬೆಯಾಟ ಎಂಬ ಪ್ರಬಂಧದಲ್ಲಿ ಹಲವು ಅಂಶಗಳು ನೆಲೆಗೊಂಡಿವೆ. ಸೂತ್ರದಗೊಂಬೆಯಾಟದ ಬಗ್ಗೆ ಚರ್ಚಿಸುವುದಕ್ಕಿಂತ ಮೊದಲು ಅವುಗಳ ಪ್ರಾಚೀನತೆಯನ್ನು ತಿಳಿಸಿಕೊಡುವುದು ತುಂಬಾ ಅವಶ್ಯಕವಾಗಿದೆ ಎಂದು ಡಿ.ಕೆ.ರಾಜೇಂದ್ರರವರು ಅಭಿಪ್ರಾಯಪಡಿಸಿರುತ್ತಾರೆ. ಸೂತ್ರದ ಗೊಂಬೆಯ ಪ್ರಾಚೀನತೆಯ ಅರಿವು ಇದ್ದಲ್ಲಿ ಪ್ರಪಂಚದಾದ್ಯಂತ ಸೂತ್ರದ ಗೊಂಬೆಯಾಟಕ್ಕೆ ಇರುವ ಮೌಲ್ಯ ಮತ್ತು ಮಹತ್ವ ಮತ್ತು ಸೂತ್ರದಗೊಂಬೆಯಾಟದ ಪ್ರಯೋಜನ. ಮನರಂಜನೆಯ ವಿಶಿಷ್ಟ ಕಲೆಯ ಪ್ರದರ್ಶನದಿಂದ ಆಗುವ ಉಪಯೋಗ ಸಾಧಕ ಭಾದಕ, ಈ ಕಲೆಯು ನಿರ್ದಿಷ್ಟವಾಗಿ ನೆಲೆಗೊಂಡಿರುವ ದೇಶಿ ವಿಶಿಷ್ಟನೆಲೆಗಳು ಹಾಗೂ ಪುರಾಣ ಪ್ರಾಚೀನತೆಯಲ್ಲಿಯೂ ಅಡಗಿರುವಂತಹ ಸೂತ್ರದಗೊಂಬೆಯಾಟದ ಕಲೆಯ ಆಚರಣೆ, ಸಂಪ್ರದಾಯ, ವಿಶಿಷ್ಟತೆಯನ್ನು ತಿಳಿಯಬೇಕೆಂದರೆ ಸೂತ್ರದಗೊಂಬೆಯಾಟದ ಮೂಲ ತಿಳಿಯುವುದು ಅನಿವಾರ್ಯ ಎಂದು ಪ್ರೊ. ಡಿ.ಕೆ.ರಾಜೇಂದ್ರರವರು ವ್ಯಕ್ತಪಡಿಸುವ ಚಿಂತನೆಗಳು ಅರ್ಥಪೂರ್ಣವಾಗಿವೆ.

ಸೂತ್ರದಗೊಂಬೆಯಾಟದ ಪ್ರಪಂಚದಾದ್ಯಂತಲೂ ಪ್ರಚಲಿತವಾಗಿರುವ ಒಂದು ಅತ್ಯಂತ ಪ್ರಾಚೀನವಾದದ್ದು ಕೂಡ ಆಗಿದ್ದು ಎಲ್ಲವರ್ಗದವರಿಗೂ ಎಲ್ಲ ಹಂತದಲ್ಲೂ ಮನರಂಜನೆ ನೀಡಬಲ್ಲ ವಿಶಿಷ್ಟರೂಪದ ಒಂದು ಕಲಾಪ್ರಕಾರವಾಗಿದೆ ಎನ್ನುತ ಗೊಂಬೆಯಾಟದ ಬಗ್ಗೆ ತಿಳಿಯಪಡಿಸುವ ಕೃತಿಯ ಬಗ್ಗೆ ತಿಳಿಸುತ್ತಾ 'The puppet theater in America' ಎಂಬ ಕೃತಿಯಲ್ಲಿ ಗೊಂಬೆಯಾಟದ ಉತ್ಪತ್ತಿ ಮತ್ತು ವಿಸ್ತಾರದ ಸ್ವರೂಪವನ್ನು ತಿಳಿಸಲು ಯತ್ನಿಸಿದ್ದಾರೆ.[೨೬] ಮಾನವನು ಅಂತಃಶಕ್ತಿ ಪ್ರಪಂಚದ ಬಗ್ಗೆ ಪ್ರಾರ್ಥಿಸುವಾಗ ತನ್ನ ಮತ್ತು ಪ್ರಪಂಚದ ನಡುವಿನ ಮಧ್ಯವರ್ತಿಯಾಗಿ ಪ್ರತಿಮೆಗಳನ್ನು ರೂಪಿಸಿಕೊಂಡು, ತಾನೇ ಮುಖವಾಡವನ್ನು ಧರಿಸಿಕೊಂಡು ತಾನೇ ಪ್ರತಿಮೆಯನ್ನು ರೂಪಿಸಿಕೊಂಡು, ಅವನ ಅಂತಃಶಕ್ತಿಗೆ ಇಚ್ಚಿಸಿದಂತೆ ಒಂದು ನಿರ್ದಿಷ್ಟ ಕಲ್ಪನ ರೀತಿಯ ರೂಪವನ್ನು ನೀಡುತ್ತ ನಿರ್ದಿಷ್ಟ ನಾಯಕ ಪಾತ್ರವನ್ನು ಸೃಷ್ಟಿಸುತ್ತ ಇದನ್ನೇ ಒಂದು ನಾಟಕದ ರೂಪದಲ್ಲಿ ಗೊಂಬೆಗಳ ಮುಖಾಂತರ ರಂಗವೇದಿಕೆಗೆ ಕರೆತರಲಾಯಿತು. ಈ ನಟನೆಯೇ ರಂಗಭೂಮಿಗೆ

---

೨೬. ಪ್ರೊ. ಡಿ.ಕೆ. ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ. ಪುಟ. ೧೭೩.

ದಾರಿಮಾಡಿಕೊಟ್ಟಿತು. ತಾನು ಕಲ್ಪಿಸಿಕೊಂಡ ಪ್ರತಿಮೆಗೆ ಜೀವಧಾನ ಮಾಡಿ ಬೊಂಬೆಯೊಂದನ್ನು ಸೃಷ್ಟಿಸುವವರ ಮುಂದಣ ಹಂತವೇ ಗೊಂಬೆಯಾಟವಾಯಿತು. 'ಪಾಲ್‌ಮೆಪಾರ್ಲಿನ್'ರ ಈ ಅಂಶವನ್ನು ಗಮನಿಸಿದರೆ ಗೊಂಬೆಯಾಟದ ಪ್ರಾಚೀನತೆ ಗುರುತಿಸಲಾರದಷ್ಟು ಹಿಂದಕ್ಕೆ ಸರಿಯುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ".[೨೭]

ಇಲ್ಲಿ ಗೊಂಬೆಗಳ ಹುಟ್ಟು ಬೆಳವಣಿಗೆ ಮತ್ತು ಅವುಗಳ ಪ್ರಾಚೀನ ಪರಂಪರೆಯ ತುಂಬಾನೆ ಹಿಂದಿನದು ಎಂಬುದಾಗಿ ಪಾಲ್‌ಮೆಪಾರ್ಲಿನ್ ತಿಳಿಸಿದ್ದಾರೆ ಎಂದು ಗೊಂಬೆಗಳು ಆಕೃತಿ ಮತ್ತು ಅವುಗಳ ರಚನೆ ಮತ್ತು ಪರಂಪರೆಯನ್ನು ಗುರುತಿಸುವಲ್ಲಿ ಡಿ.ಕೆ. ರಾಜೇಂದ್ರ ಅವರು ವ್ಯಾಖ್ಯಾನಿಸಿದ್ದಾರೆ.

ಪ್ರಪಂಚದಾದ್ಯಂತ ಹೇಗೆ ಸೂತ್ರದ ಗೊಂಬೆಯಾಟವು ಹರಡಿದೆಯೋ ಹಾಗೆಯೇ ಅವುಗಳ ಮೂಲ ಪ್ರಾಚೀನದಿಂದ ಹಿಡಿದು ಸಂಸ್ಕೃತ ಪುರಾಣಗಳ ಮತ್ತು ಮೇರುಕವಿಗಳಾದ ಕಾಳಿದಾಸ, ಭವಭೂತಿ ಹರ್ಷ, ವಿಶಾಖದತ್ತ ಭಟ್ಟನಾರಾಯಣ ಮುಂತಾದವರ ನಾಟಕಗಳಲ್ಲಿಯೂ ಇವುಗಳ ಮೂಲ ಮತ್ತು ಸೂತ್ರಧಾರನೆಂಬ ಪಾತ್ರವು ಕಂಡುಬರುತ್ತದೆ. ಇದರಿಂದಲೂ ಗೊಂಬೆಯಾಟವು ಸಂಸ್ಕೃತದಿಂದ ಹಿಡಿದು ಪುರಾಣದವರೆಗೆ ಹಬ್ಬಿತ್ತು ಎಂಬುದನ್ನು ಡಿ.ಕೆ. ರಾಜೇಂದ್ರ ಅವರು ಸೂತ್ರದಗೊಂಬೆಯಾಟದ ಮೂಲ ಪ್ರಾಚೀನತೆಯನ್ನು ಗುರುತಿಸಿದ್ದಾರೆ.

ಸೂತ್ರದ ಗೊಂಬೆಯಾಟವು ಭಾರತದಲ್ಲಿ ಮಾತ್ರವಲ್ಲದೆ ದೇಶವಿದೇಶಗಳಲ್ಲಿಯೂ ಹಬ್ಬಿದ್ದು ಇಂಗ್ಲೆಂಡಿನಲ್ಲಿ ಅತಿಮಡಿಯ 'ಪ್ಯೂರಿಟಾನಿಕ್' ಕಾಲದಲ್ಲಿ ನಾಟಕಗಳನ್ನು ನೋಡುವುದರಿಂದ ಜನರ ನೀತಿ ಕೆಡುವುದೆಂದು ಸರ್ಕಾರ ನಾಟಕಭಿನಯವನ್ನು ಪ್ರತಿಬಂಧಿಸಿದಾಗ ಸೂತ್ರದ ಗೊಂಬೆ ಆಟಗಳೇ ಜನರಿಗೆ ವಿನೋದವನ್ನು ಒದಗಿಸುವ ಏಕೈಕಾ ಆಟವಾಗಿ ಕಂಡುಬರುತ್ತಿತ್ತು. ಭಾರತದಲ್ಲಿ ಗೊಂಬೆಯಾಟ ಪ್ರಾರಂಭದಿಂದಲೂ ಪ್ರಧಾನವಾಗಿ ಜನಪದ ಕಥೆಗಳನ್ನೇ ಹಾಗೂ ರಾಮಾಯಣ, ಮಹಾಭಾರತ, ಪುರಾಣ ಮತ್ತು ಭಾಗವತ ಕಥೆಗಳನ್ನೇ ಆದರಿಸಿ ಪ್ರಮುಖವಾಗಿ ಒಂದೇ ಜಾತಿನಲ್ಲಿ ಬೆಳೆದುಬಂದಿದ್ದು ಹೊಸ ಹುರುಪನ್ನು ಪಡೆದುಕೊಂಡಿವೆ ಎಂದು ಡಿ.ಕೆ.ರಾಜೇಂದ್ರ ಅವು ತೊಗಲು ಗೊಂಬೆಯಾಟದ ನೆಲೆಬೆಲೆಗಳನ್ನು ಶೋಧಿಸಿದ್ದಾರೆ.

---

೨೭ ಪ್ರೊ. ಡಿ.ಕೆ. ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ. ಪುಟ. ೧೭೪,

ಹಾಗೆಯೇ ಪಾಶ್ಚಾತ್ಯರಲ್ಲಿಯೂ ಹೊಸ ತಿರುವನ್ನು ಇದು ಪಡೆದುಕೊಂಡಿದ್ದು ಮನರಂಜನೆಗೆ ದಾರಿಯಾಗಿದೆ ಮತ್ತು ಆರ್ಥಿಕ ದೃಷ್ಟಿಯಿಂದ ದೊಡ್ಡ ಉದ್ಯಮವಾಗಿ ಬೆಳೆಯತೊಡಗಿತು. ಇಲ್ಲಿ ಒಂದೊಂದು ಪ್ರದೇಶದ ಪರಂಪರೆಗೆ ತಕ್ಕಂತೆ ಜನಪದ ಕಥೆಗಳು ಬೆಳೆದುಬಂದಿವೆ ಎಂಬುದನ್ನು ಡಿ.ಕೆ.ಆರ್ ತಿಳಿಸುವಲ್ಲಿ ಪ್ರಯತ್ನಿಸುತ್ತಿದ್ದು ಬಹಳ ಹಿಂದೆಯಷ್ಟೇ ಗೊಂಬೆಯಾಟಗಳು ಮಹತ್ವವನ್ನು ಪಡೆದಿದ್ದೊ ಎಂಬುದನ್ನು ಮರೆಯುವಂತಿಲ್ಲ ಎಂದಿದ್ದಾರೆ.

ಇಂತಹ ಒಂದು ವಾತಾವರಣ ಉಂಟಾದ ಮೇಲೆ ಇಂತಹ ಹಲವು ಪ್ರದರ್ಶನಗಳು ಅಲ್ಲಲ್ಲೇ ಹಲವೆಡೆ ಹರಡಿಕೊಂಡವು. ಕಲೆಗೆ ಹೆಚ್ಚು ಆಸ್ವಾದವನ್ನು ನೀಡುತ್ತ ಬಂದಂತಹ ಸಂದರ್ಭದಲ್ಲಿ ೧೯೧೩ರಲ್ಲಿ ಸೂತ್ರದ ಗೊಂಬೆಯಾಟದ ಸಂಘವನ್ನು ನ್ಯೂಯಾರ್ಕ್‌ನಲ್ಲಿ ಸ್ಥಾಪಿಸಿದ್ದರು. ಇದರಿಂದಾಗಿ ಸೂತ್ರದ ಗೊಂಬೆಯಾಟಕ್ಕೆ ಜನಸಾಮಾನ್ಯರಲ್ಲಿ ಅಗಾಧವಾದ ಬೆಂಬಲ ವ್ಯಕ್ತವಾಗುತ್ತ ಗೊಂಬೆಯಾಟವು ಜನಮನಗಳ ಮನ್ನಣೆಗೆ ಪಾತ್ರವಾಗಿತ್ತು. ಈ ಸಂಘ ನಿರ್ಮಾಣಗೊಂಡ ಮೇಲಂತೂ ಸೂತ್ರದ ಗೊಂಬೆಯಾಟವು ಸಹ ಹಲವಾರು ವಿಶ್ವವಿದ್ಯಾಲಯದಲ್ಲಿ ವಿಶೇಷ ಅಧ್ಯಯನವಾಗಿ ಹೊರಹೊಮ್ಮುತ್ತ ಬಂದಿತ್ತು. ಹಾಗೆಯೇ ನೂರಾರು ಗ್ರಂಥಗಳುಸಾವಿರಾರು ಮಹಾಪ್ರಬಂಧಗಳು ಲೆಕ್ಕವಿಲ್ಲದಷ್ಟು ಪತ್ರವ್ಯವಹಾರಗಳು ನಡೆದಿವೆ. ಅಂದಿನ ಸಂದರ್ಭದಲ್ಲೇ ಪತ್ರಿಕೆಗಳ ಮೂಲಕವು ಸಹ ಸೂತ್ರದಗೊಂಬೆಯಾಟವು ಚಾಲ್ತಿಯಲ್ಲಿತ್ತು. ಈ ಗೊಂಬೆಯಾಟ ಲೇಖನಗಳನ್ನು ಡಿ.ಕೆ. ರಾಜೇಂದ್ರವರು ತಮ್ಮ ಸಂಶೋಧನ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

"ಮೂರು ಸಾವಿರ ವರ್ಷಗಳ ಐತಿಹ್ಯವಿರುವ ರಾಜಸ್ಥಾನದ ಸೂತ್ರದ ಗೊಂಬೆ ಆಟವೆ ಬಹಳ ಪ್ರಾಚೀನವಾದುದ್ದು. ನೆರಳಿನಗೊಂಬೆಯಾಟವನ್ನು ಬಿಟ್ಟರೆ ಬಹುಶಃ ರಾಜಸ್ಥಾನದ ಸೂತ್ರದಗೊಂಬೆಯಾಟವೇ ಭಾರತದಲ್ಲೆಲ್ಲ ಪ್ರಾಚೀನವಾದುದ್ದೆನ್ನಬಹುದು ಎಂಬುದಾಗಿ ಅಭಿಪ್ರಾಯವು ಇದೆ" ವಿಕ್ರಮಾದಿತ್ಯನ ಕಾಲದಲ್ಲಿಯೇ ಸೂತ್ರದಗೊಂಬೆಯ ಆಟಗಾರರು ಮೊದಲಬಾರಿಗೆ 'ಸಿಂಹಾಸನ ಬತೇರಿ' ಎಂಬ ನಾಟಕವನ್ನು ರಚಿಸಿ ಪ್ರದರ್ಶಿಸುವುದಾಗಿ ತಿಳಿದುಬರುತ್ತದೆ. ಆ ಕಾಲದಲ್ಲಿ ರಾಜಮಹಾರಾಜರ ಕುಲದವರು ಮಾತ್ರ ಈ ನಾಟಕವನ್ನು ಆಡಿಸುತ್ತಿದ್ದರು ಇಲ್ಲ ರಾಜರುಗಳೇ ತಮ್ಮ ಕಥೆಯನ್ನು ನಾಟಕರೂಪದಲ್ಲಿ ಬರೆಯಿಸಿ ಆಡಿಸಿ ನೊಡುತ್ತಿದ್ದರು. ಒಂದೆಡೆ ರಾಜಮಹಾರಾಜರು ತಮ್ಮ ಜೀವನದ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಲು ಹಾಗೆಯೇ ತಮ್ಮ ಬದುಕಿನ ಘಟನೆಗಳನ್ನು ಮೆಲಕು ಹಾಕುತ್ತ ಜನಸಾಮಾನ್ಯರಿಗೆ ಮನರಂಜನೆಯನ್ನುಂಟುಮಾಡುತ್ತಿದ್ದರು. ಹೀಗೆ ಗೊಂಬೆಯಾಟವನ್ನು ಆಡಿಸುತ್ತಿದ್ದ ರಾಜರುಗಳೆಂದರೇ ಅಮರಸಿಂಹನು ತನ್ನ ಜೀವನವನ್ನು ಕುರಿತು ಬರೆಯಿಸಿದ

'ಅಮರಸಿಂಹ ರಾಠೋಡ' ನಾಟಕ ಹೆಚ್ಚು ಪ್ರಚಲಿತವಾಗಿತ್ತೆಂದು ಎಂಬುದು ಗಮನಾರ್ಹವಾದುದು. ಎಲ್ಲಾ ಅಂಶಗಳನ್ನು ಡಿ.ಕೆ.ರಾಜೇಂದ್ರ ಅವರು ಚರ್ಚಿಸಿರುವುದು ವಿಶೇಷವಾಗಿದೆ.

ರಾಜರ ಆಶ್ರಯ ಪಡೆದಿದ್ದ ಈ ಗೊಂಬೆಯಾಟದವರು ರಾಜರ ಆಶ್ರಯದಿಂದ ಮುಕ್ತಗೊಂಡ ನಂತರ ಸೂತ್ರದ ಪಟ ಕಳೆದುಕೊಂಡ ಗಾಳಿಪಟದಂತಾದರು. ಈ ವೃತ್ತಿಯನ್ನು ಕೈಬಿಡಲಾಗದೇ ದೇಶದ ಮೂಲೆಮೂಲೆಗಳಿಗೆ ಅಲೆಯುವ ಪರಿಸ್ಥಿತಿ-ಯುಂಟಾಯಿತು. ಒಂದೆಡೆ ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ಪರಿಚಯ ದೇಶದ ವಿವಿಧ ಭಾಗಗಳಿಗೆ ಹರಿದುಹೋಯಿತು. ಮತ್ತೊಂದೆಡೆ ಸಂಸ್ಕೃತಿ ಮತ್ತು ಪರಂಪರೆಯು ನಾಶದ ಹೊಸ್ತಿಲನ್ನು ತಲುಪಿರುವುದನ್ನು ಡಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ.

ಕರ್ನಾಟಕದ ಸಾಹಿತ್ಯ ಕೃತಿಗಳನ್ನು ಹಾಗೂ ಶಾಸನಗಳನ್ನು ಕೆದಕಿ ನೋಡಿದರೆ ಹಲವೆಡೆಗೊಂಬೆಯಾಟದ ಬಗ್ಗೆ ಪುರಾಣಗಳಿಂದಲೂ ಗೊಂಬೆಯಾಟದ ಮೂಲವನ್ನು ತಿಳಿಯಬಹುದಾಗಿದೆ. ಇವುಗಳ ಆಧಾರದಿಂದ ಗೊಂಬೆ ಆಟದ ಕಾಲವನ್ನು ಸ್ವಲ್ಪ ಗುರುತಿಸಬಹುದಾಗಿದೆ. ಸರಿಸುಮಾರು ೧೧೯೦ರ ನೇಮಿನಾಥ ಪುರಾಣದಲ್ಲಿ 'ತೊಗಲ್ಪಾಲೆಯಂದದಿ' ಎಂಬ ಪ್ರಯೋಗ ಕಂಡುಬರುತ್ತದೆ. ಹಾಗೆಯೇ ಶ್ರೀಕೃಷ್ಣ ಕಂಸರ ಹೋರಾಟದ ಸಂದರ್ಭದಲ್ಲಿ ಬರುವ ಈ ಮಾತು ಅರ್ಥಪೂರ್ಣವಾಗಿದೆ ಎಂದರೇ ಇದರ ಹಿಂದೆಯೇ ಸೂತ್ರದಗೊಂಬೆಯಾಟವು ತಲೆಎತ್ತಿತೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಇವೆಲ್ಲವುಗಳ ಮಾಹಿತಿಗಳಿಂದ ಪ್ರಮುಖವಾಗಿ ಕಣ್ಣಿಗೆ ಗೋಚರಿಸುವ ಅಂಶವೆಂದರೆ ಪುರಾಣಗಳಲ್ಲಿಯೂ ಗೊಂಬೆಯಾಟದ ಪ್ರಾಚೀನತೆ ನುಸುಳಿಕೊಂಡಿರುವುದನ್ನು ಹಾಗೂ ಪುರಾಣಗಳು ಸಹ ಗೊಂಬೆಯಾಟಕ್ಕೆ ತಮ್ಮೊಳಗೆ ನಿರ್ದಿಷ್ಟಸ್ಥಾನ ನೀಡಿದ್ದವು ಎಂಬುದನ್ನು ಹೇಳುತ್ತಾ ವಿಜಯನಗರ ಕಾಲದಲ್ಲಿಯೂ ಗೊಂಬೆಯಾಟ ಅತ್ಯಂತ ಉಚ್ಛ್ರಾಯಸ್ಥಿತಿಯನ್ನು ಪಡೆದುಕೊಂಡಿತೆಂಬ ಅಂಶ ಕ್ರಿ.ಶ. ೧೪೭೦ ಮತ್ತು ಕ್ರಿ.ಶ. ೧೫೨೧ರ ಶಾಸನಗಳಿಂದ ತಿಳಿದುಬರುತ್ತವೆ ಎಂಬುದಾಗಿ ಡಿ.ಕೆ.ರಾಜೇಂದ್ರರವರು ಶಾಸನಗಳಲ್ಲಿಯೂ ಮತ್ತು ಪುರಾಣಗಳಲ್ಲಿಯೂ ನಿರ್ದಿಷ್ಟಸ್ಥಾನವನ್ನು ಪಡೆದಿದ್ದು ರಾಜಮಹಾರಾಜರ ಕಾಲಘಟ್ಟದಲ್ಲಿ ಅದು ಅವಸಾನದ ಹಾದಿಯನ್ನು ಕಂಡಿತೆಂಬ ವಿಷಯವನ್ನು ವ್ಯಕ್ತಪಡಿಸಿದ್ದಾರೆ."[೨೮]

---

೨೮. ಪ್ರೊ. ಡಿ.ಕೆ. ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ. ಪುಟ. ೧೭೭-೧೭೮.

ಗೊಂಬೆಯಾಟವು ನಡೆಯುವ ಕಾಲ ಸಂದರ್ಭ ಅವುಗಳು ಒಂದು ರೀತಿಯಾಗಿ ಸಮೋಯೋಚಿತವಾದುದ್ದೆ. ಇದು ಮೂಲತಃ ಯಕ್ಷಗಾನ ಬಯಲಾಟದಂತೆಯೇ ರಾತ್ರಿ ಸಮಯವನ್ನು ಹೊಂದಿದ್ದರು. ಈ ಯಕ್ಷಗಾನ ಬಯಲಾಟಗಳಿಗಿಂತಲೂ ಭಿನ್ನ ಮನರಂಜನೆ ನೀಡುತ್ತದೆ. ಗೊಂಬೆಯಾಟದ ನಿರ್ದಿಷ್ಟ ಕಥೆಯ ಆಯ್ಕೆ ಮತ್ತು ವೇಷಭೂಷಣಗಳು ಅಲಂಕಾರಿಕಗೊಂಬೆಗಳು ಮತ್ತು ಕೆಲವು ಹಾಸ್ಯದ ಗೊಂಬೆಗಳ ಪ್ರವೃತ್ತಿಯನ್ನು ಮನಗಂಡು ಈ ಪ್ರಕಾರದಲ್ಲಿ ತಯಾರಾದ ಗೊಂಬೆಗಳು ಜನಸಾಮಾನ್ಯರಿಗೆ ವಿಶಿಷ್ಟರೀತಿಯ ಮನರಂಜನೆಯನ್ನು ನೀಡುವಲ್ಲಿ ಕಣ್ಣಿಗೆ ಮತ್ತು ಜನಸಾಮಾನ್ಯರ ಮನಸ್ಸಿನಲ್ಲಿ ನೆಲೆಗೊಳ್ಳುತ್ತವೆ ಎಂಬುದಾಗಿ ಹೇಳುತ್ತಾ ಗೊಂಬೆಯಾಟದ ನಟನೆ ಮತ್ತು ಸಂದರ್ಭಕ್ಕೆ ತಕ್ಕಂತೆ ಬಳಸುವ ಶಿಷ್ಟಭಾಷೆಯ ಗಟ್ಟಿನೆಲೆಯನ್ನು ತಿಳಿಸುವಂತಹ ಎಚ್ಚರಿಕೆಯ ಕೆಲಸವನ್ನು ಡಿ.ಕೆ.ರಾಜೇಂದ್ರರವರು ಮಾಡಿದ್ದಾರೆ.

ತೊಗಲು ಗೊಂಬೆಯಾಟ ಭಾರತದಲ್ಲಿ ಇಂದಿಗೂ ಹೆಚ್ಚು ಪ್ರಚಲಿತವಾಗಿ ಅತಿಪ್ರಾಚೀನ ಕಲಾಪ್ರಕಾರವಾಗಿದ್ದು ಪ್ರಾಚೀನತೆಯನ್ನು ತಿಳಿಸುತ್ತ ಈ ಗೊಂಬೆಯಾಟವು ಚೈನಾದಲ್ಲಿ ಹಾನ್‌ರಾಜರ ಕಾಲದಲ್ಲಿ ಇತ್ತೆಂಬುದು ತಿಳಿದುಬರುತ್ತದೆ. ಇದರ ಪ್ರಸ್ತಾಪ ಜಪಾನಿನ ಪ್ರಾಚೀನ ಸಾಹಿತ್ಯದಲ್ಲಿಯೂ ಕೂಡ ಕಂಡುಬರುತ್ತದೆ. ಕ್ರಿ.ಪೂ. ೩ನೇ ಶತಮಾನದಲ್ಲಿಯೇ ತೊಗಲುಗೊಂಬೆಯಾಟವು ಆಂಧ್ರದಲ್ಲಿ ಪ್ರಚಾರದಲ್ಲಿ ಇದ್ದಂತೆ ಆಧಾರಗಳಿವೆ. ಈ ಕಲೆ ಶಾತವಾಹನ, ಪಲ್ಲವ, ಚಾಳುಕ್ಯ, ಕಾಕತೀಯ ರಾಜರ ಅವದರಣಿಯವನ್ನು ಪಡೆದು ವಿಜಯನಗರ ತಂಜಾವೂರಲ್ಲಿ ಅತ್ಯಂತ ಉನ್ನತ ಸ್ಥಿತಿಯನ್ನು ಪಡೆದು ಪ್ರಾಚೀನ ರೇವು ಪಟ್ಟಣಗಳಾದ ಕಳಿಂಗ ಪಟ್ಟಣ ಭೀಮಪಟ್ಟಣ, ಕೋರಂಗಿ ಮಚಲಿಪಟ್ಟಣಂ, ವಾಡ್ರೋವು ಕೋತ್ತಪಟ್ಟಣಂ ಇವುಗಳಿಂದಲು ಸಹ ತೊಗಲು ಗೊಂಬೆಗಳೂ ಆಗ್ನೇಯ ಏಷ್ಯಾವನ್ನು ಪ್ರವೇಶಿಸಿದವು. ಕಲೆಗಳು ಆದೇಶದಲ್ಲಿಯೂ ಸಹ ಉತ್ತಮ ಹೆಸರನ್ನು ಮಾಡಿದವು. ವಿದೇಶದ ಉತ್ಸವದಲ್ಲಿಯೂ ಗೊಂಬೆಗಳ ಪ್ರದರ್ಶನವಿರುತ್ತಿತ್ತು. ಅಲ್ಲಿಂದ ಸಂಬಂಧವನ್ನು ಮುಂದುವರಿಸಿಕೊಂಡುಹೋಗುತ್ತ ಪಶ್ಚಿಮ ಮುಖವಾಗಿ ಪರ್ಶಿಯಾ ಟರ್ಕಿಯಗಳನ್ನು ಹಾಯ್ದು ಗ್ರೀಸ್‌ದೇಶವನ್ನು ಪ್ರವೇಶಿಸಿತು. ಗ್ರೀಸ್‌ನಲ್ಲಿ ಹೊಸರೂಪವನ್ನು ತಳೆದು ಉತ್ತರ ಆಫ್ರಿಕಾದ ಮುಸ್ಲಿಂ ದೇಶಗಳಿಗೆ ೧೭ನೇ ಶತಮಾನದಲ್ಲಿ ಇಟಲಿಗೆ ಹಾಗೂ ಅಲ್ಲಿಂದ ವಿಪ್ಲವ ಕಾಲದಲ್ಲಿ ಫ್ರಾನ್ಸ್ ದೇಶದ ವರ್ಸೆಲ್ಸ್‌ಗೆ ಪ್ಯಾರಿಸ್‌ಗೆ ವ್ಯಾಪಿಸಿತು ಎಂಬುದನ್ನು ಮನಗಂಡ ಡಿ.ಕೆ.ರಾಜೇಂದ್ರವರು ದೇಶವಿದೇಶಗಳಲ್ಲಿಯೂ ಸಹ ಈ ಕಲೆಗಳು ಹರಡಿಕೊಂಡಿದ್ದವು ಮತ್ತು ಹೆಚ್ಚು ವಿದೇಶದಲ್ಲೂ ಹೆಚ್ಚು ಪ್ರಾವೀಣ್ಯತೆಯನ್ನು ಪಡೆದಿದ್ದವು ಎಂಬುದನ್ನು ಗಂಭೀರವಾಗಿ ಚರ್ಚಿಸಿದ್ದಾರೆ.

ಕರ್ನಾಟಕದಲ್ಲಿ ಮಲೆನಾಡು ಪ್ರಾಂತ್ಯದಲ್ಲಿ ಕೆಲವು ಭಾಗಗಳು ಹೊರತಾಗಿ ಇನ್ನುಳಿದ ಭಾಗಗಳಲ್ಲಿ ಇಂದಿಗೂ ಈ ಆಟವನ್ನು ನೋಡಬಹುದಾಗಿದೆ. ಈ ಗೊಂಬೆಯಾಟ ಆಡಿಸುವವರಿಗೆ ಆಂಧ್ರದಲ್ಲಿ ಬೊಮ್ಮಲಾಟ ವಾಳ್ಳು ಎಂದು ಕರ್ನಾಟಕದಲ್ಲಿ ಗೊಂಬೆರಾಮ, ಶಿಳ್ಳೇಕ್ಯಾತರು ಎಂದು ಪ್ರತ್ಯೇಕ ಪದಗಳಿಂದ ಕರೆಯುವರು. ಅವರಿಗೆ ಈ ಹೆಸರು ಬರಲು ಪ್ರಮುಖ ಕಾರಣಗಳನ್ನು ಹೇಳುತ್ತಾ 'ಚಿತ್ರಮರಾಠರು' ಎಂಬ ಮತ್ತೊಂದು ಹೆಸರಿದೆ ಎಂಬುದಾಗಿ ಡಿ.ಕೆ.ರಾಜೇಂದ್ರರವರು ಗೊಂಬೆಯಾಟದವರು ಮರಾಠರ ಸಂತತಿಗೆ ಸೇರಿದವರೆಂದು ಸೂಚಿಸುತ್ತಾ ಡಿ.ಕೆ.ಆರ್. ಗೊಂಬೆಯಾಟದವರ ಸಂತತಿ ಮತ್ತು ವಂಶಪಾರ್ಯದ ಕಿರುಪರಿಚಯವನ್ನು ಇಲ್ಲಿ ನೀಡಿದ್ದಾರೆ. ಈ ವಂಶಕ್ಕೆ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ ಎಂದು ಹೇಳುತ್ತಾ ಪರ್ಯಾಯ ಹೆಸರಾದ 'ಚಿತ್ರಮರಾಠರು' ಎಂಬ ಮತೊಂದು ಹೆಸರನ್ನು ಸೂಚಿಸಿದ್ದಾರೆ. ಸೂತ್ರದಗೊಂಬೆಯಾಟದಲ್ಲಿ ಪ್ರಮುಖವಾಗಿ ಕಂಡುಬರುವ ಪಾತ್ರವೆಂದರೇ ಸಿಳ್ಳೇಖ್ಯಾತನ ಪಾತ್ರ ಆತನ ಹೆಂಡತಿ ಬಂಗಾರಕ್ಕ ಇವರಿಬ್ಬರು ಜೋಡಿಯಲ್ಲಿಯೇ ರಂಗವನ್ನು ಪ್ರವೇಶಿಸುತ್ತಾರೆ. ಇಲ್ಲಿ ಗಂಡಹೆಂಡತಿಯ ಸಂಬಂಧಗಟ್ಟಿತನದ ಬಗ್ಗೆ ಅರಿವುಮೂಡಿಸಿದ್ದಾರೆ.

ಸಿಳ್ಳೆಖ್ಯಾತರನ್ನು ತೀರಾ ಕೆಂಪು ಅಥವಾ ಕಪ್ಪುಬಣ್ಣ, ಉಬ್ಬಹೊಟ್ಟೆ, ಬೋಳುತಲೆ ಪುಳ್ಳ ಜುಟ್ಟಿನ ದಪ್ಪತುಟಿಯ ವಕ್ರವ್ಯಕ್ತಿಯಾಗಿ ಕಾಣಿಸಿಕೊಂಡು ಪ್ರೇಕ್ಷಕರ ಮನದಲ್ಲಿ ಹಾಸ್ಯದ ಹೊನಲನ್ನು ಉಕ್ಕಿಸುತ್ತಾ, ಅವರೆಲ್ಲರ ಮನಗಳಲ್ಲಿ ನಿರ್ದಿಷ್ಟ ಸ್ಥಾನವನ್ನು ಪಡೆಯುತ್ತಾನೆ ಇವನು ಹಾಸ್ಯದ ನುಡಿಗಳೆಲ್ಲ ಅಶ್ಲೀಲದ ನುಡಿಗಳೇ ಆಗಿದ್ದು ಮುಂದುವರಿಯುತ್ತವೆ. ಇಲ್ಲಿ ಡಿ.ಕೆ.ರಾಜೇಂದ್ರರವರು ಸಿಳ್ಳೆಕ್ಯಾತನ ಪಾತ್ರ ಮತ್ತು ಆತನ ಹೆಂಡತಿಯಾದ ಬಂಗಾರಕ್ಕನನ್ನು ಪರಿಚಯಿಸುತ್ತಾ ಹಾಗೆಯೇ ಇವರ ಗುಣಲಕ್ಷಣವನ್ನು ಪರಿಚಯಿಸಿದ್ದಾರೆ.

ಇವರು "ಮಹಾರಾಷ್ಟ್ರದ ಕೊಲ್ಲಾಪುರ ಅಥವಾ ಸತಾರದ ಕಡೆಗಳಿಂದ ಬಹಳ ಹಿಂದೆಯೇ ಕನ್ನಡನಾಡಿಗೆ ಬಂದಿದ್ದರು ಎಂಬ ವಿಷಯ ಬೆಳಗಾಂ ಗೆಜೆಟಿಯರ್‌ನಲ್ಲಿ ಪ್ರಕಟವಾಗಿದೆ".[೨೯] ಇಂದಿಗೂ ಅವರು ಆಟದ ಪ್ರಾರಂಭದಲ್ಲಿ ವಿಘ್ನೇಶ್ವರ, ಸರಸ್ವತಿಯರ ಪೂಜೆ ಆದಮೇಲೆ ತಮ್ಮ ಜೀವನಮಾರ್ಗಕ್ಕೆ ನೆರವಾದ ಓವಜನನ್ನು ನೆನೆದುಕೊಂಡು ಬಿರುದು ವಾಳ್ಳದಿ ಬಿಕ್ಷಮುವಾದಿ ಬಿರುದು ಆತನದು. ಅದರ ಫಲವಾದ ಭಿಕ್ಷೆ ನಮ್ಮದು ಎಂದು ಹೇಳುತ್ತಾರೆ. ಇವೆಲ್ಲ ಅಂಶಗಳನ್ನು ಗಮನಿಸಿದಾಗ ಮೇಲಿನ ವಿಷಯಗಳು ಸತ್ಯಾಂಶವಾಗಿದ್ದವು. ಅವರ ಮೂಲ ಪರಂಪರೆಯು ಹಿಂದೆಯೇ ಕರ್ನಾಟಕಕ್ಕೆ ಪಾದರ್ಪಣೆ ಮಾಡಿದ್ದು ಇವರು

೨೯. ಪ್ರೊ. ಡಿ.ಕೆ. ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ, ಪುಟ. ೨೦೨.

ಕರ್ನಾಟಕಕ್ಕೆ ಹಳೆಯ ಮೂಲದವರಾಗಿಯೇ ಮನಗಂಡಿದ್ದಾರೆ. ಇಲ್ಲಿ ಸರಸ್ವತಿ, ವಿಘ್ನೇಶ್ವರ ಮುಂತಾದ ಅಂದರೇ ಕರ್ನಾಟಕ ಸಂಪ್ರದಾಯ ಆಚರಣೆ ವಿಧಿವಿಧಾನಗಳಿಗೂ ಇವರು ಭಾಗಿಯಾಗಿದ್ದರು. ಪ್ರೊ.ಡಿ.ಕೆ ರಾಜೇಂದ್ರರವರು ಸಿಳ್ಳೇಕ್ಯಾತರ ಪಾರಂಪರ್ಯದ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಗೊಂಬೆಗಳ ತಯಾರಿ ಬಗ್ಗೆ ತಿಳಿಸುತ್ತಾ ಸೂತ್ರದಗೊಂಬೆಗಳನ್ನು ಮತ್ತು ತೊಗಲುಗೊಂಬೆಗಳನ್ನು ತಯಾರಿಸುವುದು ಎಮ್ಮೆ ಚರ್ಮ, ಜಿಂಕೆ ಚರ್ಮ ಎಂಬುದಾಗಿ ಅವುಗಳ ಉತ್ಪತ್ತಿಯ ವಿಧಾನಗಳ ಬಗ್ಗೆ ತಿಳಿಸಿದ್ದಾರೆ. ಇವುಗಳ ವೇಷಭೂಷಣಗಳನ್ನು ಗಮನಿಸುತ್ತಾ ಸಾಗಿದರೆ ಸೂತ್ರದಗೊಂಬೆಯಾಟ, ತೊಗಲು-ಗೊಂಬೆಯಾಟದ ಕಥಾವಸ್ತುವೂ ಕೂಡ ರಾಮಾಯಣ, ಮಹಾಭಾರತ, ಪುರಾಣಕಥಾ ವಸ್ತುವನ್ನೇ ಉಳ್ಳವೆಂದು ಇವುಗಳ ಕಥಾ ಮತ್ತು ವಸ್ತು ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಸೂತ್ರದ ಗೊಂಬೆಯಾಟ ಮತ್ತು ತೊಗಲುಗೊಂಬೆಯಾಟಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅವುಗಳ ಪೂರ್ಣ ಪರಿಚಯ ನೀಡುತ್ತ ಅವುಗಳ ನೀತಿ ರೀತಿ ಕ್ರಮಗಳ ಬಗ್ಗೆ ಅವುಗಳ ಬೆಳವಣಿಗೆಯ ಅಂದಿನ ಸ್ಥಿತಿಯನ್ನು ಇಂದಿನ ಸ್ಥಿತಿಗೆ ತಲುಪಿರುವ ಅವುಗಳ ಪರಿಸ್ಥಿತಿಯನ್ನು ಶ್ರೀ ಸಾಮಾನ್ಯರಲ್ಲಿ ಮತ್ತು ಸಾಹಿತ್ಯಾಭ್ಯಾಸಿಗಳಲ್ಲಿ ಮನಮುಟ್ಟುವಂತೆ ಅರಿವು ಮೂಡಿಸುವಲ್ಲಿ ಎಚ್ಚರಿಕೆಯ ಕೆಲಸವನ್ನು ಡಿ.ಕೆ.ರಾಜೇಂದ್ರರವರು ಮಾಡಿದ್ದಾರೆ. ಕನ್ನಡ ಜಾನಪದ ಲೋಕದ ಸಂಶೋಧನಾ ಗ್ರಂಥದ ಸಾಲಿನಲ್ಲಿ ಈ ಗ್ರಂಥ ಪ್ರಥಮ ಸಾಲಿನಲ್ಲಿ ನಿಲ್ಲುತ್ತದೆ. ಡಿ.ಕೆ.ರಾಜೇಂದ್ರ ಅವರ ಸಂಶೋಧನ ಪ್ರಜ್ಞೆ, ಪರಿಶ್ರಮ ತರ್ಕಬದ್ಧ ವ್ಯಾಖ್ಯಾನ ಅರ್ಥಪೂರ್ಣವಾಗಿದೆ.

ಜನಪದ ನಾಟಕಗಳ ಮೂಲ

ಪ್ರೊ. ಡಿ.ಕೆ.ರಾಜೇಂದ್ರರವರು ಸಂಶೋಧಿಸಿರುವ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಎಂಬ ಕೃತಿ ಅತ್ಯಂತ ಮೌಲಿಕವಾದುದು. ಇವರ ಜನಪದ ನಾಟಕಗಳ ಮೂಲ ಎಂಬ ಪ್ರಬಂಧದಲ್ಲಿ ಈ ಕೆಳಕಂಡ ಅಂಶಗಳನ್ನು ಲೇಖಕರು ಚರ್ಚಿಸಿದ್ದಾರೆ. ಭಾರತೀಯ ಸಂಪ್ರದಾಯದಲ್ಲಿ ಯಾವುದೊಂದರ ಅಥವಾ ಎಲ್ಲದರ ಮೂಲವನ್ನು ಯಾವ ತೊಡಕು ಇಲ್ಲದೆ ಸುಲಭವಾಗಿ ಗುರುತಿಸಬಹುದು. ಅವುಗಳಿಗೆ ಕೊಡುವ ವಿವರಣೆಯೂ ಸಂಪ್ರದಾಯ ಮೂಲವಾದ್ದರಿಂದ ಅದು ಅಷ್ಟೇ ಸುಲಭವಾಗಿರುತ್ತದೆ. ಅನೂಚಿತವಾಗಿ ಬೆಳೆದುಬಂದ ಕಲೆಗಳ ವಿಷಯದಲ್ಲಿ ಸಂಶೋಧನೆಗೆ ತೊಡಗಿದಾಗ ಈ ಮಾತು ಅನುಭವಕ್ಕೆ ಬರುತ್ತದೆ. ಎಲ್ಲದಕ್ಕೂ ದೇವರತ್ತ ಕೈ ತೋರಿಸುವುದು ಭಾರತೀಯ ಧರ್ಮದ ಒಂದು ಪ್ರಭಾವ ಹಾಗಂತ ಎಲ್ಲವನ್ನು ದೇವರಿಗೆ ಬಿಟ್ಟು ಕೈಕಟ್ಟಿ ಕುಳಿತರೆ, ಮಾಹಿತಿ ದೊರೆಯುವುದಿಲ್ಲ. ಸತ್ಯದ ಶೋಧನೆಗೆ

ಹೊರಟವನು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಡಿ.ಕೆ. ರಾಜೇಂದ್ರರವರು ಇಲ್ಲಿ ಸಂಶೋಧನೆಯ ಕಾರ್ಯದ ಏಕಾಗ್ರತೆ ಮತ್ತು ಅಧ್ಯಯನದ ವಿಧಿ ವಿಧಾನಗಳ ಕ್ರಮಗಳನ್ನು ಸೂಚಿಸಿದ್ದಾರೆ.

ಜನಪದ ನಾಟಕಗಳ ಮೂಲವನ್ನು ಹುಡುಕ ಹೊರಟಾಗಲು ಕೆಲವು ಸಮಸ್ಯೆಗಳು ಎದುರಾಗುತ್ತವೆ. ಯಕ್ಷಗಾನದಿಂದ ಭರತಮುನಿಯತನಕ, ಇಂದ್ರನತನಕ, ತಾಂಡವ ಚಾರ್ಯನಾದ ಶಿವನ ತನಕವೂ ಅಷ್ಟೇ ಏಕೆ ಯಕ್ಷರಿಂದಲೇ ನೇರವಾಗಿ ಹುಟ್ಟಿಬಂದ ಕಲೆ ಎನ್ನುವವರೆಗೂ ಇದರ ವ್ಯಾಪ್ತಿ ಹಬ್ಬಿದೆ. ಇದು ಶ್ರಮವಿಲ್ಲದ ಬಹಳ ಸುಲಭವಾದ ಕೆಲಸವೆನಿಸುತ್ತಿದ್ದರು. ಪ್ರಯತ್ನದಲ್ಲಿ ವಿಫಲರಾದಾಗ ಆಡುಮಾತು. ಇದರಿಂದ ಸುಲಭವಾಗಿ ವಿಷಯವನ್ನು ಕ್ಲಿಷ್ಟತೆಯಿಂದ ನುಣುಚಿಕೊಳ್ಳಬಹುದಲ್ಲದೆ ಸತ್ಯಾನ್ವೇಷಣೆ ಮಾಡಿದಂತೆ ಆಗುವುದಿಲ್ಲ. ಆದ್ದರಿಂದ ಯಾವುದೇ ವಿಷಯದ ಸತ್ಯಸಮಗತಿಯನ್ನು ಅರಿಯಬೇಕಾದರೆ ಆಳವಾದ ಅಧ್ಯಯನ ಮುಖ್ಯವಾಗಿ ಕೆಲಸಮಾಡುತ್ತದೆ. ಸತ್ಯಾನ್ವೇಷಣೆ ಹಾದಿಯಲ್ಲಿ ಸಾಗಿ ಜನಪದ ನಾಟಕಗಳ ಬಗ್ಗೆ ಮೂಲವನ್ನು ತೋರಿಸಬೇಕಾಗುತ್ತದೆ. ಜನಸಾಮಾನ್ಯರಿಂದ ಜನಸಾಮಾನ್ಯರಿಗೆ ರೂಪ ತಳೆದ ಈ ನಾಟಕಗಳು ಜನರಿಗೆ ಜ್ಞಾನವನ್ನು ತುಂಬುವ ವಾಹಿನಿಯಾಗಿ ಬೆಳೆದು ಬಂದಿತು ಎಂಬ ಅಂಶವನ್ನು ಲೇಖಕರು ಚರ್ಚಿಸಿದ್ದಾರೆ. ಒಂದು ಕಲೆ ಪ್ರತಿಯೊಂದು ಸಂದರ್ಭದಲ್ಲಿಯೂ ಆಚರಿಸಲ್ಪಡುತ್ತಿದ್ದ ವಿದ್ಯೆಯಾಗಿತ್ತು. ಒಂದು ಜನಸಮುದಾಯಗಳು ಸೇರಿದ್ದಲ್ಲಿ ಕಲೆ ಉತ್ಪತ್ತಿಗೊಳ್ಳುತ್ತದೆ. ಅಂದರೆ ಅವರ ಮಾತುಗಾರಿಕೆಯ ಶೈಲಿಯಲ್ಲಿಯು ಹಾಸ್ಯದ ಹೊನಲನ್ನು ಕಂಡಂತೆಯೆ ಅವರುಗಳು ಒಟ್ಟಾಗಿ ಸೇರಿಕೊಂಡ ಸಂದರ್ಭದಲ್ಲಿ ಕುಣಿತ ಹಾಡುಗಾರಿಕೆ ಮುಂತಾದವುಗಳಿಂದ ಕಲೆಗಳು ಉತ್ಪತ್ತಿಯನ್ನು ನಾವು ನೋಡಬಹುದಾಗಿದ್ದು, ಪ್ರೊ. ಡಿ.ಕೆ. ರಾಜೇಂದ್ರವರು ಒಂದು ಸಮುದಾಯದಲ್ಲಿ ಅಡಗಿದ್ದು ಕಲೆ ಮತ್ತು ಅವರಿಂದ ಸಂದರ್ಭಕ್ಕೆ ಉಚಿತವಾಗಿ ಕಲೆ ಜನ್ಮ ತಾಳುವ ರೀತಿಯನ್ನು ಪರಿಚಯಿಸಿದ್ದಾರೆ.

ಜನಪದ ನಾಟಕವೇ ಮುಂದೆ ಯಕ್ಷಗಾನ ಎಂಬ ಗಾನ ಪ್ರಕಾರವನ್ನು ಬಳಸಿಕೊಂಡು ಯಕ್ಷಗಾನ, ಬಯಲಾಟ ಇವು ಪ್ರಾರಂಭದೆಸೆಯಲ್ಲಿ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದರೂ ಕಾಲಕಳೆದಂತೆ ಪರಿಷ್ಕಾರಗೊಂಡು ಉತ್ತಮ ಮಟ್ಟಕ್ಕೇರಿತು. ಅನಂತರ ಭರತನಿಂದ ಸೃಷ್ಟಿಗೊಂಡ ನಾಟಕದ ನಿಯಮಗಳೂ ಇದರ ಮೇಲೆ ಪ್ರಭಾವ ಬೀರಲು ಸಾಧ್ಯ ಅಂತೂ ಜನಪದ ನಾಟಕ ಜನಪದ ಅಂಶಗಳನ್ನೇ ಸಂಪೂರ್ಣವಾಗಿ ಒಳಗೊಂಡು ಜನಪದ ಮೂಲದಿಂದ ಬಂದದ್ದು

ಎಂಬುದನ್ನು ಮರೆಮಾಚುವಂತಿಲ್ಲ ಎಂಬ ಅಂಶವನ್ನು ಡಿ.ಕೆ.ರಾಜೇಂದ್ರರವರು ಗುರುತಿಸಿದ್ದಾರೆ.

ನಮ್ಮ ಜನಪದ ಬಾಳು ಅನೇಕ ನಂಬಿಕೆಗಳ ಹಾಗೂ ಆಚಾರಗಳ ಕೈಗೊಂಬೆಯಾಗಿತ್ತು. ಪ್ರಕೃತಿಯ ನಾನಾ ವಿಧಿ ವೈಚಿತ್ರ್ಯಗಳಿಗೆ ಹೆದರಿ ಅವುಗಳ ಓಲೈಸಿಕೊಳ್ಳಲು ಕುಣಿತದ ಮೂಲಕ ಹಬ್ಬ ಆಚರಣೆಗಳ ಮೂಲಕ ಪೂಜಾ ಯಾಗಗಳ ಮೂಲಕ ವಿಭಿನ್ನ ರೀತಿಯಲ್ಲಿ ಪ್ರಯತ್ನಿಸುವ ಮೂಲಕ ಒಟ್ಟಾಗಿ ನಾಟಕದಂತಹ ಕಲ್ಪನೆ ಮೂಡಿತು. ಇದಕ್ಕೆ ಸ್ಪಷ್ಟ ನಿದರ್ಶನ ನೀಡದೆ ಹೋದರು ಜನಪದ ನಾಟಕಗಳ ಬೀಜರೂಪ ಇಲ್ಲಿಯೇ ಕುಡಿಯೊಡೆದಿದೆ ಎನ್ನುವುದರಲ್ಲಿ ಸಂಶಯವಿಲ್ಲ ಎಂದು ಡಿ.ಕೆ.ರಾಜೇಂದ್ರರವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗ್ರೀಕರ ನಾಟಕಗಳ ಇತಿಹಾಸವನ್ನು ಗಮನಿಸಿದಾಗಲು ನಾವೂ ಒಂದೇ ರೀತಿಯ ದೇವತಾರಾಧನೆ ಆಚರಣೆ ಸಂಪ್ರದಾಯ ಕಂಡುಬರುತ್ತಿತ್ತು ಎನ್ನುತ್ತ ನಾಟಕಗಳ ಮೂಲವನ್ನು ಶೋಧಿಸಿದ್ದಾರೆ. ಭಕ್ತರು ಅದನ್ನು ಗುರುತಿಸುವುದಕ್ಕೆ ಅಷ್ಟೇನೂ ಸೂಕ್ಷ್ಮ ದೃಷ್ಟಿಬೇಕಾಗಿರಲಿಲ್ಲ. ಆ ನಡವಳಿಕೆಯನ್ನು ಡ್ರೊಮನ್ (Droman) ಎನ್ನುತ್ತಿದ್ದರು. ಎಂದರೆ ಆಡಿ ತೋರಿಸಿದ ಸಂಗತಿಗಳು ಡ್ರಾಮ (Drma)ರೂಪಕ ಎಂಬುದಕ್ಕೆ ಅದು ಬಹಳ ಸಮೀಪ. ಎರಡನೆಯದಾಗಿ ಜನಪದ ಸಾಹಿತ್ಯದಲ್ಲಿ ಅನುಕರಣಾಂಶ (mimeticelement) ಮೊದಲಿನಿಂದಲೂ ಇದ್ದೇ ಇತ್ತು. ಹೀಗೆ ಅಲ್ಲಿಯ ರಂಗಭೂಮಿ ರೂಪುಗೊಂಡಿತು ಎಂದು ವಿದ್ವಾಂಸರು ಅಭಿಪ್ರಾಯಗಳನ್ನು ಡಿ.ಕೆ.ರಾಜೇಂದ್ರ ಅವರು ಚರ್ಚಿಸಿದ್ದಾರೆ. ನಾಟಕದ ಸನ್ನಿವೇಶಗಳನ್ನೊಳಗೊಂಡ ಅನೇಕ ಬಗೆಯ ಜನಪದ ನೃತ್ಯಗಳು ಆಟದ ಬಗೆಗಳು ಇಂದಿಗೂ ಕರ್ನಾಟಕದ ಎಲ್ಲೆಡೆಯಲ್ಲಿಯೂ ಹಾಗೆಯೇ ದಕ್ಷಿಣ ಕರ್ನಾಟಕದ ಸುತ್ತಮುತ್ತಲ ಪ್ರದೇಶದಲ್ಲಿ ಜನಪದ ನೃತ್ಯಗಳು ಮೇಳೈಸಿದ್ದವು ಎಂಬುದನ್ನು ರಾಜೇಂದ್ರರವರು ಗುರುತಿಸಿದ್ದಾರೆ.

ಕರ್ನಾಟಕದಲ್ಲಿ ರೂಢಿಯಲ್ಲಿರುವ ವೀರಗಾಸೆ ಕುಣಿತ, ಪೂಜಾಕುಣಿತ, ಸೋಮನಕುಣಿತ, ಲಿಂಗದ ಬೀರನ ಕುಣಿತ, ಗೊರವರ ಕುಣಿತ, ಕುರುಬರ ಕುಣಿತ, ಕರಡಿಮಜಲು ಕುಣಿತ, ಕೀಲುಕುದುರೆ ಕುಣಿತ, ರಂಗದಕುಣಿತ, ವೀರಭದ್ರನ ಕುಣಿತ, ಕೋಲುಬಸವ ಆಟ ಅಥವಾ ಮಾರಿಕುಣಿತವಾಗಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಾಗಲಿರುವ ಭೂತದ ಕುಣಿತ ನಾಗನೃತ್ಯ ಅಥವಾ ನಾಗಮಂಡಲ ನೃತ್ಯವಾಗಲಿ, ಉತ್ತರಕರ್ನಾಟಕದಲ್ಲಿ ರೂಢಿಯಲ್ಲಿರುವ ವೀರಮುಖಿಕುಣಿತ, ಯಲ್ಲಮ್ಮನ ಕುಣಿತ, ಪುರುವಂತರ ಕುಣಿತ, ಕೋಲಾಟದ ಕುಣಿತ, ಕೋಲೆಬಸವನ ಆಟ, ಮಾರಮ್ಮನ ಕುಣಿತವೇ

ಮೊದಲಾದ ಜನಪದ ನೃತ್ಯ ಬಗೆಗಳಲ್ಲಿ ನಾಟಕದಲ್ಲಿ ಬರುವಂತಹ ಸಂಭಾಷಣೆ ಸೊಬಗು ಸನ್ನಿವೇಶಗಳನ್ನು ಹಾಗೂ ಮಾರಮ್ಮನ ಕುಣಿತದಲ್ಲಾಗಲಿ ಕೋಲೆಬಸವನ ಆಟದಲ್ಲಾಗಲಿ, ಸಂಭಾಷಣೆಯ ವೈಖರಿಯನ್ನು ಗಮನಿಸಿದಾಗ ನಾಟಕದ ಬೀಜರೂಪ ಅಡಗಿಕೊಂಡಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ ಎಂದು ಜನಪದ ನಾಟಕದ ಮೂಲವನ್ನು ಸಂಶೋಧಕರು ಹುಡುಕಿದ್ದಾರೆ. ಧಾರ್ಮಿಕ ಅಂಶಗಳೂ ಸಂಸ್ಕೃತಿಯ ನೆಲೆಗಷ್ಟೇ ಅಲ್ಲ ಅವು ಸಂಪ್ರದಾಯಕವಾಗಿ ಉಳಿದುಬಂದಿದ್ದು, ಚಿತ್ತ-ಭಿತ್ತಿಯ ಮೇಲೆ ಅಚ್ಚಳಿಯದೆ ಉಳಿದಿರುತ್ತವೆ. ಅಷ್ಟೇ ಅಲ್ಲದೆ ಅವಕ್ಕೆಲ್ಲ ತಮ್ಮದೆಯಾದ ಧಾರ್ಮಿಕ ಇತಿಹಾಸವಿರುತ್ತದೆ ಎಂಬುದು ಗಮನಾರ್ಹವಾದುದು. ಪ್ರಕೃತಿ ಆರಾಧನೆ ದುಷ್ಟಶಕ್ತಿಗಳ ವಶೀಕರಣ ಮುಂತಾದ ಸಂದರ್ಭದಲ್ಲಿ ಉಂಟಾದ ಧಾರ್ಮಿಕ ವೃತ್ತದಲ್ಲಿಯೂ ಜನಪದ ನಾಟಕಗಳ ಹುಟ್ಟಿಗೆ ಪ್ರೇರಣೆಯೆನಿಸಿದೆ. ಉದಾಹರಣೆಗೆ ದಕ್ಷಿಣ ಮತ್ತು ಉತ್ತರಕನ್ನಡ ಜಿಲ್ಲೆಗಳ ಜನಪದ ನಾಟಕದ ವೇಷಭೂಷಣಗಳನ್ನು, ನೃತ್ಯಕ್ರಮವನ್ನು ಗಮನಿಸಿ ಅಲ್ಲಿ ಹೆಚ್ಚು ಪ್ರಚಲಿತವಾಗಿರುವ ಭೂತನೃತ್ಯದ ವೇಷಭೂಷಣಗಳನ್ನು ಗಮನಿಸಿದಾಗ ಅವುಗಳಲ್ಲಿ ಹೆಚ್ಚು ಹೊಂದಾಣಿಕೆಯಿದ್ದು ಅವುಗಳ ಆಟಗಳ ಸಂದರ್ಭದಲ್ಲಿಯೂ ಮುಂಡಾಸು ನೃತ್ಯಗಳು ವೇಷಭೂಷಣಗಳಲ್ಲಿಯು ಜನಪದ ನಾಟಕಗಳ ಮೂಲವನ್ನು ಅರಿಯಬಹುದು ಎಂದು ಡಿ.ಕೆ.ರಾಜೇಂದ್ರ ಅವರು ಅಭಿಪ್ರಾಯಪಟ್ಟಿರುವುದು ಅರ್ಥಪೂರ್ಣವಾದುದು.

ಕರ್ನಾಟಕದ ನಾಟಕ ಮೂಲವನ್ನು ಮತ್ತು ಕೇರಳದ ನಾಟಕದ ಮೂಲವನ್ನು ಗಮನಿಸಿದಾಗ ಪ್ರದೇಶಕ್ಕೆ ತಕ್ಕಂತೆ ಭಿನ್ನ ವ್ಯತ್ಯಾಸಗಳು ಕಂಡುಬಂದಿವೆ. ತೆಂಕಣತಿಟ್ಟು ಪ್ರತಿಯೊಂದು ವಿಭಾಗದ ಮೇಲೂ ಕೇರಳದ ಪ್ರಸಿದ್ಧ ಕಲೆ ವೇಷ ಕಟ್ಟುವ ಕ್ರಮದಲ್ಲಿ ಬಣ್ಣದ ವೇಷ, ಚುಟ್ಟಿ ವೇಷ ಇತ್ಯಾದಿ ಕಥಕ್ಕಳಿಯ ಸೌಮ್ಯತೆ ಕಂಡುಬರುತ್ತದೆ. ಬಡಗುತಿಟ್ಟಿನವರಲ್ಲಿ ಉಪಯೋಗಿಸುವ ತಾಳ ಮತ್ತು ತಾಸುಮಾರುಗಳಿಗೆ ಬದಲಾಗಿ ತೆಂಕುತಿಟ್ಟಿನಲ್ಲಿರುವ ಚಂಡೆ ಜಾಗಟೆಗಳು ತೀರ ಭಿನ್ನವಾಗಿವೆ. ಕಥಾ ಪ್ರಾರಂಭದ ವೇಷಗಳ ಆರಂಭದ ರಂಗಪ್ರವೇಶಕ್ರಮಗಳನ್ನು ನಾವು ತೆರೆಪ್ಪಾಡು ಎಂದು ಕರೆಯುತ್ತೇವೆ ಎಂದು ಸೂಚಿಸಿದ್ದಾರೆ. ವೇಷಗಳು ತೆರೆಯೊಳಗಿನಿಂದ ರಂಗಕ್ಕೆ ಹೊರಡುವ ನೃತ್ಯ ಕ್ರಮ ಎಂಬರ್ಥದಲ್ಲಿ "ತಿರುಪುರಪ್ಪಾಟ್" ಮಲೆಯಾಳಯಂ ರೂಢಿಯಲ್ಲಿದೆ. ಬಣ್ಣದವೇಷಗಳು ಧರಿಸುವ ಕೇಶಾಭಾರ ಸಂಪೂರ್ಣವಾಗಿ ಕಥಕ್ಕಳಿಯನ್ನು ಹೋಲುತ್ತದೆ. ಮಾನವನು ಮೂಲ ಪ್ರವೃತ್ತಿಯು ಎಲ್ಲೆಡೆಯಲ್ಲಿಯೂ ಒಂದೆ ಎಂದು ತೋರುತ್ತದೆ. ಈ ಬಗೆಯ ನಾಟಕದ ಉಗಮ ಪ್ರಪಂಚದ ಎಲ್ಲೆಡೆಯಲ್ಲಿಯೂ ಹೆಚ್ಚು ಕಡಿಮೆ ಒಂದೇ ಆಗಿರುತ್ತದೆ. ಗ್ರಾಮಾಂತರ

ಹಬ್ಬಗಳ ಸಂದರ್ಭದಲ್ಲಿ ನಡೆಯುತ್ತಿದ್ದ ವಿಶೇಷ. ಆಚರಣೆಗಳಿಂದಲೇ ಇಂತಹ ಒಂದು ನಾಟಕಪ್ರಕಾರ ರೂಪುಗೊಂಡಿತು ಎಂಬುದು ಎಲ್ಲರೂ ಒಪ್ಪುವ ವಿಷಯವಾಗಿದೆ. ಇಷ್ಟೆಲ್ಲಾ ಅಂಶಗಳನ್ನು ಶೋಧಿಸಿರುವುದು ಡಿ.ಕೆ.ರಾಜೇಂದ್ರ ಅವರ ಸಂಶೋಧನೆಯ ವೈಶಾಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಬೇಸಾಯ ಮಾಡಿ ದಣಿದ ರೈತಾಪಿ ಮತ್ತು ಜನಸಮುದಾಯದ ಗುಂಪು ಒಂದಡೆ ಸೇರಿಕೊಂಡು ಮನೋರಂಜನೆಗಾಗಿ ವಿವಿಧ ರೀತಿಯ ಹಬ್ಬ ಆಚರಣೆಗಳು, ಸಂಪ್ರದಾಯ, ದೈವ, ನಂಬಿಕೆ, ಮೂರ್ತಿಪೂಜೆ ಮುಂತಾದವುಗಳನ್ನು ಆಚರಿಸತೊಡಗಿದರು. ಆ ಮನರಂಜನೆಗಾಗಿ ನಡೆಸುತ್ತಿದ್ದ ನಾಟಕರೂಪದಲ್ಲಿ ವೇಷಭೂಷಣ, ನೃತ್ಯಗಳಿಂದಲೂ, ನಾಟಕಮೂಲ ಅಡಗಿದೆ ಎಂಬುದನ್ನು ಮನಗಾಣಬಹುದು. ನಾಟಕ ಪ್ರಕಾರದಲ್ಲಿ ಪ್ರಮುಖವಾದ ಬಯಲಾಟ, ಗೊಂಬೆಯಾಟ, ತೊಗಲುಗೊಂಬೆಯಾಟವೇ ಮೊದಲನೆಯದು ಎಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದರೂ ಇದರ ಬಗ್ಗೆ ಕುರುಹು ದೊರೆತಿಲ್ಲ. ಆದರೂ ಗೊಂಬೆಯಾಟವೇ ಅತಿಪ್ರಾಚೀನವಾದದ್ದು ಎಂದು ಹೇಳುತ್ತಾ ಇದರ ಕಾಲವನ್ನಾಗಲಿ, ದೇಶವನ್ನಾಗಲಿ ಗುರುತಿಸುವುದು ಕಷ್ಟದ ಕೆಲಸ ಎಂದು ಡಿ.ಕೆ.ರಾಜೇಂದ್ರ ಅವರು ಪಡುವ ಅಭಿಪ್ರಾಯ ಅರ್ಥಪೂರ್ಣವಾಗಿದೆ.

ಇವು ಎಲ್ಲಾ ದೇಶದಲ್ಲಿ ಕಂಡುಬರುವ ಕಲಾಪ್ರಕಾರವಾಗಿದ್ದರು ಇವುಗಳ ಹುಟ್ಟಿನ ಬಗ್ಗೆ ಎಲ್ಲೂ ಮಾಹಿತಿ ದೊರೆಯುವುದಿಲ್ಲ. ಆಸ್ಟ್ರೀಯಾ, ಹಂಗೇರಿ, ಜಪಾನ್, ಜಕೋಸ್ಲೋವಾಕಿಯಾ ಮೊದಲಾದ ದೇಶಗಳಲ್ಲಿ ಇಂದಿಗೂ ಇವುಗಳು ಅತ್ಯಂತ ಪ್ರಚಲಿತವಾದ ಕಲಾ ಪ್ರಕಾರವಾಗಿ ಕಂಡುಬರುತ್ತವೆ ಎಂಬುದು ಸಂಶೋಧಕರ ಅಭಿಪ್ರಾಯವಾಗಿದೆ. ಕರ್ನಾಟಕದಲ್ಲಿಯೂ ಗೊಂಬೆಯಾಟ ಅತ್ಯಂತ ಪ್ರಮುಖ ಸ್ಥಾನವನ್ನೇ ಪಡೆದುಕೊಂಡು ಬಂದಿದೆ. ಇದು ನಾಟಕಕ್ಕಿಂತ ಮೊದಲು ಹುಟ್ಟಿರಬೇಕು. ನಾಟಕದ ಸೂತ್ರಧಾರ ಎಂಬ ಮಾತು ಕೊನೆ ಕೊನೆಗೆ ನಮ್ಮ ಕಾವ್ಯಗಳಲ್ಲಿ ಇಳೆಯೆಂಬ ನಾಟ್ಯರಂಗಕ್ಕೆ ಭಗವಂತನೇ ಸೂತ್ರಧಾರಿ ಎಂಬ ನಾಣ್ಣುಡಿ ಹುಟ್ಟಿರುವುದನ್ನು ಸಂಶೋಧಕರು ವಿವರಿಸಿದ್ದಾರೆ. ಕೆಲವು ಶಾಸನಗಳಿಂದ ಹಾಗೂ ಕಾವ್ಯಗಳಿಂದ ಇವರ ಪ್ರಾಚೀನತೆ ಹೇಳುತ್ತಾ ವಿಜಯನಗರದ ವೈಭವ ಪೂರಿತ ಕಾಲದಲ್ಲಿ ಗೊಂಬೆಯಾಟ ಅತ್ಯಂತ ಉತ್ತಮ ಸ್ಥಿತಿಯಲ್ಲಿತ್ತೆಂಬುದು ೧೪೭೦ ಮತ್ತು ೧೫೨೧ರ ಶಾಸನಗಳಿಂದ ವಿವರವಾಗಿ ಸಂಶೋಧಕರು ತಿಳಿಸಿರುವುದು ಅಪೂರ್ವವಾದುದು.

ಪ್ರಾಚೀನ ಕಾವ್ಯಗಳಲ್ಲಿಯೂ ಸಹ ಗೊಂಬೆಯಾಟ, ಸೂತ್ರದಗೊಂಬೆ ಎಂಬ ಪದಗಳು ಬಳಕೆ ಆಗಿರುವುದು ಮಾನವನ ಅಸಹಾಯಕತೆಯನ್ನು ಹಾಗೂ ಅವನ ಮೇಲೆ

ದೇವರಿಗಿರುವ ಸಂಬಂಧವನ್ನು ಅದರ ಪ್ರಭಾವವನ್ನು ವ್ಯಕ್ತಪಡಿಸುವಲ್ಲಿ ಡಿಂಬದೊಳು ಪ್ರಾಣವಿರಲು ಕಮಬಸೂತ್ರಗೊಂಬೆಯಂತೆ ಗೊಂಬೆಯಾಟವನ್ನಾಡಿಸುವವನ ಮಹಾಭಾರತದ ಮೊದಲಾದ ಬಗೆಯಲ್ಲಿ ಪದ ಪ್ರಯೋಗವಾಗಿದ್ದು, ಶ್ರೀ ಕೃಷ್ಣನಿಗೆ ಕರ್ನಾಟಕ ಸೂತ್ರಧಾರಿ ಎಂಬುದು ಪ್ರಚಲಿತವಾದ ಮತ್ತೊಂದು ಹೆಸರು ಇವುಗಳನ್ನೆಲ್ಲ ನೋಡಿದಾಗ ಗೊಂಬೆಯಾಟದ ಪ್ರಾಚೀನತೆ ಅದರ ಪ್ರಭಾವ ಪರಿಣಾಮ ವ್ಯಕ್ತವಾಗುತ್ತದೆ ಎಂಬ ಸತ್ಯವನ್ನು ಡಿ.ಕೆ.ರಾಜೇಂದ್ರ ಅವರು ಶೋಧಿಸಿದ್ದಾರೆ. ಸಾಮಾನ್ಯವಾಗಿ ನೃತ್ಯಗಳ ಪ್ರೇರಣೆಯಿಂದ ಹಾಗೂ ಪೋಷಣೆಯಿಂದ ಒಂದು ಬಗೆಯ ನಾಟಕ ರೂಪುಗೊಂಡಿತೆಂದು ಹೇಳಬಹುದು. ಅದು ಗೊಂಬೆಯಾಟದಂತಹ ಬೇರೊಂದು ರೂಪದಿಂದ ನಾಟಕ ರೂಪವನ್ನು ಪಡೆದುಕೊಂಡಿತು. ಆ ಮೂಲಕ ಯಕ್ಷಗಾನ, ಬಯಲಾಟಗಳು ಬೆಳಕಿಗೆ ಬಂದವೆಂಬುದನ್ನು ತಿಳಿಯಬಹುದು. ಈ ಮಾತು ಕರ್ನಾಟಕದಲ್ಲಿ ಮಾತ್ರವಲ್ಲ ಪ್ರಪಂಚದ ಎಲ್ಲೆಡೆಯಲ್ಲಿಯೂ ಇದೇ ಅಭಿಪ್ರಾಯ ಇದೆ ಎಂಬುದಾಗಿ ಸಂಶೋಧಕರು ವಿವರಿಸಿದ್ದಾರೆ.

ನಮ್ಮ ಕಾವ್ಯ ಪುರಾಣಗಳಿಗೆ ಪ್ರೇರಣೆಯಾದ ಜನಪದ ಕಲೆಗಳೇ ಜನಪದ ನಾಟಕಗಳಿಗೂ ಪ್ರೇರಣೆಯಾಗಿದ್ದವೆಂಬುದನ್ನು ಮರೆಯುವಂತಿಲ್ಲ. ಹೀಗೆ ಜನಪದ ನಾಟಕಗಳ ಮೂಲ ಮತ್ತು ಪ್ರಾಚೀನತೆಯೂ ಕೊಂಡಿಯಂತೆಯೇ ಹಂತಹಂತವಾಗಿ ಒಂದಕ್ಕೊಂದು ಅಂಟಿಕೊಂಡು ಬಂದಿರುವುದರ ಸಂಬಂಧ ಕಂಡುಬರುತ್ತದೆ. ಇಂತಹ ಅಂಶಗಳು ಡಿ.ಕೆ.ರಾಜೇಂದ್ರಳ ಅವರ ಸಂಶೋಧನೆಯ ಪರಿಶ್ರಮವನ್ನು ಸೂಚಿಸುತ್ತದೆ.

ಜನಪದ ನಾಟಕಗಳ ಮೂಲವನ್ನು ತಿಳಿಯುವುದು ಅವಶ್ಯಕತೆ ಇದೆ. ಏಕೆಂದರೆ ಯಾವುದೇ ವಸ್ತುವಾಗಲಿ ಅಥವಾ ನಾಟಕವಾಗಲಿ ಅವುಗಳ ಮೂಲ ತಿಳಿಯುವುದರಿಂದ ಶ್ರೀ ಸಾಮಾನ್ಯರಲ್ಲಿ ಅವುಗಳ ಪ್ರಾಚೀನತೆಯ ಅರಿವು ಮತ್ತು ಅಂದಿನ ಪರಂಪರೆಯಲ್ಲಿ ಬಳಸಲಾದ ನಾಟಕಗಳು ವೇಷಭೂಷಣಗಳು ನಾಟಕದ ಹೆಸರುಗಳು ಸಂಸ್ಕೃತಿ ಆಚರಣೆ ವಿಧಿವಿಧಾನಗಳ ಬಗ್ಗೆ ಜನಪದ ಸಾಹಿತ್ಯಭ್ಯಾಸಿಗಳಿಗೆ ಮತ್ತು ಶ್ರೀ ಸಾಮಾನ್ಯರಿಗೆ ಹೆಚ್ಚು ವಿಷಯಗಳ ಮನದಟ್ಟು ಆಗುತ್ತವೆಂಬುದನ್ನು ಗಮನಿಸಬಹುದು. ಪ್ರತಿಯೊಂದು ನಾಟಕಗಳು ಸಹ ಒಂದು ರೀತಿಯಲ್ಲಿ ಒಳ್ಳೆಯ ಉದ್ದೇಶವನ್ನೇ ಇಟ್ಟುಕೊಂಡು ಬೆಳೆದಿರುತ್ತವೆ. ಈ ನಾಟಕಗಳು ಸಮಾಜಕ್ಕೆ ಉತ್ತಮ ಸಂದೇಶವನ್ನೇ ನೀಡುತ್ತವೆ. ಜನಪದ ಸಂಸ್ಕೃತಿ ಆಚರಣೆ ಸಂಪ್ರದಾಯ ಮುಂತಾದವುಗಳ ಬೆಳವಣಿಗೆಗೆ ಹಾಗೂ ಮೂಲ ಸಂಸ್ಕೃತಿ ರಕ್ಷಣೆಗೆ ಒಂದು ರೀತಿಯ ಪೋಷಕವಾಗಿ ಕಂಡುಬರುತ್ತವೆ. ಜನಪದ ನಾಟಕಗಳು ಜನಸಾಮಾನ್ಯರ ಮೇಲೆ ಹೆಚ್ಚು ಪರಿಣಾಮಬೀರುವುದರಿಂದ, ಜನಸಾಮಾನ್ಯರಿಗೆ ಈ ನಾಟಕಗಳಿಂದ ಉಂಟಾಗುವ ಸಾಧಕ

ಮತ್ತು ಬಾಧಕಗಳ ಅರಿವು ಮೂಡುತ್ತದೆ. ಹೀಗೆ ಜನಪದ ನಾಟಕಗಳ ಉದ್ದ-ಆಳವನ್ನು ಡಿ.ಕೆ.ರಾಜೇಂದ್ರ ಅವರು ಶೋಧಿಸಿರುವ ಕ್ರಮ ಅತ್ಯಂತ ವೈಜ್ಞಾನಿಕವಾಗಿದೆ. ಕನ್ನಡ ಸಾಹಿತ್ಯದ ಸಂಶೋಧನಾ ಕೃತಿಗಳಲ್ಲಿ ಈ ಮಹಾಪ್ರಬಂಧಕ್ಕೆ ಚಾರಿತ್ರಿಕ ಮಹತ್ವವಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಕರ್ನಾಟಕ ಜನಪದ ರಂಗಭೂಮಿ

ಪ್ರೊ. ಡಿ.ಕೆ.ರಾಜೇಂದ್ರರವರು ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಎಂಬ ಸಂಶೋಧನಾ ಮಹಾಪ್ರಬಂಧದಲ್ಲಿ ಕರ್ನಾಟಕ ಜನಪದ ರಂಗಭೂಮಿ ಎಂಬ ಶೀರ್ಷಿಕೆಯಡಿಯಲ್ಲಿ ಕರ್ನಾಟಕದ ಜನಪದ ರಂಗಭೂಮಿಯನ್ನು ಪ್ರಮುಖವಾಗಿ ಹೀಗೆ ವಿಭಜಿಸಿದ್ದಾರೆ. ಯಕ್ಷಗಾನ, ಬಯಲಾಟ, ಗೊಂಬೆಯಾಟ, ತೊಗಲುಗೊಂಬೆಯಾಟ, ಸಣ್ಣಾಟ, ಸಾಮಾಗಾನ, ಮೂಡಲಪಾಯ, ಉತ್ತರ ಸಂಪ್ರದಾಯ, ದಕ್ಷಿಣ ಸಂಪ್ರದಾಯ, ಪಡುವಲಪಾಯ, ತೆಂಕನತಿಟ್ಟು, ಬಡಗತಿಟ್ಟು, ಸೂತ್ರದಗೊಂಬೆಯಾಟ, ತೊಗಲು ಗೊಂಬೆಯಾಟ, ಶೈವಸಣ್ಣಾಗಳು, ವಯಷ್ಣವ ಸಣ್ಣಾಟಗಳು, ಲೌಕಿಕ ಆಟಗಳು, ಕರ್ನಾಟಕ ಜನಪದ, ರಂಗಭೂಮಿಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇಷ್ಟೆಲ್ಲ ಪ್ರಭೇದಗಳು ಕಂಡುಬರುತ್ತವೆ. ಪ್ರಾದೇಶಿಕ ವೈಶಿಷ್ಟ್ಯಗಳಿಗೆ ತಕ್ಕಂತೆ ಈ ಪ್ರಬೇಧಗಳೂ ಉಂಟಾಗಿದ್ದರೂ ಅವುಗಳ ಆಂತರಿಕ ಸತ್ವ ಹಾಗೂ ರೂಪಮಾತ್ರ ಒಂದೇ ಆಗಿದ್ದರು ಇವುಗಳಲ್ಲಿ ವ್ಯತ್ಯಾಸವೆನಿದ್ದರೂ ಕಂಡುಬರುವುದು ಅವುಗಳ ಹೊರಮೈ ಲಕ್ಷಣದಲ್ಲಿ ಮಾತ್ರ. ಅವುಗಳ ಲಕ್ಷಣ ಮತ್ತು ಪ್ರಾದೇಶಿಕತೆಗೆ ಸಂಬಂಧಿಸಿದಂತೆ ವ್ಯತ್ಯಾಸಕಂಡುಬಂದರು ಒಂದೇ ಮೂಲದಿಂದ ಕವಲೊಡೆದ ಪ್ರಕಾರಗಳಿಂದ ವ್ಯತ್ಯಾಸ ಹೆಚ್ಚು ಕಂಡುಬರುವುದಿಲ್ಲ ಎಂದು ವ್ಯಾಖ್ಯಾನಿಸಿದ್ದಾರೆ.

ಹಾಗೆಯೇ ವಿಭಾಗಿಸುತ್ತಾ ಡಿ.ಕೆ.ರಾಜೇಂದ್ರರವರು ಕರ್ನಾಟಕದ ಯಕ್ಷಗಾನ, ಬಯಲಾಟದಲ್ಲಿ ಪ್ರಮುಖವಾಗಿ ಎರಡು ಪ್ರಭೇದಗಳಾಗಿ ಗುರುತಿಸುತ್ತಾ, ಮೂಡಲಪಾಯ, ಪಡುವಲಪಾಯ ಇವುಗಳಲ್ಲಿ ಹೆಚ್ಚು ಗಮನೀಯವಾದ್ದುದೆಂದು ಗುರುತಿಸುತ್ತಾ ಅವುಗಳ ಆಯಾ ಜಿಲ್ಲೆಯ ಭಾಷೆ, ಜನಸಮುದಾಯ, ಸಂಸ್ಕೃತಿಗೆ, ಆಚರಣೆ, ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಆಯಾ ಜಿಲ್ಲೆಗೆ ಸಂಬಂಧಿಸಿದಂತೆ ಆಟಗಳು ಹೊಂದಿಕೊಂಡಿರುವುದುನ್ನು ಗುರುತಿಸಿದ್ದಾರೆ. ದೊಡ್ಡಾಟವನ್ನು ಮೂಡಲಪಾಯ ಎಂದು ವಿಭಾಗಿಸಿದ್ದು, ಅವುಗಳ ವಿಸ್ತಾರ ಗುರುತಿಸುತ್ತಾ ತುಮಕೂರು, ಬೆಂಗಳುರು, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿತ್ರದುರ್ಗ ಇತರ ಭಾಗಗಳಲ್ಲೆಲ್ಲ ಜನಪದರಂಗಭೂಮಿಗಳು ಪ್ರಚಲಿತವಾಗಿದ್ದವೆಂಬುದನ್ನು

ಸಂಶೋಧಿಸಿ ಜನಪದರಂಗಭೂಮಿಯ ಮಹತ್ವವನ್ನು ತಿಳಿಸಿದ್ದಾರೆ. ಇನ್ನೂ ಉತ್ತರ ಕರ್ನಾಟಕದ ಭಾಗದಲ್ಲಿ ಕಾಣುಬರುವಂತಹ ಸಣ್ಣಾಟಗಳನ್ನು ಶೈವ ಸಣ್ಣಾಟಗಳೆಂದು ಮತ್ತು ಲೌಕಿಕ ಸಣ್ಣಾಟಗಳೆಂದು ಹೇಳುತ್ತಾ, ದೊಡ್ಡಾಟದಿಮದ ಬೇರ್ಪಡಿವುದುರಿಂದ ಇದನ್ನು ಸಣ್ಣಾಟವೆಂದು ಕರೆಯಲಾಗಿದೆ. ದೊಡ್ಡಾಟದಲ್ಲಿನ ಗಮ್ಮತ್ತು ಇದರಲ್ಲಿ ಇಲ್ಲದೆ ಇರುವುದೇ ಮುಖ್ಯ ಕಾರಣ. ಶ್ರೀ ಕೃಷ್ಣ ಪಾರಿಜಾತವನ್ನೇ ಈ ಗುಂಪಿಗೆ ಸೇರಿಸಬಹುದೆಂದು ಹೇಳುತ್ತಾ ಈ ಶ್ರೀಕೃಷ್ಣ ಪಾರಿಜಾತ ಇದು ಕಿರಿದಾದ ಕತೆ, ಹೆಚ್ಚು ಸಮಯವನ್ನು ವ್ಯಯಮಾಡುವುದಿಲ್ಲ. ಆದ್ದರಿಂದ ಶ್ರೀಕೃಷ್ಣ ಪಾರಿಜಾತವೇ ಸಣ್ಣಾಟಕ್ಕೆ ಹೆಸರಾಗಿದೆ. ವೈಷ್ಣವ ಸಣ್ಣಾಟ ಮತ್ತು ಶೈವ ಸಣ್ಣಾಟಗಳೆಂಬ ಎರಡು ಪ್ರಭೇದಗಳು ಕಂಡುಬರುತ್ತವೆ. ವೈಷ್ಣವ ಸಣ್ಣಾಟಗಳಲ್ಲಿ ಭಕ್ತಪ್ರಹ್ಲಾದ, ರುಕ್ಮಿಣಿಸ್ವಯಂವರ ಇಂತಹ ಕಥಾವಸ್ತುಗಳನ್ನೇ ಆಯ್ದುಕೊಳ್ಳುತ್ತಾರೆ ಎಂದು ಡಿ.ಕೆ.ರಾಜೇಂದ್ರ ಅವರು ವ್ಯಾಖ್ಯಾನಿಸಿದ್ದಾರೆ.

ಶೈವ ಸಣ್ಣಾಟಗಳಲ್ಲಿ ಅಲ್ಲಮಪ್ರಭುವಿನಂತಹ ಕತೆಗಳನ್ನು ಆಯ್ದುಕೊಂಡರೇ, ಸಂಗ್ಯಾ ಬಾಳ್ಯ ರೂಪಸಿಂಗ ಈ ಮುಂತಾದವು ಹೆಚ್ಚು ಪ್ರಚಲಿತವಾಗಿದ್ದವು ಎಂಬುದು ಒಂದು ಸಂಗತಿ. ದಾಸರಾಟ, ಸಮಗಾನ ಮತ್ತು ಕಂಪನಿ ನಾಟಕಗಳ ಪ್ರಭಾವದಿಂದ ಬೆಳಕಿಗೆ ಬಂದುದು ಕುಣಿತ ಇದರಲ್ಲಿ ಇರುವುದಿಲ್ಲ. ಈ ಒಂದು ಪ್ರಮುಖ ವ್ಯತ್ಯಾಸದ ಜೊತೆಗೆ ವೇಷಭೂಷಣ ವಾದ್ಯಗಳು, ರಂಗಸಜ್ಜಿಕೆಗಳು, ಸಂಭಾಷಣೆಯ ವೈಖರಿ ಇವುಗಳಲ್ಲಿಯೂ ಪ್ರಮುಖ ವ್ಯತ್ಯಾಸಕಂಡುಬರುತ್ತದೆ. ಹಾಗೆಯೇ ಕರ್ನಾಟಕದ ಯಕ್ಷಗಾನ, ಗೊಂಬೆಯಾಟಗಳಲ್ಲಿ ವಿಧಗಳು ಕಂಡುಬರುವ ಒಂದು ಪ್ರಕಾರವಾಗಿದ್ದರೂ ಮಲೆನಾಡು ಹಾಗೂ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆ ಹೊರತಾಗಿ ಉಳಿದ ಪ್ರದೇಶಗಳಲ್ಲಿ ಹೆಚ್ಚು ರೂಢಿಯಲ್ಲಿದ್ದರು ಒಟ್ಟಿನಲ್ಲಿ ಕರ್ನಾಟಕ ಜನಪದ ರಂಗಭೂಮಿಯನ್ನು ಗಮನಿಸಿದಾಗ ಇಷ್ಟೆಲ್ಲ ಪ್ರಭೇದಗಳು ಕಂಡುಬರುತ್ತವೆ ಎಂದು ಡಿ.ಕೆ.ರಾಜೇಂದ್ರರವರು ಇವುಗಳ ಮೂಲನೆಲೆಯನ್ನು ಅತ್ಯಂತ ಗಂಭೀರವಾಗಿ ಸಂಶೋಧನೆಗೆ ಒಳಪಡಿಸಿದ್ದಾರೆ.

ದಕ್ಷಿಣ ಕರ್ನಾಟಕದ ಬಯಲಾಟಕ್ಕೆ ಮೂಡಲಪಾಯವೆಂದೂ, ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗದ ಬಯಲಾಟಕ್ಕೆ ಪಡುವಲಪಾಯವೆಂದು ಕರೆಯುತ್ತಿದ್ದರು. ಪಾಯ ಎಂದರೇ ಪದ್ಧತಿ ಎಂದರ್ಥ. ಪಡುವಲಪಾಯದ ಬಯಲಾಟದಲ್ಲಿಯೂ ಎರಡು ಪ್ರಭೇದಗಳನ್ನು ಮನಗಾಣಬಹುದಾಗಿದೆ. ಉತ್ತರ ಸಂಪ್ರದಾಯ ಮತ್ತು ದಕ್ಷಿಣ ಸಂಪ್ರದಾಯ ಎಂದು ಗುರುತಿಸಿದ್ದಾರೆ. ಪಡುವಲಪಾಯದ ಬಡಗುತಿಟ್ಟು, ತೆಂಕಣತಿಟ್ಟುಗಳಲ್ಲಿ ಕಂಡುಬರುವಷ್ಟು ವ್ಯತ್ಯಾಸ ಇವುಗಳಲ್ಲಿ ಕಾಣಬರುವುದಿಲ್ಲ. ವಾಸ್ತವವಾಗಿ ಇವೆರಡು ಒಂದೇ

ಆದರೆ ಅಷ್ಟೇನೂ ಗಣನೀಯವಲ್ಲದ ಒಂದೆರಡು ವ್ಯತ್ಯಾಸಗಳು ಕಂಡುಬರುತ್ತವೆ. ಹೀಗೆ ಮೂಡಲಪಾಯದ ಉತ್ತರ ಸಂಪ್ರದಾಯವನ್ನು ದೊಡ್ಡಾಟ ಎಂದು ಕರೆದರೆ, ದಕ್ಷಿಣ ಸಂಪ್ರದಾಯಕ್ಕೆ ಹಲವು ಹೆಸರುಗಳಿವೆ. ಅಟ್ಟದಾಟ, ಬಯಲಾಟ, ಮೇಳ, ಯಕ್ಷಗಾನ ಮುಂತಾದ ಹೆಸರುಗಳಿಂದ ಪ್ರಸಿದ್ಧಿ ಪಡೆದಿರುವುದನ್ನು ಡಿ.ಕೆ. ರಾಜೇಂದ್ರರವರು ಅತ್ಯಂತ ವಿಶಿಷ್ಟವಾಗಿ ಶೋಧಿಸಿದ್ದಾರೆ.

ಮೂಡಲಪಾಯ, ಯಕ್ಷಗಾನ, ಬಯಲಾಟ, ದಕ್ಷಿಣ ಕರ್ನಾಟಕದ ಭಾಗಗಳಾದ ಬೆಂಗಳೂರು, ಮಂಡ್ಯ, ಮೈಸೂರು, ಕೋಲಾರ, ಚಿತ್ರದುರ್ಗ, ಹಾಸನ ಪ್ರದೇಶಗಳಲ್ಲಿ ಪ್ರಸಿದ್ಧಿಯಾದ ಹೆಸರನ್ನು ಮಾಡಿದ್ದು, ಹಾಗೂ ಉತ್ತರ ಕರ್ನಾಟಕದ ಭಾಗಗಳಾದ ಬಳ್ಳಾರಿ, ಧಾರವಾಡ, ಬೀಜಾಪುರ, ಗುಲ್ಬರ್ಗಾ, ರಾಯಚೂರು, ಬೀದರ್, ಬೆಳಗಾಂ ಪ್ರದೇಶಗಳನ್ನು ಒಳಗೊಂಡಂತೆ ಗುರುತಿಸುತ್ತಾ ಉತ್ತರ ಕರ್ನಾಟಕದ ಭಾಗದಲ್ಲಿ ದೊಡ್ಡಾಟ ಎಂಬ ಹೆಸರನ್ನು ಹೊಂದಿದೆ ಎಂದಿದ್ದಾರೆ. ಮೂಡಲಪಾಯ ಮತ್ತು ಪಡುವಲಪಾಯದಲ್ಲಿ ಮಾತ್ರ ಕಂಡುಬರುತ್ತದೆ. ಮೂಲಭೂತವಾದ ಪ್ರಸಂಗ ಸಾಹಿತ್ಯ ವೇಷಭೂಷಣ, ವಾದ್ಯವಿಶೇಷಗಳು ಹಾಗೂ ರಂಗಸಜ್ಜಿಕೆ ಮತ್ತು ಭಾಗವಂತಿಕೆ ಸಂಪ್ರದಾಯ ಇವುಗಳಲ್ಲಿ ಪ್ರಮುಖ ವ್ಯತ್ಯಾಸಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ ಎಂಬ ಎಲ್ಲಾ ಅಂಶಗಳನ್ನು ಶೋಧಿಸಿರುವುದು ಡಿ.ಕೆ.ರಾಜೇಂದ್ರ ಅವರ ಸಂಶೋಧನೆಯ ಪರಿಶ್ರಮವನ್ನು ಸೂಚಿಸುತ್ತದೆ.

"ಮೂಡಲಪಾಯದ ಪ್ರಸಂಗ ಸಾಹಿತ್ಯ ರಚನೆಯಲ್ಲಿ ಗದ್ಯಪದ್ಯ ಎರಡು ಕವಿನಿರ್ಮಿತವಾದರೆ ಪಡುವಲಪಾಯದಲ್ಲಿ ಪದ್ಯ ಒಂದೇ ಕವಿನಿರ್ಮಿತವಾದುದ್ದಾಗಿದ್ದು ಪಾತ್ರಧಾರಿ ಅದನ್ನನುಸರಿಸಿ ರಂಗದ ಮೇಲೆ ಗದ್ಯವನ್ನು ಸ್ವತಃ ನಿರ್ಮಿಸಿ ಮಾತಾಡುತ್ತಾನೆ. ಆದರೆ ಮೂಡಲಪಾಯದ ದಕ್ಷಿಣ ಸಂಪ್ರದಾಯಗಳಲ್ಲಾಗಲಿ ಉತ್ತರ ಸಂಪ್ರದಾಯಗಳಲ್ಲಾಗಲಿ ಸಂಭಾಷಣೆ ಕವಿನಿರ್ಮಿತವಾದಂತೆಯೇ ಗದ್ಯವು ಲಿಖಿತರೂಪದಲ್ಲಿರುತ್ತದೆ. ಇದು ಆಂಧ್ರದ ವಿಧಿನಾಟಕಕ್ಕೆ ಹೆಚ್ಚು ಹತ್ತಿರವಾದುದು"[೩೦] ಎಂಬುದನ್ನು ಹೇಳುತ್ತಾ ನಾಟಕಕ್ಕೆ ತಕ್ಕ ಉದಾಹರಣೆಯನ್ನು ಡಿ.ಕೆ.ರಾಜೇಂದ್ರರವರು ಕೊಟ್ಟಿದ್ದಾರೆ. ಹಾಗೆಯೇ ವೇಷಭೂಷಣಗಳ ಪದ್ಧತಿಯನ್ನು ಪರಿಚಯಿಸುತ್ತಾ, ರಾಕ್ಷಸರು ಧರಿಸುತ್ತಿದ್ದ ಆಭರಣಗಳು ಮತ್ತು ಪಗಡಿ ಸುತ್ತುವ ಕ್ರಮ ಮೂಡಲಪಾಯದ ದಕ್ಷಿಣ ಸಂಪ್ರದಾಯದಲ್ಲಾಗಲಿ, ಉತ್ತರ ಸಂಪ್ರದಾಯದಲ್ಲಾಗಲೀ ಇಲ್ಲವೇ ಇಲ್ಲ. ಆದರೆ ರಾಕ್ಷಸನ ಕಿರೀಟ ಕಪ್ಪು-ಬಿಳುಪು ಹೀಗೆ ವ್ಯತ್ಯಾಸವನ್ನು ತಿಳಿಸಿದ್ದಾರೆ.

---

೩೦. ಪ್ರೊ. ಡಿ.ಕೆ. ರಾಜೇಂದ್ರ ಅವರ ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ. ಪುಟ. ೩೫.

ಹಾಗೆಯೇ ಎದೆಹಾರ, ಭುಜಕೀರ್ತಿ, ವೀರಗಾಸೆ ಇವುಗಳಲ್ಲಿಯೂ ವಿಶಿಷ್ಟ ರೀತಿಯ ವ್ಯತ್ಯಾಸಗಳಿವೆ ಎಂಬುದನ್ನು ಡಿ.ಕೆ. ರಾಜೇಂದ್ರರವರು ಅತ್ಯಂತ ವಿಶೇಷವಾಗಿ ಚರ್ಚಿಸಿದ್ದಾರೆ.

ವಾದ್ಯ ವಿಶೇಷವನ್ನು ನೆನಪಿಸುತ್ತಾ, ಅವುಗಳಲ್ಲಿಯೂ ವಿಶೇಷತೆಯನ್ನು ಹೇಳುತ್ತಾ ಬಂದಿದ್ದಾರೆ. ಮುಖವೀಣೆ ಪಡುವಲಪಾಯದಲ್ಲಿ ಕಂಡುಬರುವುದಿಲ್ಲ. ಹಾಗೆಯೇ ಪಡುವಲಪಾಯದ ಚಂಡೆ ಮೂಡಲಪಾಯದಲ್ಲಿ ಅಲ್ಲಿ ಬಳಸುವಂತಹ ಜಾಗಟೆಯಂತೋ ಇಲ್ಲವೇ ಇಲ್ಲ. ಭಾಗವಂತಿಕೆ ಸಂಪ್ರದಾಯದಲ್ಲಿಯೂ ಕೂಡ ವ್ಯತ್ಯಾಸಗಳಿದ್ದು. ಮೂಡಲಪಾಯದಲ್ಲಿ ಭಾಗವತರು, ನಿಂತುಕೊಂಡೇ ಆಟ ನಡೆಸಿದರೆ, ಪಡುವಲ ಪಾಯದಲ್ಲಿ ಪಾತ್ರಗಳನ್ನು ಮುಂದೆ ಕುಣಿಯಬಿಟ್ಟು ಹಿಂದೆ ಎತ್ತರದ ಸ್ಥಳದಲ್ಲಿ ಕುಳಿತಿರುತ್ತಾರೆ. ಮೂಡಲಪಾಯದಲ್ಲಿ ವಿಶೇಷವಾಗಿ ವಿಜೃಂಭಿಸುವ ಹಿಮ್ಮೇಳನ ಅಲ್ಲಿ ಕಂಡುಬರುವುದಿಲ್ಲ. ತೆರೆಯ ವ್ಯವಸ್ಥೆಯಲ್ಲಿಯೂ ಈ ಎರಡು ಪಾಯಗಳಿಗೂ ವ್ಯತ್ಯಾಸಗಳಿರುವುದನ್ನು ಗುರುತಿಸುತ್ತ ಅವುಗಳ ವಿಶಿಷ್ಟ ರೀತಿಯ ಗುಣ ಸ್ವರೂಪ ಮತ್ತು ವಿಶೇಷತೆಯನ್ನು ಒಂದೊಂದು ಘಟಕದಲ್ಲಿಯೂ ವ್ಯತ್ಯಾಸಗಳಿರುವುದನ್ನು ಪ್ರೊ.ಡಿ.ಕೆ.ರಾಜೇಂದ್ರ ಅವರು ತಮ್ಮ ಮಹಾ ಪ್ರಬಂಧದಲ್ಲಿ ಚರ್ಚಿಸಿರುವುದು ಗಮನಾರ್ಹವಾದುದು.

ಸಣ್ಣಾಟ ಎಂದ ಕೂಡಲೇ ನಮಗೆ ನೆನಪಿಗೆ ಬರುವುದು ಉತ್ತರಕರ್ನಾಟಕ. ಈ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಸಿದ್ಧಿ ಹೊಂದಿರುವ ಪ್ರಮುಖ ಕಲೆಯು ಇದಾಗಿದೆ. ಇದು ಸಂಪೂರ್ಣವಾಗಿ ಜನಪದ ನಾಟಕವೇ ಆದರೂ ರಂಗಸಜ್ಜಿಕೆಯಲ್ಲಿ ವೇಷಭೂಷಣದಲ್ಲಿ ಮಾತುಗಾರಿಕೆಯಲ್ಲಿ ಕಂಪನಿ ನಾಟಕಗಳ ಪ್ರಭಾವ ಕಂಡುಬರುತ್ತದೆ. ಇವು ಪ್ರಸಿದ್ಧವಾದ ದೊಡ್ಡಾಟದ ಮಾದರಿಯನ್ನೇ ಅನುಸರಿಸಿ ರೂಪುಗೊಂಡಿದ್ದರು, ಸಣ್ಣಾಟದಲ್ಲಿ ದೊಡ್ಡಾಟದ ರೀತಿಯ ವೇಷಭೂಷಣವಾಗಲಿ ಕಥಾವಸ್ತುವಾಗಲಿ ಕಂಡುಬರುವುದಿಲ್ಲ. ಹೀಗೆ ಸಣ್ಣಾಟದ ವಿಶಿಷ್ಟ ಪ್ರಭೇದಗಳನ್ನು ಪ್ರೊ.ಡಿ.ಕೆ.ರಾಜೇಂದ್ರರವರು ಸಂಶೋಧಿಸಿದ್ದಾರೆ.

ಸೂತ್ರದ ಗೊಂಬೆಯಾಟ ಮತ್ತು ತೊಗಲುಗೊಂಬೆಯಾಟಗಳು ಜನಪದ ನಾಟಕ ಪ್ರಕಾರಗಳ ಪ್ರಮುಖ ಭಾಗಗಳಾಗಿವೆ ಎಂಬುದನ್ನು ಹೇಳುತ್ತಾ ಇಲ್ಲಿ ಮಾನವರಿಗೆ ಬದಲಾಗಿ ಗೊಂಬೆಗಳು ಭಾಗವಹಿಸುತ್ತವೆ ಎಂಬುದನ್ನು ಡಿ.ಕೆ.ರಾಜೇಂದ್ರ ಅವರು ವಿವರಿಸಿದ್ದಾರೆ. ಒಂದು ನಿರ್ದಿಷ್ಟ ಪರದೆಯ ಮೇಲೆ ಒಂದು ಗೊಂಬೆಯನ್ನು ಪರದೆಯ ಹಿಂದೆ ಸೂತ್ರಧಾರ ಕುಳಿತು ಗೊಂಬೆಯಾಡಿಸುವುದೇ ಸೂತ್ರದ ಗೊಂಬೆಯಾಟವಾಗಿದೆ. ಸೂತ್ರಧಾರ ಎಂದರೇ ಗೊಂಬೆಯಾಡಿಸುವವರು ಎಂದು ತಿಳಿಸಲು ಯತ್ನಿಸಿದ್ದಾರೆ. ಹಾಗೆಯೇ ಬಯಲಾಟವು ಸಹ ಒಂದು ಪ್ರಮುಖ ಜನಪದ ಕಲಾಪ್ರಕಾರವಾಗಿದ್ದು, ಇದು ವಿವಿಧ ಪ್ರಾಂತ್ಯಗಳ ಬಯಲಾಟಕ್ಕೆ

ಸರಿಸಮನವಾಗಿದೆ. ತಿರಕ್ಕೂತ್ತು ವಿಧಿನಾಟಕ, ಕಥಕ್ಕಳಿ ಮುಂತಾದವು ಈ ಜಾತಿಗೆ ಸೇರಿಕೊಂಡವಾಗಿವೆ ಎಂದು ಹೇಳುತ್ತಾ ಇಲ್ಲಿ ಡಿ.ಕೆ.ರಾಜೇಂದ್ರರವರು ಗೊಂಬೆಯಾಟದ ವಿವಿಧ ಕಲಾ ಪ್ರಕಾರಗಳನ್ನು ಮತ್ತು ಅವುಗಳು ಒಂದೊಂದು ಪ್ರದೇಶಕ್ಕೂ ಕೊಂಚ ಮಟ್ಟದಲ್ಲಿ ವ್ಯತ್ಯಾಸಗಳನ್ನು ಗುರುತಿಸುತ್ತಾ ಇವುಗಳ ಮೂಲ ಒಂದೇ ಆಗಿರುತ್ತದೆ ಎಂಬುದನ್ನು ಈ ಪ್ರಬಂಧದಲ್ಲಿ ಚರ್ಚಿಸಿದ್ದಾರೆ.

ವಾದ್ಯ ವಿಶೇಷಗಳ ಭಿನ್ನತೆಯನ್ನು, ವಾದ್ಯಗಳಲ್ಲಂತೂ ಸ್ವಲ್ಪವು ವ್ಯತ್ಯಾಸವಿಲ್ಲ. ಆದರೆ ಕರ್ನಾಟಕದ ಪಡುವಲ ಪಾಯದಲ್ಲಿ ಕಂಡುಬರುವ ವಾದ್ಯ ವಿಶೇಷಗಳನ್ನು ಬಿಟ್ಟರೆ ಒಂದೇ ಬಗೆಯ ವಾದ್ಯ ವಿಶೇಷದ ಆಟಗಳಿರುವ ಕಡೆ ಬಳಸಲಾಗುತ್ತದೆ. ಕರ್ನಾಟಕದ ಮೂಡಲಪಾಯದಲ್ಲಿ ವಿಶೇಷವಾಗಿ ಕಂಡುಬರುವ ಮುಖವೀಣೆ ತಮಿಳುನಾಡಿನ ತಿರುಕ್ಕೊತ್ತುವಿನಲ್ಲಿಯೂ ಕಂಡುಬರುತ್ತದೆ ಎಂದು ವಾದ್ಯಗಳ ಗುಣಲಕ್ಷಣಗಳನ್ನು ಗುರುತಿಸಿದ್ದಾರೆ. ಮೂಡಲಪಾಯದ ಪ್ರಮುಖ ವಿಶೇಷತೆ ಎಂದರೆ ಈ ಆಟಗಳಲ್ಲಿ ಎಲ್ಲಿಯೂ ಸ್ತ್ರೀ ಪಾತ್ರವನ್ನು ಕಾಣಲು ಸಾಧ್ಯವಿಲ್ಲ, ಬದಲಿಗೆ ಸ್ತ್ರೀಯರ ಪಾತ್ರವನ್ನೇ ಪುರುಷರೇ ಸ್ತ್ರೀರೂಪದ ವೇಶಧರಿಸಿ ನಟಿಸುವುದರಲ್ಲಿ ಪ್ರಮುಖವಾಗಿದೆ. ಇಲ್ಲಿ ಏಕರೂಪ ನಟನೆಯ ಪಾತ್ರಗಳು ಕಂಡುಬಂದರೂ ಸ್ತ್ರೀಯರನ್ನು ಹಿಂದಿಕ್ಕುವ ಕೆಲಸ ಇಲ್ಲಿ ನಡೆದಿದೆ ಎಂಬುದನ್ನು ಡಿ.ಕೆ.ರಾಜೇಂದ್ರರವರು ಗುರುತಿಸಿದ್ದಾರೆ.

ಹೀಗೆ ಕರ್ನಾಟಕದ ಜನಪದ ರಂಗಭೂಮಿಯನ್ನು ಗಮನಿಸಿದಾಗ ಮೇಲಿನ ಅಧ್ಯಯನ ಮಾಡಿದಂತಹ ಎಲ್ಲಾ ರೀತಿಯ ಕಲೆಗಳೂ ನಮ್ಮ ಗಮನಕ್ಕೆ ಕಂಡುಬಂದರು ಪ್ರತಿಯೊಂದು ನಾಟಕ ಪ್ರಕಾರದ ಆಟಗಳ ಗುಣಗಳನ್ನು ಹೊಂದಿರುವುದನ್ನು ಕಾಣಬಹುದು. ಪ್ರತಿಯೊಂದು ಜನಪದ ರಂಗಭೂಮಿಯಲ್ಲಿ ಕೆಲವೆಡೆ ವ್ಯತ್ಯಾಸಗಳು ಕಂಡುಬಂದರು. ಕೆಲವೆಡೆ ಭಿನ್ನತೆಗಳು ಕಂಡುಬರುವುದಿಲ್ಲ. ಈ ಅಧ್ಯಯನದಿಂದ ಮೂಲಪರಂಪರೆ ಕಲೆ ಮತ್ತು ಸಂಪ್ರದಾಯ ಆಚರಣೆ ವ್ಯತ್ಯಾಸಗಳನ್ನು ರಕ್ಷಿಸುವುದೇ ಆಗಿದೆ. ಮನರಂಜನೆಗಾಗಿ ಮತ್ತು ಎಲ್ಲಾ ಸಮುದಾಯಗಳು ಒಟ್ಟಾಗಿ ಪಾಲ್ಗೊಂಡು ಬಯಲಾಟ, ಯಕ್ಷಗಾನ, ತೊಗಲುಗೊಂಬೆಯಾಟ, ಸಣ್ಣಾಟ, ದೊಡ್ಡಾಟ ಆಡುವುದರಿಂದ ಯಾವುದೇ ಮೇಲುಕೀಳೆಂಬ ಜಾತಿಯ ಅಭ್ಯಂತರವಿರಲಿಲ್ಲ. ಎಲ್ಲಾ ಸಮುದಾಯದವರು ಒಂದೆಡೆ ಸೇರಿ ಈ ನಾಟಕಗಳನ್ನು ಆಡಲು ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಇವುಗಳು ಒಂದೆಡೆ ಜನಪದ ಆಸಕ್ತಿಯನ್ನು ಹೆಚ್ಚಿಸಿದರೆ ಮತ್ತೊಂದೆಡೆ ಮೂಲಪರಂಪರೆಯ ಸಂರಕ್ಷಣೆ ಕೆಲಸವನ್ನು ಮಾಡುತ್ತಿದ್ದವು. ಹೀಗೆ ಪ್ರೊ. ಡಿ.ಕೆ.ರಾಜೇಂದ್ರ ಅವರು ಕರ್ನಾಟಕದ ಜನಪದ ರಂಗಭೂಮಿ

ಕುರಿತು ಆಳವಾದ ಸಂಶೋಧನೆ ನಡೆಸಿದ್ದಾರೆ. ಅಧ್ಯಯನಕ್ಕೆ ಬೇಕಾದ ಸಾಮಗ್ರಿಯ ಸಂಗ್ರಹ ಕ್ಷೇತ್ರಕಾರ್ಯದದಿಂದ ಸಂಗ್ರಹದ ಸಾಮಗ್ರಿಯ ಅರ್ಥಪೂರ್ಣ ವಿಶ್ಲೇಷಣೆ ಹಾಗೂ ಸಂಶೋಧನೆ ವಿಧಾನಗಳ ಬಳಕೆ ಒಡೆದು ತೋರುತ್ತದೆ. ಶಿಷ್ಟ ಹಾಗೂ ಪ್ರೌಢ ಭಾಷಾ ಬಳಕೆಯಿಂದ ಈ ಸಂಶೋಧನಾ ಪ್ರಬಂಧ ಹೆಚ್ಚು ಗಮನ ಸೆಳೆಯುತ್ತದೆ.

*****

ಅಧ್ಯಾಯ – ೫

ಪ್ರೊ. ಡಿ.ಕೆ. ರಾಜೇಂದ್ರರವರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳು

ಪ್ರೊ. ಡಿ.ಕೆ.ರಾಜೇಂದ್ರರವರ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಚಟುವಟಿಕೆಗಳನ್ನು ಗಮನಿಸಿದಾಗ ಆಡಳಿತಾತ್ಮಕ ಚಟುವಟಿಕೆಗಳು ಹೆಚ್ಚು ಕಂಡುಬಂದರೂ ಶೈಕ್ಷಣಿಕ ಚಟುವಟಿಕೆಗಳು ಹೆಚ್ಚು ಕಂಡುಬಂದಿಲ್ಲ. ಇವರು ಹಲವು ಕಡೆ ಶಿಕ್ಷಣವನ್ನೂ ಪೂರೈಸಿದರು. ಶೈಕ್ಷಣಿಕ ಮಟ್ಟದಲ್ಲಿ ಹೆಚ್ಚಿನ ಚಟುವಟಿಕೆಗಳು ಕಂಡುಬಂದಿಲ್ಲ. ಆದರೆ, ಒಂದು ಹಂತದಲ್ಲಿ ಮಾತ್ರ ಡಿ.ಕೆ.ರಾಜೇಂದ್ರ ಅವರು ಶೈಕ್ಷಣಿಕ ಮಟ್ಟದಲ್ಲಿ ಚಟುವಟಿಕೆಯನ್ನು ನಡೆಸಿರುವುದು ಕಂಡುಬರುತ್ತವೆ. ಅದೆಂದರೆ ಹಾಸನ ಪ್ರಥಮದರ್ಜೆ ಕಾಲೇಜಿನಲ್ಲಿ ಬಿ.ಎ. ಪದವಿಗೆ ಪ್ರವೇಶಪಡೆದರು. ಬಿ.ಎ. ಪದವಿಯಲ್ಲಿ ಕನ್ನಡವನ್ನು ಐಚ್ಛಿಕವಾಗಿ ಓದುವ ಇವರ ಆಸೆಗೆ ದೊಡ್ಡಪೆಟ್ಟು ಬಿದ್ದಿತ್ತು. ಆಗ ಪ್ರೊ. ಡಿ.ಕೆ.ರಾಜೇಂದ್ರ ಅವರು ತಮ್ಮ ಸಹಪಾಠಿಗಳೊಂದಿಗೆ ಗುಂಪುಕಟ್ಟಿಕೊಂಡು ಪ್ರೊ. ದೇ.ಜವರೇಗೌಡರನ್ನು ಭೇಟಿಮಾಡಿ ತಮ್ಮ ಓದಿಗೆ ಅಡ್ಡಿಯಾಗಿರುವ ಸಮಸ್ಯೆಯನ್ನು ತಿಳಿಸಿದರು. ಆಗ ಆ ಸಮಸ್ಯೆಯನ್ನು ದೇ.ಜವರೇಗೌಡರು ಬಗೆಹರಿಸಿ ಓದಲು ಅವಕಾಶ ಮಾಡಿಕೊಟ್ಟರು. ನಂತರ ಶಿಕ್ಷಣದ ಎಲ್ಲಾ ಹಂತವನ್ನೂ ಪೂರೈಸಿದ ನಂತರ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದರು.

ಇಲ್ಲಿಂದ ಆಡಳಿತಾತ್ಮಕ ಚಟುವಟಿಕೆಗಳು ಪ್ರಾರಂಭವಾದವು. ನಂತರ ರೀಡರ್ ಆಗಿ ಪ್ರಾಧ್ಯಾಪಕನಾಗಿ ತದನಂತರ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ ವಿದ್ಯಾರ್ಥಿಗಳ ಆಯ್ಕೆಯ ಜವಾಬ್ದಾರಿಯನ್ನು ಹೊತ್ತರು. ಜೊತೆಗೆ ಪರೀಕ್ಷೆ ಸಂದರ್ಭದ ಕಾರ್ಯ ಜವಾಬ್ದಾರಿಗಳನ್ನು ಹೊತ್ತರು. ಈ ಎಲ್ಲಾ ಕೆಲಸಕಾರ್ಯಗಳ ಜೊತೆಗೆ ಪದವಿ ತರಗತಿಗಳ ಪಠ್ಯಪುಸ್ತಕ ರಚನೆ ಕನ್ನಡ ಅಧ್ಯಯನ ಮಂಡಳಿಯ ಜವಾಬ್ಧಾರಿಯುತ ಕೆಲಸವನ್ನು ಮಾಡಿದ್ದಾರೆ. ಕನ್ನಡ ಪರೀಕ್ಷಾ ಮಂಡಳಿ ಸಭೆಗಳ ಜವಾಬ್ದಾರಿ ಪ್ರಕಟಣಕಾರ್ಯ ವಿಚಾರಸಂಕಿರಣಗಳು ಇವೆಲ್ಲವೂ ಒಟ್ಟೊಟ್ಟಿಗೆ ಇವರ ಹೆಗಲೇರಿತು. ನಂತರ ಕನ್ನಡ ವಿಶ್ವಕೋಶದ ಹದಿಮೂರನೆಯ ಸಂಪುಟವನ್ನು ಹೊರತಂದರು. ವಿಶ್ವಕೋಶ, ಎಪಿಗ್ರಾಫಿಯಾ ಕರ್ನಾಟಿಕ, ಶ್ರೀರಾಮಾಯಣ ದರ್ಶನಂ ಮಹಾಕಾವ್ಯದ ಹಿಂದಿ ಅನುವಾದ ಹಾಗೂ ಹಲವು ವಿಚಾರಸಂಕೀರಣಗಳನ್ನು ಯಶಸ್ವಿಯಾಗಿ ಪೂರೈಸಿದರು. ಹಾಗೆಯೇ ಮೈಸೂರು ದಸರಾ ಕವಿಸಮ್ಮೇಳನಗಳನ್ನು ವ್ಯವಸ್ಥಿತಗೊಳಿಸಿದರು. ಇಷ್ಟೊಂದು ಆಡಳಿತಾತ್ಮಕ ಚಟುವಟಿಕೆಗಳಲ್ಲಿ ಅತ್ಯುನ್ನತ ಹೆಸರು ಪಡೆದು ಅವರು ತುಂಬಾ ಜವಾಬ್ದಾರಿಯುತವಾಗಿ ಆಡಳಿತ ನಡೆಸಿದರು.

ಇವರ ಸಾಧನೆಯನ್ನು ಗುರುತಿಸಿ ಹಲವಾರು ಗೌರವಯುತ ಪ್ರಶಸ್ತಿಗಳು ಇವರನ್ನು ಅರಸುತ್ತಾ ಬಂದವು.

ಮೊದಲಬಾರಿಗೆ ತುರುವೆಕೆರೆ ತಾಲ್ಲೂಕಿನಲ್ಲಿ ನಡೆದ ಪ್ರಥಮ ತಾಲ್ಲೂಕು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಇವರ ಸಾಧನೆಗೆ ಮೆಚ್ಚಿ 'ಕರಪಾಲಮೇಳ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಬಂತು. ಇವರ 'ಮಾತಿನ ಮಲ್ಲರು' ಪ್ರಬಂಧ ಸಂಕಲನಕ್ಕೆ ಬಹುಮಾನ ಸಂದಿತು. ಆನಂತರ ಇದೇ ಪ್ರಬಂಧ ಕೃತಿಗೆ 1996ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಸಂದಿತು. ಇದರ ಹಿಂದೆಯಷ್ಟೇ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 'ಜಾನಪದ ತಜ್ಞ' ಪ್ರಶಸ್ತಿಯು 1998ರಲ್ಲಿ ಸಂದಿತು. ಹಾಗೆಯೇ ಜನದನಿ ಸಾಂಸ್ಕೃತಿಕ ಟ್ರಸ್ಟ್, ಮಂಡ್ಯ ಇವರಿಂದ ಡಾ. ಜೀಶಂಪ ಜಾನಪದ ತಜ್ಞ ಪ್ರಶಸ್ತಿ ಬಂತು. ಮುಂಬೈ ಕನ್ನಡ ಸಂಘ ಹಾಗೂ ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಸಮಾರಂಭದ ಮುಖ್ಯ ಅತಿಥಿಯಾಗಿ 1998ರಲ್ಲಿ ಪಾಲ್ಗೊಂಡರು. ನಂತರ ಬರಹಗಾರ ಸಂಘದ ಅಧ್ಯಕ್ಷರಾದರು. ಸಾಹಿತ್ಯರಾಧಕರಾಗಿ ಪೂಜ್ಯರಿಂದ ಸನ್ಮಾನ ನಿರ್ದೇಶಕರಾಗಿ ಸಮಾರಮಭವೊಂದರಲ್ಲಿ ಕುಲಪತಿ ಪ್ರೊ. ಎಸ್.ಎನ್. ಹೆಗಡೆ ಅವರೊಂದಿಗೆ ಸಮಾರಂಭದಲ್ಲಿ 1998ರಲ್ಲಿ ಪಾಲ್ಗೊಂಡರು, ಕುಲಪತಿ ಪ್ರೊ. ಹೆಗಡೆ ಹಾಗೂ ಪ್ರೊ. ಹಾ.ಮಾ.ನಾಯಕರೊಂದಿಗೆ ಪಾಲ್ಗೊಂಡರು. ರಾಷ್ಟ್ರಕವಿ ಕುವೆಂಪು ಅವರೊಂದಿಗೆ ಮತ್ತು ಡಾ. ಶ್ರೀ ಹ.ಕ.ರಾಜೇಗೌಡರೊಂದಿಗೆ ಪಾಲ್ಗೊಂಡರು. ಹೀಗೆ ಕೊನೆಗೆ ಎರಡುಬಾರಿ ನಿರ್ದೇಶಕರಾಗಿ 2002ನೇ ಇಸವಿ ಮೇ ತಿಂಗಳಲ್ಲಿ ನಿವೃತ್ತರಾದರು. ಹೀಗೆ ಹಲವಾರು ಸಾಧನೆಯನ್ನು ಮಾಡಿ ಹತ್ತು ಹಲವುಗಳನ್ನು ಪಡೆದು ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾರೆ.

*****

ಸಮಾರೋಪ

ಜಾನಪದ ಸಾಹಿತ್ಯವು ವಿಶ್ವವ್ಯಾಪಿಯಾಗಿ ತನ್ನ ಸ್ಥಾನಮಾನವನ್ನು ವಿಸ್ತರಿಸಿಕೊಂಡಿರು–ವಂಥದ್ದು. ಸಾಹಿತ್ಯ ಕ್ಷೇತ್ರಕ್ಕೆ ಆಗಾಧವಾದ ಕೊಡುಗೆ ಜಾನಪದದಿಂದ ದೊರಕಿರುವುದೇ ಸಾಕ್ಷಿ. ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಜಾನಪದವೇ ಮಹಾಕಾವ್ಯಗಳ ವಸ್ತುವಾಗಿದೆ. ಇಲಿಯಡ್ ಈನಿಯಡ್, ಕಲೇಲವಾ ಇಂತಹ ಬೃಹತ್‌ಗಾತ್ರದ ಮಹಾಕಾವ್ಯಗಳಿಗೆ ಜಾನಪದದ ಕೊಡುಗೆ ಅಪಾರ. ಭಾರತದಲ್ಲೂ ಪ್ರಾದೇಶಿಕ ಭಾಷೆಗಳಲ್ಲಿ ಅಲ್ಲಿಯ ಪರಿಸರಕ್ಕನುಗುಣವಾಗಿ ಅನೇಕ ಜಾನಪದ ಮಹಾಕಾವ್ಯಗಳು ರಚನೆಗೊಂಡಿವೆ. ಕನ್ನಡ ಭಾಷೆ ಪ್ರಾಚಿನತಮವಾಗಿರುವಂತೆ 'ಜಾನಪದ'ವು ಪೂರ್ವ ಇತಿಹಾಸವನ್ನೇ ಹೊಂದಿದೆ. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣಿತಿಮತಿಗಳ್' ಎಂಬಂತಹ ಮಾತುಗಳೇ ನಿದರ್ಶನವಾಗಿದೆ. ಆಧುನಿಕ ಕನ್ನಡ ಕಾಲಘಟ್ಟದಲ್ಲಿ ಜಾನಪದ ಕ್ಷೇತ್ರಕ್ಕೆ ಪ್ರೊ. ಡಿ.ಕೆ.ರಾಜೇಂದ್ರರವರು ಜಾನಪದ ಕೃತಿಗಳು ಹೊಸಪರಂಪರೆಗೆ ನಾಂದಿಯಾದವು. ಮಾತ್ರವಲ್ಲದೆ ಒಂದು ಕಾಲಮಾನದ ಜಾನಪದ ಚರಿತ್ರೆಯ ಅಡಿಗಲ್ಲಾದವು.

ಜನಸಾಮಾನ್ಯರ ಅನುಭವಗಳಿಂದ ಅಭಿವ್ಯಕ್ತಿಪಡೆದಿರುವ ಜನಪದಗೀತೆ ಅವರ ದೈನಂದಿನ ಬದುಕಿನ ಪ್ರತಿರೂಪ ಮಗುವಿನ ಜನನ ಯೌವ್ವನದಿಂದ ಮೊದಲ್ಗೊಂಡು ವೈವಾಹಿಕ ಮುಪ್ಪಿನವರೆಗೂ ಜನಪದಗೀತೆಗಳ ಬಾಹುಳ್ಯವಿದೆ. ಪ್ರೊ. ಡಿ.ಕೆ.ರಾಜೇಂದ್ರರವರ ಜನಪದ ಸಾಹಿತ್ಯವನ್ನು ವಿವಿಧ ಕನ್ನಡ ವಿದ್ವಾಂಸರ ವಿಂಗಡಣೆಯ ಜೊತೆಗೆ ವಿದೇಶಿ ರಾಷ್ಟ್ರಗಳಲ್ಲಿನ ಜನಪದ ಚಿಂತಕರ ಬಗ್ಗೆಯೂ ವಿವರಿಸಿದ್ದಾರೆ. ಪರಿಪೂರ್ಣವೆನಿಸಬಹುದಾದ ಜೀವಂತ ಬದುಕನ್ನು ಜನಪದರಲ್ಲಿ ಗೀತೆ, ಕಥೆ, ಕವನ, ಹಾಡ್ಗತೆಗಳು ಮುಂತಾದವುಗಳಲ್ಲಿ ಮನಗಾಣಬಹುದಾಗಿದೆ. ಜನಪದರಿಗೆ ಸ್ವದೈವ, ಪರದೈವ ಎಂಬ ಬೇಧವಿಲ್ಲದೆ ಎಲ್ಲರ ಜೊತೆಗೂ ಸೌಹಾರ್ದತೆಯಿಂದ ಬದುಕುವಂತಹ ವಿಶಾಲ ಮನೋಭಾವನೆಯನ್ನು ಗುರುತಿಸಬಹುದಾಗಿದೆ.

ಕರ್ನಾಟಕದಲ್ಲಿ ಪ್ರಾಮುಖ್ಯತೆ ಪಡೆದಿರುವ ಪೌರಾಣಿಕ ಪುರುಷರುಗಳಿರುವ ವೃತ್ತಿಗಾಯಕರು ಕಂಸಾಳೆಯವರು, ದೇವರಗುಡ್ಡದವರು ಹಾಗೂ ಅವರ ಕಲಾಪ್ರಕಾರಗಳಲ್ಲಿನ ಭಿನ್ನತೆಯ ಬಗೆಗೂ ಓದುಗರ ಗಮನವನ್ನು ಡಿ.ಕೆ.ರಾಜೇಂದ್ರ ಅವರು ಸೆಳೆದಿರುವುದನ್ನು ಕಾಣಬಹುದಾಗಿದೆ. ಭಾರತದ ಕರ್ನಾಟಕದಲ್ಲಿ ಪ್ರಾಮುಖ್ಯತೆ ಪಡೆದಿರುವ ಪೌರಾಣಿಕ ಪುರುಷರುಗಳಿರುವ ವೃತ್ತಿಗಾಯಕರು ಕಂಸಾಳೆಯವರು, ದೇವರಗುಡ್ಡದವರು ಹಾಗೂ ಅವರ ಕಲಾಪ್ರಕಾರಗಳಲ್ಲಿನ ಭಿನ್ನತೆಯ ಬಗೆಗೂ ಓದುಗರ ಗಮನವನ್ನು ಡಿ.ಕೆ.ರಾಜೇಂದ್ರ

ಸೆಳೆದಿರುವುದನ್ನು ಕಾಣಬಹುದಾಗಿದೆ. ಭಾರತದೇಶವು ಪ್ರಾಂತೀಯವಾಗಿ ಹಲವು ಭಾಷೆ, ಧರ್ಮಗಳಿರುವಂತೆಯೇ ಜನಪದ ನೃತ್ಯ ಕಲೆಗಳಲ್ಲಿಯ ವೈವಿಧ್ಯತೆಯ ಬಗೆಗೆ ಚರ್ಚೆಮಾಡಿರುವ ರೀತಿ ಶ್ರೇಷ್ಟದರ್ಜೆಯದು. ಯಕ್ಷಗಾನ, ಬಯಲಾಟ, ಗೊಂಬೆಯಾಟ, ಸೂತ್ರದಗೊಂಬೆಯಾಟ ಕಥಕ್ಕಳಿ ಕೂಚುಪುಡಿ, ಬಾಂಗ್ರಾ, ಬಿಹೂ ಎಂಬೆಲ್ಲಾ ನೃತ್ಯ ಕಲೆಗಳ ಬಗ್ಗೆಯೂ ವಿವರಿಸಿದ್ದರೂ ಭರತನಾಟ್ಯದ ಬಗೆಗಿನ ವಿವರಣೆಯನ್ನು ನೀಡಿದ್ದಾರೆ.

ಪ್ರೊ. ಡಿ.ಕೆ.ರಾಜೇಂದ್ರರವರ ಗ್ರಂಥಗಳಲ್ಲಿ ಓದುಗರನ್ನು ಗಮನಸೆಳೆಯುವ ಲೇಖನ ಮತ್ತು ಕೃತಿಗಳೆಂದರೆ ಪದವವೆ ನಮ್ಮ ಎದೆಯಲ್ಲಿ ಹಾಡ್ಗತೆಗಳು. ಕರ್ನಾಟಕದ ಜನಪದ ಕಲೆಗಳು ಶಿಶುಪ್ರಾಸಗಳು, ಸ್ತುತಿಗೀತೆಗಳು ಮತ್ತು ಲಾಲೀಯಪದಗಳು ಮಾನಾಮಿಪದಗಳು, ಮಳೆರಾಯನ ಹಾಡುಗಳು, ಹಾಸನಜಿಲ್ಲೆಯ ಜನಪದ ಕಲೆಗಳು, ದಕ್ಷಿಣಕರ್ನಾಟಕದ ವೃತ್ತಿಗಾಯಕರು, ಮಂಡ್ಯಜಿಲ್ಲೆಯ ಜನಪದ ಸಾಹಿತ್ಯ ಬಯಲಾಟದ ವೇಷಭೂಷಣಗಳು ಜನಪದ ವಸ್ತುಸಂಗ್ರಹಾಲಯ, ಜನಪದ ಗೀತಾಪ್ರಕಾರಗಳು, ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ ಮುಂತಾದವುಗಳು. ಡಿ.ಕೆ.ರಾಜೇಂದ್ರ ಅವರು ತಮ್ಮ ಸಾಹಿತ್ಯ ಪರಿಧಿಯಲ್ಲಿ ಇವುಗಳ ಬಗೆಗಿನ ಕೂಲಂಕಷವಾದ ನಿರೂಪಣೆ ಅವರ ಸೃಜನಶೀಲತೆಯೂ, ಪ್ರತಿಬಿಂಬದಂತಿದ್ದರೂ ಓದುಗರಿಗೆ ಅವರ ಮುಂದಿನ ಹಾದಿಯನ್ನು ತೋರಿಸುವಂತಹ ಪ್ರಯತ್ನ ಈ ಲೇಖನಗಳ ಅಧ್ಯಯನದಿಂದ ಆಗಿದೆ ಎಂಬ ಮಾತನ್ನು ಅರಿಯಬಹುದಾಗಿದೆ. 'ಜಾನಪದ ಸಂಪದ' ಎಂಬ ಕೃತಿಯಲ್ಲಿ ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ವಿವರಿಸುವುದರ ಜೊತೆಗೆ ಜನಪದ ಅಧ್ಯಯನದ ಆಸಕ್ತಿ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

'ಜಾನಪದ ಸಂಚಯ' ಜಾನಪದ ಸಂಪದ 'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ' 'ಜಾನಪದ ಕೆಲವು ಗ್ರಹಿಕೆಗಳು' ಎಂಬ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಪ್ರೊ. ಡಿ.ಕೆ.ರಾಜೇಂದ್ರ ಅವರು ಮೂಲ ಕನ್ನಡ ಜನಪದ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ನೀಡಿದ್ದಾರೆ. ಡಿ.ಕೆ.ರಾಜೇಂದ್ರರವರು ತಮ್ಮ ಕೃತಿಗಳಿಂದ ಆರಂಭಿಸಿದ ಕೆಲಸಕಾರ್ಯಗಳಿಂದ ಮುಂದಿನ ಅನೇಕ ಯುವ ವಿದ್ವಾಂಸರಿಗೆ ಪ್ರೇರಣೆಯಾಯಿತು ಹಾಗೂ ಇಂತಹ ವಿಷಯಗಳ ಮೇಲೆ ಇನ್ನೂ ಹೆಚ್ಚು ಹೆಚ್ಚು ಅಧ್ಯಯನವಾಗಲು ಪ್ರೇರಣೆಯಾಯಿತು. 'ದಕ್ಷಿಣ ಕರ್ನಾಟಕ ಜಾನಪದ ರಂಗಭೂಮಿ' ಎಂಬ ಗ್ರಂಥವು ಕನ್ನಡ ಜಾನಪದ ಸಾಹಿತ್ಯಕ್ಕೆ ಒಂದು ನೆಲೆಗಟ್ಟನ್ನು ಒದಗಿಸಿಕೊಡುವ ಪ್ರಾರಂಭದ ಮೆಟ್ಟಿಲುಗಳಂತಿದ್ದರೂ ಗದ್ದಗಿಮಠ ಎಚ್.ಎಲ್.ನಾಗೇಗೌಡ, ಹಲಸಂಗಿ ಗೆಳೆಯರು, ಸಿಂಪಿಲಿಂಗಣ್ಣ, ಜೀಶಂಪ, ಹಾಮಾನಾ, ಕ್ಯಾತನಹಳ್ಳಿ ರಾಮಣ್ಣ, ಮಾಸ್ತಿ

ಇಂತಹ ಜಾನಪದ ವಿದ್ವಾಂಸರಿಂದ ಜನಪದ ಸಾಹಿತ್ಯ ಉತ್ಕೃಷ್ಟತೆಯನ್ನು ಪಡೆದಿದೆ. ನಮ್ಮ ಸುತ್ತಮುತ್ತಲಿನ ಎಲೆಮರೆಕಾಯಂತಿರುವ ಕೋಲಾಟದ ಪದಗಳು, ರಾಗಿಕಲ್ಲಿನ ಪದಗಳು ಗರಡಿಪದಗಳು, ಮಳೆರಾಯನ ಪದಗಳು, ಶೋಭಾನೆ ಪದಗಳು, ಮಾನಾಮಿ ಪದಗಳು ಇಂತಹ ಅನೇಕ ಜನಪದ ವಲಯಗಳಲ್ಲಿ ಸಂಗ್ರಹಕಾರ್ಯ ನಡೆಯಬೇಕಾಗಿರುವ ಅಗತ್ಯತೆಯನ್ನು ಡಿ.ಕೆ.ರಾಜೇಂದ್ರ ಅವರ ಜಾನಪದ ಸಾಹಿತ್ಯ ಪ್ರತಿಬಿಂಬಿಸುತ್ತದೆ.

ಅಲ್ಲದೆ ಬದಲಾಗುತ್ತಿರುವ ಮಾನವನ ವೇಷಭೂಷಣ, ಆಹಾರಪದ್ಧತಿ, ವೈವಾಹಿಕ ಜೀವನ ಇಂತಹವುಗಳ ಮೇಲೂ ಜನಪದ ಕೆಲಸಕಾರ್ಯಗಳಾಗಬೇಕಾಗಿದೆ. ಹೀಗೆ ಒಂದು ಸೀಮಿತ ಚೌಕಟ್ಟಿನಲ್ಲಿ ಮೇಲಿನ ಎಲ್ಲಾ ವಿಷಯಗಳನ್ನು 'ಜಾನಪದ ಅಧ್ಯಯನಕ್ಕೆ ಡಿ.ಕೆ.ರಾಜೇಂದ್ರರವರ ಕೊಡುಗೆ' ಎಂಬ ನಿಬಂಧದಲ್ಲಿ ಶೋಧಿಸಲು ಪ್ರಯತ್ನಿಸಲಾಗಿದೆ. ಡಿ.ಕೆ.ರಾಜೇಂದ್ರರವರು ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ ಎಂಬ ಉದ್ಗ್ರಂಥದಿಂದ ಆರಂಭಿಸಿ ಸಾಹಿತ್ಯಾತ್ಮಕ ಚಟುವಟಿಕೆಗಳು ಮುಂದೆ ಹೊಸ ದಾರಿಗೆ ನಾಂದಿಯಾಯಿತು. ಈ ಮೂಲಕ ಕನ್ನಡ ಜನಪದ ಸಾಹಿತ್ಯ ಕ್ಷೇತ್ರವನ್ನು ಹೊಸ-ಹೊಸ ವಿಚಾರಧಾರೆಗಳಿಂದ ನೋಡುವ ವ್ಯಾಖ್ಯಾನಿಸುವ ಪ್ರಯತ್ನಗಳು ಪ್ರಾರಂಭವಾಗಿವೆ.

*****

ಪರಾಮರ್ಶನ ಗ್ರಂಥಗಳು

೧. **ಬೆಟಗೇರಿ ಕೃಷ್ಣಶರ್ಮ,** ***ನಮ್ಮ ಸಂಸ್ಕೃತಿಯ ಪರಂಪರೆ,*** ಭಾರತೀಯ ಹಬ್ಬಗಳು, ಸಮಾಜ ಪುಸ್ತಕಾಲಯ, ೧೯೬೯, ಧಾರವಾಡ.

೨. **ಡಾ. ಕೆ.ಜಿ. ಗುರುಮೂರ್ತಿ,** ***ಜಾನಪದ ಸಮಾಜ ಮತ್ತು ಸಂಸ್ಕೃತಿ,*** ಕಾರ್ತಿಕ್ ಎಂಟರ್‌ಪ್ರೈಸಸ್, ನಂ. ೧೧೪, ೪ನೇ ಅಡ್ಡರಸ್ತೆ, ಬಿ.ಬಿ.ಸಿ. ಬಡಾವಣೆ, ಅತ್ತಿಗುಪ್ಪೆ, ವಿಜಯನಗರ ೨ನೇ ಹಂತ, ಬೆಂಗಳೂರು.

೩. **ಪ್ರೊ. ದೇಜಗೌ** ಅವರ ಜಾನಪದ ಮಹಾಸಂಪುಟ, ಪ್ರಥಮ ಮುದ್ರಣ, ೨೦೧೦, ಬೆಳಕೆರೆ ಪ್ರಕಾಶನ, ಜಯಲಕ್ಷ್ಮೀಪುರಂ, ಮೈಸೂರು.

೪. **ಪ್ರೊ. ಡಿ.ಕೆ. ರಾಜೇಂದ್ರ,** ***ಜಾನಪದ ಸಂಚಯ,*** ತಾ.ವೆಂ. ಸ್ಮಾರಕ ಗ್ರಂಥಮಾಲೆ, ೧೯೭

೫. **ಪ್ರೊ. ಡಿ.ಕೆ. ರಾಜೇಂದ್ರ,** ***ಜಾನಪದ ಕೆಲವು ಗ್ರಹಿಕೆಗಳು,*** **ಚೇತನ ಬುಕ್ ಹೌಸ್,** ೧೯೯೬, ಮೈಸೂರು.

೬. **ಪ್ರೊ. ಡಿ.ಕೆ. ರಾಜೇಂದ್ರ,** ***ಜಾನಪದ ಸಂಪದ,*** ತಗಳವಾದಿ ಪ್ರಕಾಶನ, ೧೯೮೨, ಗದಗ.

೭. **ಪ್ರೊ. ಡಿ.ಕೆ. ರಾಜೇಂದ್ರ,** ***ಚಿಂತನಾ ಚಿತ್ತಾರ,*** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, **೨೦೧೪,** ಮೈಸೂರು.

೮. **ಪ್ರೊ. ಡಿ.ಕೆ. ರಾಜೇಂದ್ರ,** ***ನಸುನಗೆಯ ಅಲೆಗಳು,*** ದಾಮಿನಿ ಸಾಹಿತ್ಯ, **೨೦೦೮,** ಬೆಂಗಳೂರು.

೯. **ಪ್ರೊ. ಡಿ.ಕೆ. ರಾಜೇಂದ್ರ,** ***ದಕ್ಷಿಣ ಕರ್ನಾಟಕದ ಜಾನಪದ ರಂಗಭೂಮಿ,*** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೮೦–೨೦೧೧, ಮೈಸೂರು.

೧೦. **ಪ್ರೊ. ಡಿ.ಕೆ. ರಾಜೇಂದ್ರ,** ***ಹೊನ್ನ ಹೊಂಬಾಳೆ,*** ಡಿ.ಕೆ.ರಾಜೇಂದ್ರ ಅಭಿನಂದನಾ ಸಮಿತಿ, **೨೦೦೨,** ಮೈಸೂರು–ತುಮಕೂರು.

೧೧. **ಡಾ. ವೀರಣ್ಣ ದಂಡೆ,** ***ದೇಸಿ –೩,*** ಭಾಗ್ಯಶ್ರೀ ಎಂಟರ್‌ಪ್ರೈಸಸ್,ನಂ ೫೫೫, ೯ನೇ ಮುಖ್ಯರಸ್ತೆ, ವಿಜಯನಗರ ೨ನೇ ಹಂತ, ಬೆಂಗಳೂರು .

೧೨. **ಡಾ. ತೀ.ನಂ.ಶಂಕರನಾರಾಯಣ,** ***ಜಾನಪದ ಸಮೀಕ್ಷೆ – ವಿಶ್ಲೇಷಣೆ,*** ಪ್ರಿಯದರ್ಶಿ ಪ್ರಕಾಶನ ನಂ. ೧೩೮, ೭ನೇ ಸಿ. ಮುಖ್ಯರಸ್ತೆ, ಹಂಪಿನಗರ, ವಿಜಯನಗರ, ೨ನೇ ಹಂತ, ಬೆಂಗಳೂರು ೫೬೦ ೧೦೪.

೧೩. **ಶಿವರಾಮ ಕಾರಂತ,** ***ಜನಪದ ಗೀತೆಗಳು*** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೬೧, ಮೈಸೂರು.

೧೪. **ಸಿದ್ದರಾಮಯ್ಯ ಎಸ್.ಜಿ.,** ***ಜಾನಪದ ಕೆಲವು ಟಿಪ್ಪಣಿಗಳು,*** ೧೯೭೭.

೧೫. **ಡಾ. ಸಿದ್ದಲಿಂಗಯ್ಯ,** ***ಗ್ರಾಮದೇವತೆಗಳು,*** ೨೦೦೯.

೧೬. ಎಂ.ಎಸ್.ಸುಂಕಾಪುರ, *ಜಾನಪದ ಸಾಹಿತ್ಯದರ್ಶನ* ಕರ್ನಾಟಕ ವಿಶ್ವವಿದ್ಯಾಲಯ, ೧೯೮೯, ಧಾರವಾಡ.
